# ಪುಸ್ತಕ ಪ್ರಪಂಚ

ಆಗಸ್ಟ್-೧೯೯೬



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

# ಪುಸ್ತಕ ಪ್ರಪಂಚ

## ಮಾಸಿಕ

ಸಂಪುಟ ೪೭ ಸಂಚಿಕೆ ೧೧

ಆಗಸ್ಟ್-೧೯೯೭



## ಪರಿವಿಡಿ

PUSTAKA PRAPANCHA: Monthly

Published and printed by Karnataka State Adult Education Council, Mysore-6. Price : Rupees Six

ಬಿಡಿಪ್ರತಿ: ರೂ. ೬

ವಾರ್ಷಿಕ ಚಂದಾ : ರೂ. ೬೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ: ರೂ. ೪೦೦

ಸಂಸ್ಥೆಗೆ: ರೂ. ೬೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-೫೭೦ ೦೦೬

# ಸ್ವಾತಂತ್ರ್ಯ ಚಿರಾಯುವಾಗಲಿ

ಇನ್ನೊಂದು ವರ್ಷ ಕಳೆದರೆ, ದೇಶಕ್ಕೆ ಸ್ವಾತಂತ್ರ್ಯ ಬಂದು ಅರ್ಧಶತಮಾನವಾಗುತ್ತದೆ. ಈ ಅವಧಿಯಲ್ಲಿ ರಾಷ್ಟ್ರಕ್ಕೆ ನಾನಾ ಲಾಭಗಳಾಗಿವೆ ಎಂಬುದರಲ್ಲಿ ಅನುಮಾನವಿಲ್ಲ. ಮೊದಲನೆಯದಾಗಿ ದಾಸ್ಯವೆಂಬ ಅಪಪ್ರಥೆಯಿಂದ ದೇಶ ವಿಮೋಚನೆಗೊಂಡು, ಭೌತಿಕ ಮಾತ್ರವಲ್ಲ ಸಾಂಸ್ಕೃತಿಕ ಗುಲಾಮಗಿರಿಯಿಂದ ಪಾರಾಗಿ, ಜಗತ್ತಿನ ಇತರ ರಾಷ್ಟ್ರಗಳೊಡನೆ ಹೆಗಲೆಣೆಯಾಗಿ ಮೆರೆಯುವಂತಾಗಿದೆ. ಎರಡನೆಯದಾಗಿ, ದೇಶದಲ್ಲಿ ಹಿಂದೆ ಕಾಣದ ಅಭಿವೃದ್ಧಿ ಕಾರ್ಯಗಳು ನಿರಂತರವಾಗಿ ಸಾಗುತ್ತಿವೆ. ಭಾಕ್ರಾ-ನಂಗಲ್ ಅಂಥ ಭಾರಿ ಅಣೆಕಟ್ಟುಗಳು ಲಕ್ಷಾಂತರ ಎಕರೆ ಭೂಮಿಗೆ ನೀರುಣಿಸುತ್ತಿವೆ; ಮಿಲಿಯಾಂತರ ಅಶ್ವಶಕ್ತಿಯ ವಿದ್ಯುತ್ತನ್ನು ಉತ್ಪಾದಿಸುತ್ತಿವೆ. ರೈಲು ಎಂಜಿನ್ ತಯಾರಿಕೆಯಂಥ ಬೃಹತ್ ಪ್ರಮಾಣದ ಕೈಗಾರಿಕೆಗಳು ಆಮದು ರೂಪದಲ್ಲಿ ವಿದೇಶಕ್ಕೆ ಹರಿದು ಹೋಗುತ್ತಿದ್ದ ಹಣವನ್ನು ಉಳಿಸಿವೆ. ಅಮೆರಿಕೆಯಂಥ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಮೆಚ್ಚರಿಸುವಂಥ ಪ್ರಮಾಣದಲ್ಲಿ ವೈಜ್ಞಾನಿಕ ಸಿದ್ಧಿಗಳು ಕೈಗೂಡಿವೆ. ಶೇಕಡ ನಲವತ್ತು ಭಾಗ ನಿರಕ್ಷರತೆಯಿದ್ದರೂ, ಶೈಕ್ಷಣಿಕ ಕ್ಷೇತ್ರದಲ್ಲಿ ಅಪಾರ ಸಾಧನೆಯಾಗಿದೆ ಎಂದೇ ಹೇಳಬಹುದು. ಪ್ರಾಥಮಿಕ ಶಾಲೆಯಿಲ್ಲದ ಹಳ್ಳಿಯಿಲ್ಲ; ಪ್ರೌಢಶಾಲೆಯಿಲ್ಲದ ಹೋಬಳಿ ಕೇಂದ್ರವಿಲ್ಲ; ಕಾಲೇಜಿಲ್ಲದ ತಾಲ್ಲೂಕು ಕೇಂದ್ರಗಳು ಕಡಿಮೆ; ಇನ್ನೂರಕ್ಕೂ ಮೀರಿ ವಿಶ್ವವಿದ್ಯಾನಿಲಯಗಳು ಸಂಸ್ಥಾಪನೆಗೊಂಡಿವೆ. ಎಂಥ ಉನ್ನತ ಶಿಕ್ಷಣಕ್ಕಾದರೂ ನಮ್ಮ ವಿದ್ಯಾರ್ಥಿಗಳು ವಿದೇಶಗಳಿಗೆ ಹೋಗಬೇಕಾದ ಪ್ರಮೇಯವಿಲ್ಲ. ಐವತ್ತು ವರ್ಷಗಳ ಹಿಂದೆ ನೋಡಿದ್ದ ಹಳ್ಳಿಗೆ ಹೋದವನು ವಿಸ್ಮಯ ಪಡುವಷ್ಟು ಪ್ರಗತಿಯನ್ನು ಕಾಣಬಹುದಾಗಿದೆ. ಮೂರನೆಯದಾಗಿ, ಜಾತೀಯತೆ ಮತೀಯತೆ ಹಿಂದಿಗಿಂತ ಅಸಹ್ಯ ಪ್ರಮಾಣದಲ್ಲಿ ಉಲ್ಬಣಿಸುತ್ತಿದ್ದರೂ, ಅಲ್ಪಸಂಖ್ಯಾತರು, ದಲಿತರು ಮತ್ತು ಹಿಂದುಳಿದವರು ಜಾಗೃತರಾಗಿ, ತಮ್ಮ ಹಕ್ಕುಗಳನ್ನರಿತುಕೊಂಡು, ಸವಲತ್ತು ಸೌಕರ್ಯಗಳನ್ನು ಗಿಟ್ಟಿಸಿಕೊಳ್ಳುವ ಅವಕಾಶಗಳನ್ನು ಸೃಷ್ಟಿಸಿಕೊಳ್ಳುತ್ತಿದ್ದಾರೆ. ನಾಲ್ಕನೆಯದಾಗಿ, ಶೇಕಡ ನಲವತ್ತೈದು ಜನ ಬಡತನದ ರೇಖೆಯ ಕೆಳಗಿದ್ದರೂ, ಬಡವರ ಮತ್ತು ಸಿರಿವಂತರ ನಡುವಣ ಅಂತರ ದಿನೇ ದಿನೇ ಅಧಿಕವಾಗುತ್ತಿದ್ದರೂ, ಒಟ್ಟಿನಲ್ಲಿ ಜೀವನದ ಮಟ್ಟ, ಆಯುಃಪ್ರಮಾಣ, ಬೌದ್ಧಿಕ ಮತ್ತು ಸಾಂಸ್ಕೃತಿಕ ಅಂತಸ್ತು ಪ್ರವರ್ಧಮಾನ ಸ್ಥಿತಿಯಲ್ಲಿವೆ ಎಂಬುದೂ ಗಮನಿಸಬೇಕಾದ ಅಂಶ.

ಇದು ನಮ್ಮ ರಾಷ್ಟ್ರದ ಇಂದಿನ ಪರಿಸ್ಥಿತಿಯ ಬೆಳಕಿನ ಬದಿಯಾದರೂ, ಕತ್ತಲೆಯ ಬದಿ ಭಯಂಕರವಾಗಿದೆ. ಕ್ರಿಸ್ತಪೂರ್ವ ಕಾಲದಿಂದ ವಿದೇಶೀಯರು ಭರತಖಂಡವನ್ನು ಆಕ್ರಮಿಸಿಕೊಂಡದ್ದಕ್ಕೆ ಏನು ಕಾರಣಗಳಿದ್ದವೋ ಅವುಗಳ ಜತೆಗೆ ಸಹಸ್ರಾಂಶ ಕ್ರೂರತರವಾದ, ಸಹಸ್ರ ಫಣಿ ಪೈಶಾಚಿಕ ಕಾರಣಗಳೂ ಸೇರಿಕೊಂಡು ದೇಶವನ್ನು ದುರ್ಬಲಗೊಳಿಸುತ್ತಿವೆ; ಹಿಂಡಿ ಹಿಪ್ಪೆ ಮಾಡುತ್ತಿವೆ. ಮೂರ್ನಾಲ್ಕು ಸಾವಿರ ವರ್ಷಗಳಿಂದ

ಬುದ್ಧಿ ಜೀವಿಗಳು, ಪುರೋಹಿತರು ಮತ್ತು ಪೌರಾಣಿಕರು ದೇವರು ಧರ್ಮಗಳ ಹೆಸರಿನಲ್ಲಿ ಸೃಷ್ಟಿಸಿ, ಮಂತ್ರಿಸಿ ದೇಶದ ಮೇಲೆಲ್ಲ ಹರಿಯ ಬಿಟ್ಟಿರುವ ಮೌಢ್ಯ ಸಂಪ್ರದಾಯಗಳು, ಸಮಾಜಘಾತಕ ವಿಚ್ಛಿದ್ರಕಾರಕ ವಿಕಾರ ಸಾಹಿತ್ಯ, ನಿಸರ್ಗ ಸಹಜವಲ್ಲದ, ವಿಕಲ್ಪಮತಿಜನ್ಯ ಜಾತೀಯತೆ ಮತೀಯತೆಗಳು; ರಾಜಕೀಯ ಮಹತ್ವಾಕಾಂಕ್ಷೆಯ ಕೇಡಿ ಜನ ಸೃಷ್ಟಿಸುವ ಅಂತಃಕಲಹಗಳು; ರಾಜಕೀಯವೂ ಒಂದು ಜೀವನಮಾರ್ಗವೆಂದು ಬಗೆದು, ಅರ್ಹತಾ ನಿರಪೇಕ್ಷವಾದ ಆ ಕ್ಷೇತ್ರವನ್ನು ಹೊಕ್ಕು ಓದು ಬರಹಗಳ ಹಗೆಗಳೂ, ತತ್ತ್ವರಹಿತರೂ, ಚಿಂತನ ಶೂನ್ಯರೂ, ಅನುಭವವೀತರೂ, ರಾಷ್ಟ್ರಾಭಿಮಾನ ತ್ಯಕ್ತರೂ, ಆಸೆಬುರುಕರೂ ಆದ ಕುತಂತ್ರಿಗಳು ದಿನಬೆಳಗಾದರೆ ಸ್ವಹಿತಕ್ಕಾಗಿ ಕಟ್ಟಿಕೊಳ್ಳುವ ಪಕ್ಷಗಳು; ಇವೆಲ್ಲಕ್ಕಿಂತ ಮಿಗಿಲಾಗಿ ಕ್ಷಣಕ್ಷಣಕ್ಕೂ ವಿಷವನ್ನು ಕಾರುತ್ತಿರುವ ನಿರಂಕುಶ ಭ್ರಷ್ಟಾಚಾರದ ನೂರಾರು ಅವತಾರಗಳು—ಇವು ದೇಶವನ್ನು ಗಳಿಗೆಗಳಿಗೆಗೂ ವಿನಾಶದಂಚಿಗೆ ನೂಕುತ್ತಿವೆ.

ಈ ದೇಶದಲ್ಲಿ ವಿಜ್ಞಾನದ ಜತೆ ಜತೆಗೆ, ಅದನ್ನೂ ಮೀರಿಸಿ ಮೌಢ್ಯ ರೂಪದ ಅಜ್ಞಾನ ವರ್ಧಿಸುತ್ತಿದೆ; ವಿಜ್ಞಾನಿಗಳು ಅಶಿಕ್ಷಿತ ಅಜ್ಞಾನಿಗಳಂತೆ ವರ್ತಿಸುತ್ತಿದ್ದಾರೆ. ರಾಜಶಾಹಿ ಕಣ್ಮರೆಯಾದರೂ ಪುರೋಹಿತಶಾಹಿ ಜ್ಯೋತಿಷ ಸನ್ಯಾಸ ದೇವಡಿಗತನ ಮಂತ್ರ ಮಾಟ ಮತೀಯತೆ ಮಂದಿರ ಮಸೀದಿ ಚರ್ಚು ಗುರುದ್ವಾರಗಳ ರೂಪದಲ್ಲಿ ಪೈಶಾಚಿಕ ನಗ್ನನೃತ್ಯದಲ್ಲಿ ತೊಡಗಿವೆ. ಆಹಾರ ಸಮೃದ್ಧಿಯ ಜತೆಗೆ ಹಸಿವು ಸಾವುಗಳು ಹೆಚ್ಚುತ್ತಿವೆ. ಬೃಹತ್ ಪ್ರಮಾಣದ ಕೈಗಾರಿಕೆಗಳು ಬೆಳೆಯುತ್ತಿದ್ದರೂ, ನಿರುದ್ಯೋಗ ಸಮಸ್ಯೆ ಯುವಕರನ್ನು ನಿರಾಶೆಯ ನರಕಕ್ಕೆ ನೂಕುತ್ತಿದೆ. ಪೋಲೀಸು ಪಡೆ ದೊಡ್ಡದಾಗುತ್ತಿದ್ದಂತೆ ಅಪರಾಧಗಳ ಸಂಖ್ಯೆ ಮುಗಿಲು ಮುಟ್ಟುತ್ತಿದೆ. ಮಂತ್ರಿಗಳ ಅಧಿಕಾರಿಗಳ ಸಂಖ್ಯೆ ಆಂಜನೇಯ ಲಾಂಗೂಲವಾಗುತ್ತಿದ್ದಂತೆ ಸರ್ಕಾರದ ಅದಕ್ಷತೆ ಶತಾಧಿಕ ಪ್ರಮಾಣದಲ್ಲಿ ಮಸಗುತ್ತಿವೆ. ಆರ್ಥಿಕ ನೀತಿಯಿಂದಾಗಿ ಬೆಲೆಗಳು ಗಗನಕ್ಕೇರುತ್ತಿವೆ, ಗರೀಬರ ಗರೀಬತನ ಮಿತಿಮೀರಿ ಹೆಚ್ಚುತ್ತಿದ್ದಂತೆ ಸಿರಿವಂತರ ಸಿರಿವಂತಿಕೆ ಅಸೀಮವಾಗಿ ಹಿಗ್ಗುತ್ತಿದೆ. ಭ್ರಷ್ಟಾಚಾರದ ಕದಂಬ ಮುಷ್ಟಿಗೆ ಸಿಕ್ಕಿ ದೇಶಕ್ಕೆ ಉಸಿರುಕಟ್ಟಿದಂತಾಗಿದೆ. ಭಾರತ ಸೆಕ್ಯುಲರ್ ರಾಷ್ಟ್ರವೆಂದು ರಾಜ್ಯಾಂಗದಲ್ಲಿ ಬರೆದುಕೊಂಡಿದ್ದರೂ ಜಾತಿ ಮತಗಳ ಆಧಾರದ ಮೇಲೆ ಚುನಾವಣೆ ನಡೆಯುತ್ತಿವೆ, ಸರ್ಕಾರ ಸಾಗುತ್ತಿದೆ. ರಾಜಕೀಯ ಕ್ಷೇತ್ರ ಪೋಲಿದನಗಳ ಮೇಹುಗಾಡಾಗಿದೆ; ಅಲ್ಲಿ ಸಭ್ಯತೆಗಾಗಲಿ, ವಿದ್ವತ್ತಿಗಾಗಲಿ, ಪ್ರತಿಭಾವಂತಿಕೆಗಾಗಲಿ ಜಾಗವಿಲ್ಲ.

ಕಳೆದ ಒಂದು ವರ್ಷದಿಂದೀಚೆಗೆ ವರಿಷ್ಠ ನ್ಯಾಯಾಲಯ ಮತ್ತು ಚುನಾವಣಾ ಆಯೋಗ ತಮ್ಮ ಆಲಸ್ಯವನ್ನೂ ನಪುಂಸಕತನವನ್ನೂ ಕೊಡವಿ, ಜಾಗೃತವಾಗಲಾಗಿ ಭ್ರಷ್ಟಾಚಾರದ ವಿವಿಧ ವೇಷಗಳು ಬೆಳಕಿಗೆ ಬರುತ್ತಿವೆ. ಈ ದೇಶದಲ್ಲಿ ಭ್ರಷ್ಟಾಚಾರ ಪ್ರಬಲವಾಗಿ ಬೆಳೆದದ್ದಕ್ಕೆ ಪಕ್ಷವ್ಯವಸ್ಥೆಯ ರಾಜಕೀಯವೇ ಪ್ರಮುಖ ಕಾರಣ. ಸ್ವಾತಂತ್ರ್ಯಾನಂತರದ ಮೊದಲ ತಲೆಮಾರಿನ ನಾಯಕರು ನೆಹರೂ ಪಟೇಲ್ ಮುಂತಾದವರು ಭ್ರಷ್ಟಾಚಾರದೂರರೆಂದು ಜನಮನಸ್ಸು ನಂಬಿದ್ದರೂ,

ಎಸ್. ಕೆ. ಪಾಟೀಲ್ ಅತುಲ್ಯಘೋಷರಂತವರು ಪಕ್ಷಕ್ಕೆ ಹಣ ಕೂಡಿಸುವಲ್ಲಿ ನಿಸ್ಸೀಮರಾಗಿದ್ದರು. ಕೊಟ್ಟವರು ಧರ್ಮಿಷ್ಠರೇನಲ್ಲ. ಸರ್ಕಾರದಿಂದ ಅಸಮ ಪ್ರಮಾಣದ ಲಾಭ ಪಡೆದು, ದೇಶವನ್ನು ಲೂಟಿ ಮಾಡುವುದೇ ಅವರ ಉದ್ದೇಶವಾಗಿತ್ತು. ಆಗ ವಿದ್ಯೆಯಿಲ್ಲದ ಜನ ಹುಟ್ಟು ಕುರುಡರಂತಿದ್ದುದರಿಂದ ಧನಸಂಗ್ರಹ ಕಾರ್ಯ ಕಂಡೂ ಕಾಣದಂತೆ ನಡೆಯುತ್ತಿತ್ತು. ಈಗಿನಂತೆ ಸಮೂಹ ಮಾಧ್ಯಮಗಳು ಚುರುಕಾಗಿರಲಿಲ್ಲ, ವ್ಯಾಪಕವಾಗಿರಲಿಲ್ಲ. ಮುಂಧ್ರ ವ್ಯವಹಾರ ಮತ್ತು ಟಿ. ಟಿ. ಕೃಷ್ಣಮಾಚಾರಿಯವರ ರಾಜೀನಾಮೆಯ ಪ್ರಕರಣ ಪ್ರಾಯಶಃ ಈಗ ಜನರ ನೆನಪಿನಲ್ಲಿ ಉಳಿದಿರಲಾರದು.

೧೯೬೯ರಲ್ಲಿ ಕಾಂಗ್ರೆಸ್ ಇಬ್ಭಾಗವಾದನಂತರ ದೇಶದ ಆಡಳಿತ ಮತ್ತು ಧನ ಸಂಗ್ರಹಕಾರ್ಯಗಳೆರಡೂ ಪ್ರಧಾನಿಯ ಕೈಯಲ್ಲಿಯೇ ಕೇಂದ್ರೀಕರಣಗೊಳ್ಳುತ್ತವೆ; ಅವರೇ ನಿಗ್ರಹಾನುಗ್ರಹ ಶಕ್ತಿಯುಳ್ಳ ಏಕಮಾತ್ರ ಅಮ್ಮನಾಗುತ್ತಾರೆ; ಅವರನ್ನು ನಿಗ್ರಹಿಸುವ ಅದ್ವಿತೀಯ ಶಕ್ತಿ ಇದ್ದುದ್ದು ಆಗ ಅವರ ದ್ವಿತೀಯ ಪುತ್ರನಿಗೆ ಮಾತ್ರ; ಅವರು ರಾಜ್ಯಾಂಗಾತೀತ ಪ್ರಧಾನಿ. ವಾಣಿಜ್ಯ ನಿಲಯಗಳು ಹಾಗೂ ಕೈಗಾರಿಕಾ ಚಕ್ರವರ್ತಿಗಳು ಅವರಿಗೆ ನೇರವಾಗಿ ಬಲಿ ನೈವೇದ್ಯ ಸಲ್ಲಿಸುತ್ತಾರೆ. ಆಡಳಿತಾಧಿಕಾರ, ಶಾಸನಾಧಿಕಾರ ಹಾಗೂ ದ್ರವ್ಯಾಧಿಕಾರಗಳು ಒಂದು ಕೈಯಲ್ಲೇ ಕೇಂದ್ರೀಕರಣಗೊಂಡಾಗ, ನಿರಂಕುಶಾಧಿಕಾರ ಸರ್ವತ್ರ ತಾಂಡವವಾಡುತ್ತದೆ; ಅಧಿಕಾರಶಾಹಿ ಅದಕ್ಕೆ ಸಾಮಿಲಾಗುತ್ತದೆ, ಮಂತ್ರಿಗಳು ಗುಲಾಮಿಭಾವದಿಂದ ಹಲ್ಲುಗಿಂಜುತ್ತಾರೆ. ಎಂಬತ್ತರ ದಶಕದಲ್ಲಿ ಪ್ರಧಾನಿಯವರ ಧನಸಂಗ್ರಹ ಕಾರ್ಯ ಹೊಸ ವಿಧಾನವನ್ನನುಸರಿಸುತ್ತದೆ; ಆ ವಿಧಾನವನ್ನೇ ಮುಂದಿನ ಪ್ರಧಾನಿ ಮುಖ್ಯ ಮಂತ್ರಿಗಳಿಗೂ ಕಲಿಸುತ್ತಾರೆ; ಭ್ರಷ್ಟಾಚಾರಿಗಳ ಪರಮಾಚಾರ್ಯರಾಗುತ್ತಾರೆ. ಆ ತನಕ ನಡೆಯುತ್ತಿದ್ದ ಖಾಸಗಿ ವ್ಯವಹಾರವನ್ನು ಬಿಟ್ಟು ಸರ್ಕಾರದ ವ್ಯಾಪಾರೀ ವಹಿವಾಟಿನ ಮೂಲಕ, ನಿಗೂಢ ವ್ಯವಹಾರಗಳ ಮೂಲಕ, ಭಾರಿ ಪ್ರಮಾಣದಲ್ಲಿ ಲಂಚವನ್ನು ಪಡೆಯುವ ಮಾರ್ಗವನ್ನು ಪ್ರಧಾನಿ ಕಂಡುಕೊಳ್ಳುತ್ತಾರೆ. ಈ ಮಾರ್ಗ ಅವರು ದೇಶಕ್ಕೆ ಕೊಟ್ಟ ದೊಡ್ಡ ಕೊಡುಗೆ. ಈ ಗುಟ್ಟು ಬಯಲಾಗುವ ತನಕ ಅಮ್ಮನಂಥ ಅಪ್ರತಿಮ ಅಗಮ್ಯ ನಿರಂಜನ ಪ್ರಭು ಇಲ್ಲವೆಂದೇ ಜನ ಬಗೆಯುತ್ತಾರೆ. ಅಮ್ಮ ಕಲಿಸಿಕೊಟ್ಟ ಪಾಠವನ್ನು ಮಗ ಚಾಚೂ ತಪ್ಪದೆ ತ್ರಿಕರಣ ಶುದ್ಧಿಯಾಗಿ ಅನುಸರಿಸಿ, ದೇಶೋವಿಶಾಲವಾದ ಕೀರ್ತಿಯನ್ನು ಗಳಿಸಿ, ಭಾರತೀಯರ ಕಣ್ಮಣಿಯಾಗಿದ್ದಾರೆ. ಈ ಹೊತ್ತಿಗೂ ಪೂಜ್ಯರಾಗಿದ್ದಾರೆ. ಅವರಿಂದ ಪ್ರಾರಂಭವಾದ ಜರ್ಮನಿಯ ಸಬ್‌ಮೆರೀನ್ ಮತ್ತು ಬೋಫರ್ಸ್ ಹಗರಣಗಳು ಭಾರತೀಯ ಇತಿಹಾಸದಲ್ಲಿ ಪ್ರಜ್ವಲಿಸುವ ಧೂಮ ಜ್ವಾಲೆಗಳಾಗಿವೆ. ಎಲ್ಲ ಮುಖ್ಯ ಮಂತ್ರಿಗಳಿಗೂ ಅವರು ಆದರ್ಶದ ಆರಾಧನೆಯ ಮೂರ್ತಿಗಳಾಗಿದ್ದಾರೆ. ಶುದ್ಧ ಹಸ್ತರೆಂದು, ದಕ್ಷರೆಂದು, ಅಸಮಸಮರ್ಥರೆಂದು ಪ್ರಸಿದ್ಧಿಯಾದ ಜ್ಯೋತಿಬಸು ಅವರ ಮಗ ಚಂದನರ ಪರಿಮಳವೇ ದೇಶದಲ್ಲೆಲ್ಲ ಗಮಗಮಿಸುವಾಗ ಉಳಿದವರ ಪಾಡೇನು?

ಅಮ್ಮ ಮತ್ತು ಅಮ್ಮನ ಮಗನನಂತರ ಬಂದ ರಾಯರ ಕಡೆಗೂ ನ್ಯಾಯಾಲಯಗಳ ಮತ್ತು ಜನರ ಕೃಪಾದೃಷ್ಟಿ ಈಗೀಗ ಹರಿಯುತ್ತಿದೆ. ಇಂಡಿಯಾ ದೇಶದ ಭ್ರಷ್ಟಾ

ಚಾರದ ಇತಿಹಾಸದಲ್ಲಿ ಬೋಫರ್ಸ್ ವ್ಯವಹಾರಕ್ಕೆ ವಿಶಿಷ್ಟ ಸ್ಥಾನವಿದೆ. ಅದರಲ್ಲಿ ರಾಯರ ಪಾತ್ರವಿತ್ತೆನ್ನುವುದು ಜಗಜ್ಜಾಹೀರಾದ ಸಂಗತಿ. ಇಂಡಿಯಾದ ಒಳವ್ಯವಹಾರಗಳಲ್ಲಿ ವಿದೇಶೀಯ ಕಂಪೆನಿಗಳು ಪರೋಕ್ಷವಾಗಿ ತಲೆಹಾಕಲು ಅವ್ಯವಹಾರ ಅನುವುಮಾಡಿ ಕೊಟ್ಟಿದೆ. ಇಟಾಲಿಯಾದ ದಳ್ಳಾಳಿ ಸ್ನಮ್ ಪ್ರಗೆಟಿ ಅವರು ರಾಜೀವಗಾಂಧಿಯವರ ಮೇಲೆ ಅದಮ್ಯ ಪ್ರಭಾವ ಬೀರುತ್ತಿದ್ದರೆಂದು ಹೇಳಲಾಗಿದೆ. ಅವರಲ್ಲದೆ, ಇನ್ನೂ ಹಲವರು ಇಟಾಲಿಯಾದ ಬಂಧುಗಳ ಮತ್ತು ಆಗಿನ ಪ್ರಧಾನಿಗಳ ನಡುವೆ ಪರಸ್ಪರ ಸಹಾಯ ಸಹಕಾರಗಳು ಗಾಢವಾಗಿದ್ದುವೆಂಬ ಸುದ್ದಿಯೂ ಇದೆ. ರಾಯರ ಮತ್ತು ಚಂದ್ರಸ್ವಾಮಿಯವರ ವ್ಯವಹಾರಗಳು ಯಾರಿಗಾದರೂ ಜುಗುಪ್ಸೆ ಹುಟ್ಟಿಸುವಂಥವು. ಚಂದ್ರಶೇಖರರಂಥ ಇನ್ನು ಹಲವಾರು ದೊಡ್ಡವರೊಡನೆ ಆ ಕಪಟಸ್ವಾಮಿ ಸಂಬಂಧ ಹೊಂದಿದ್ದರೆಂಬ ಸುದ್ದಿ ಆಗಾಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದೆ. ಅವರ ಇತಿಹಾಸ ಗರಿಬಿಚ್ಚಿಕೊಳ್ಳುತ್ತಿರುವಂತೆಯೆ ಜೈನ ಹವಾಲ ಅನೇಕ ದೊಡ್ಡಮನುಷ್ಯರ ಮೇಲೆ ಸಿಡಿಲೆರಗಿದೆ. ವರಿಷ್ಠ ನ್ಯಾಯಾಲಯದ ಜಾಗೃತಿಯಿಂದಾಗಿ ಅನೇಕ ರಾಜ್ಯಪಾಲರ, ಮಂತ್ರಿಗಳ, ಅಧಿಕಾರಿಗಳ ಬಣ್ಣ ಬಯಲಾಗುತ್ತಿದೆ. ಇಂಡಿಯಾ ದೇಶದ ಇತಿಹಾಸದಲ್ಲಿ ಅದೊಂದು ಎಂದೂ ಮರೆಯದ ಮಹದ್ಘಟನೆಯಾಗಿ ಪರಿಣಮಿಸಲಿದೆ. ಅದರೊತ್ತಿನಲ್ಲಿಯೇ ಎಲ್ಲರ ಕಿವಿಯ ಮೇಲೆ ಬಿದ್ದರೂ ಸಾರ್ವಜನಿಕ ಸ್ಮೃತಿಯಿಂದ ಮರೆಯಾಗುತ್ತಿರುವ ಸಕ್ಕರೆ, ಬ್ಯಾಂಕು, ಯೂರಿಯಾ, ಮೇವು ಹಗರಣಗಳು—ಅವಕ್ಕೆ ಕಾರಣರಾದವರು ಸೊಕ್ಕಿನಿಂದ ನಾಚಿಕೆಯಿಲ್ಲದೆ ಮೆರೆಯುತ್ತಿದ್ದರೂ—ಭಾರತೀಯರು ತಲೆತಗ್ಗಿಸುವಂಥವುಗಳಾಗಿವೆ. ನೀರುನೇಣು ನಂಜುಗಳಿದ್ದರೂ ಆ ಚೋರ ಘಟಿಂಗರು ಸರ್ಕಾರದ ಅನುಗ್ರಹದ ಆತಿಥ್ಯಕ್ಕಾಗಿ ಕಾಯುತ್ತಿದ್ದಾರೆ. ಚೀನಾ ಅಮೆರಿಕಾಗಳಲ್ಲಾಗಿದ್ದರೆ ಇಂಥವರು ಕಂಬಿ ಎಣಿಸಬೇಕಾಗುತ್ತಿತ್ತು.

ಇಂಡಿಯಾದ ಎಲ್ಲ ರಾಜಕೀಯ ಪಕ್ಷಗಳ ಹಣೆಬರಹ ಜಾಯಮಾನ ಚಾಳಿ ಚರ್ಯೆಗಳಲ್ಲಿ ಭಿನ್ನತೆಯಿಲ್ಲ, ಎಲ್ಲವೂ ಸಮಾನ ಮನೋಧರ್ಮದವು, ಭಾರತೀಯರು ಎಲ್ಲಿದ್ದರೂ ಒಂದೆ ಎಂಬ ಸತ್ಯ ಹವಾಲಾ ಪ್ರಕರಣದಿಂದ ಮನದಟ್ಟಾಗಿದೆ. ರಾಜಕೀಯವಾಗಿ, ತಾತ್ತ್ವಿಕವಾಗಿ, ಬೌದ್ಧಿಕವಾಗಿ ಪ್ರಬುದ್ಧರಲ್ಲದ, ದೇಶಾಭಿಮಾನರಹಿತರಾದ ಸ್ವಾರ್ಥೈಕ ಪ್ರವೃತ್ತಿಯ ಜನರಿರುವಲ್ಲಿ ಅಂತಃಕಲಹಗಳು, ಅನಾರೋಗ್ಯಕರ ಸ್ಪರ್ಧೆಗಳು, ಛಿದ್ರವಿಚ್ಛಿದ್ರಗಳು, ಅಶಿಸ್ತು ಸ್ವೈರಾಚಾರಗಳು ಮರಿಗೆ ಮರಿಯಿಕ್ಕುತ್ತವೆಂಬುದಕ್ಕೆ ಭಾರತೀಯ ರಾಜಕೀಯ ಪಕ್ಷಗಳೇ ಸಾಕ್ಷಿಯಾಗಿವೆ. ಇಲ್ಲಿಯ ಜನರ ಅಪ್ರಬುದ್ಧತೆ, ಅಪ್ರಾಮಾಣಿಕತೆ, ಬೇನಿಷ್ಠೆಗಳೇ ಬಹುಪಕ್ಷೀಯ ಧೃತರಾಷ್ಟ್ರ ಸಂತಾನಕ್ಕೆ ಕಾರಣವೆನ್ನಬಹುದು. ನೂರಾರು ರಾಜಕೀಯ ಪಕ್ಷಗಳಿರುವ ಈ ದೇಶದಲ್ಲಿ ಪ್ರಜಾಪ್ರಭುತ್ವ ಸಾರ್ಥಕವಾಗಿದೆಯೆ ಎಂಬ ಸಂದೇಹವಿದ್ದೇ ಇದೆ. ಸಾವಿರಾರು ದೇವತೆಗಳು, ಸಾವಿರಾರು ಜಾತಿಮತಗಳು, ಲಕ್ಷಾವಧಿ ಜಗದ್ಗುರು ಪೀಠಗಳು, ಮಿಲಿಯಾವಧಿ ರೂಢಿಸಂಪ್ರದಾಯಗಳು, ಹತ್ತಾರು ಭಾಷೆಗಳು ಚಾಲ್ತಿಯಲ್ಲಿರುವ ಈ ದೇಶದಲ್ಲಿ ಸೆಕ್ಯುಲರಿಸಮ್ ಆಗಲಿ ರಾಷ್ಟ್ರೀಯ ಐಕ್ಯವಾಗಲಿ ಸಾಧ್ಯವೆ ಎಂಬ ಶಂಕೆ ಇದ್ದೇ ಇದೆ. ಎಲ್ಲೆಲ್ಲೂ ಕಪಟವೇಷದ

ಸಮಾಜವಾದಿಗಳೆ ತುಂಬಿಕೊಂಡಿರುವಾಗ ಸಮಾನತಾತತ್ತ್ವಧರಿತ ಗಣರಾಜ್ಯ ಸಿದ್ಧಿಯೂ ಗಗನಕುಸುಮವಾಗುತ್ತದೆ.

ಹಲವು ವೈವಿಧ್ಯಗಳಿರುವ ಈ ದೇಶದಲ್ಲಿ ಏಕತೆಯನ್ನು ಸಾಧಿಸಬಲ್ಲ ಗಾಂಧಿ ನೆಹರೂ ಪಟೇಲರಂಥ ಎತ್ತರದ ವ್ಯಕ್ತಿಗಳಿಲ್ಲದಿರುವಾಗ ಹೊಸ ರಾಜಕೀಯ ವ್ಯವಸ್ಥೆಯ ಆವಿರ್ಭಾವ ಅನಿವಾರ್ಯವಾಗುತ್ತದೆ. ಒಂದೊಂದು ರಾಜ್ಯದಲ್ಲಿ ಒಂದೊಂದು ಪಕ್ಷ, ಕೇಂದ್ರದಲ್ಲಿ ಕಿಚಡಿ ಸಂಯುಕ್ತರಂಗ ಆಡಳಿತ ನಡಸುತ್ತಿರುವುದೇ ಈ ಅನಿವಾರ್ಯತೆಗೆ ನಿದರ್ಶನವಾಗಿದೆ. ಇಂದಿನ ಗೊಂದಲದ ಪರಿಸ್ಥಿತಿಯಿಂದ ಕ್ರಮಬದ್ಧವಾದ ವ್ಯವಸ್ಥೆ ಮೂಡಬಹುದೆಂದು, ಮುಂದೆ ಮೂರ್‍ನಾಲ್ಕು ಪಕ್ಷಗಳೇ ಉಳಿಯಬಹುದೆಂದು ಆಶಾವಾದ ಧೈರ್ಯ ನೀಡುತ್ತದೆ, ಸರಿ. ಅಲ್ಲಿಯತನಕ? ರಾಜ್ಯಗಳಿಗೆ ಪೂರ್ಣ ಸ್ವಾಯತ್ತತೆ ನೀಡುವ ಮೂಲಕ ಮಾತ್ರ, ಕೇಂದ್ರ ರಾಜ್ಯಗಳ ಸಂಬಂಧವನ್ನು ಪುನರ್ಲಕ್ಷಣೀಕರಿಸುವ ಪ್ರಾಮಾಣಿಕ ಪ್ರಯತ್ನದಿಂದ ಮಾತ್ರ ರಾಷ್ಟ್ರೀಯ ಏಕತೆ ಮತ್ತು ಭದ್ರತೆಗಳು ಸಾಧ್ಯವೆಂಬ ವಾಸ್ತವಸತ್ಯ ಇಂದಿನ ಪ್ರಾದೇಶಿಕ ಪಕ್ಷಗಳ ಮತ್ತು ಸಂಯುಕ್ತರಂಗದ ಆಡಳಿತ ವಿಧಾನದಿಂದ ವೇದ್ಯವಾಗುತ್ತದೆ. ಎಲ್ಲ ಪ್ರಮುಖ ಭಾಷೆಗಳಿಗೂ ಸಮಾನ ಸ್ಥಾನವಿರಬೇಕು, ಸಂಸತ್ತಿನಲ್ಲಿ ಮಾತ್ರವಲ್ಲ, ಕೇಂದ್ರ ಸರ್ಕಾರದಲ್ಲಿಯೂ ಎಲ್ಲ ರಾಜ್ಯಗಳ ಜನರಿಗೂ ಸಮಾನ ಪ್ರಾತಿನಿಧ್ಯ ಸಲ್ಲಬೇಕು ಎಂಬ ತತ್ತ್ವದ ತಳಹದಿಯ ಮೇಲೆ ಮುಂದಿನ ವ್ಯವಸ್ಥೆ ರೂಪುಗೊಳ್ಳಬೇಕಾಗಿದೆ.

ಸ್ವಾತಂತ್ರ್ಯ ಬಂದ ಸುಮಾರು ಅರ್ಧಶತಮಾನದ ನಂತರ ಕನ್ನಡಿಗರೊಬ್ಬರು ಪ್ರಧಾನಿಯಾಗಿರುವ ಅದೃಷ್ಟವನ್ನು ಪೂರ್ವಗ್ರಹಮಾತ್ಸರ್ಯ ಹತಾಶಾ ದೂರರಾಗಿ ಸಮಾಧಾನ ಚಿತ್ತರಾಗಿ, ಪಕ್ಷಭೇದವನ್ನು ತೊರೆದು, ಹೆಮ್ಮೆಯಿಂದ ಸ್ವಾಗತಿಸಬೇಕಾದ್ದು, ಅದನ್ನುಳಿಸಿಕೊಳ್ಳಬೇಕಾದ್ದು ಕನ್ನಡಿಗರ ಕರ್ತವ್ಯ ಹಾಗೂ ಧರ್ಮ. ಪ್ರಧಾನಿಪಟ್ಟ ಯಾವಾಗಲೂ ಉತ್ತರಭಾರತಕ್ಕೆ ಮಾತ್ರ ಮೀಸಲೇನೋ ಎಂಬ ಶಂಕೆ ಈಚೆಗೆ ನಿವಾರಣೆಯಾಗಿದೆ. ಆಂಧ್ರದನಂತರ ಕರ್ನಾಟಕಕ್ಕೆ ಆ ಸುವರ್ಣಾವಕಾಶ ಲಭ್ಯವಾಗಿದೆ. ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳದೆ, ಕಿರಿಚುತ್ತ ಕಚ್ಚಾಡುತ್ತ ಮೂರ್ಖತನವನ್ನು ಪ್ರದರ್ಶಿಸಿ ಕಳೆದುಕೊಳ್ಳುವುದಾದರೆ, ಅದು ಮತ್ತೆ ದೊರೆಯಲಾರದು. ಜಾತೀಯತೆಗೆ ಬದಲಾಗಿ ರಾಷ್ಟ್ರೀಯತೆಗೆ, ಸ್ವಾರ್ಥಾಹಂಕಾರಕ್ಕೆ ಬದಲಾಗಿ ರಾಷ್ಟ್ರೀಯ ಏಕತೆಗೆ ಭದ್ರತೆಗೆ ಮತ್ತು ಸಮಗ್ರತೆಗೆ ಸರ್ವಭಾರತೀಯರ ತನುಮನಧನಕ್ರಿಯೆಗಳು ಸಮರ್ಪಿತವಾಗಲಿ, ಅವರಿಗೆ ಸದ್ಬುದ್ಧಿಯುಂಟಾಗಲಿ, ಭಾರತದ ಭವಿಷ್ಯ ಭವ್ಯವಾಗಲಿ ಎಂದು ಈ ಐವತ್ತನೆಯ ವಾರ್ಷಿಕ ಸ್ವಾತಂತ್ರ್ಯೋತ್ಸವ ಸಮಯದಲ್ಲಿ ಪ್ರಾರ್ಥಿಸೋಣ! ನಿರಂತರ ಜಾಗೃತಿ ಮತ್ತು ಬಲಿದಾನಗಳೇ ಸ್ವಾತಂತ್ರ್ಯ ಸಂರಕ್ಷಣೆಯ ಕೋಟೆಗಳೆಂಬ ಸತ್ಯವನ್ನು ನಾವು ಮರೆಯದಂತೆ ಭಾರತಮಾತೆ ಕರುಣಿಸಲೆಂದು ಹಾರೈಸೋಣ!

ಜಯ್ ಭಾರತ! ಜಯ್ ಕರ್ನಾಟಕ!

# ತಪ್ಪಿದ ಪದಕ—ಮುಪ್ಪರಿಯದ ವಿಷಾದ

**ಸಿ. ನಾಗಣ್ಣ**

ಹಾಕಿ ಪಂದ್ಯದಲ್ಲಿ ಅಗ್ರಮಾನ್ಯ ಸ್ಥಾನದಲ್ಲಿ ವಿರಾಜಮಾನವಾಗಿದ್ದ ದಶಕಗಳಲ್ಲಿ ಭಾರತ ಒಲಿಂಪಿಕ್ ಅಖಾಡದಲ್ಲಿ ಚಿನ್ನದ ಬೆಳೆಸು ತೆಗೆದದ್ದು ಸರ್ವವೇದ್ಯವಾಗಿದೆ. ಉಳಿದ ರಾಷ್ಟ್ರದವರು ಹಾಕಿ ಆಟವನ್ನು ಚೆನ್ನಾಗಿ ಆಡುವುದನ್ನು ಕಲಿತ ಬಳಿಕ ಭಾರತಕ್ಕೆ ಚಿನ್ನದ ಪದಕ ಕನಸಾಯಿತು. ವೈಯಕ್ತಿಕ ನೆಲೆಯಲ್ಲಿ ಪದಕ ಗಳಿಸುವ ಸಾಮರ್ಥ್ಯವನ್ನು ಮೆರೆದವರ ಸಂಖ್ಯೆ ನಮ್ಮಲ್ಲಿ ಬಹಳಷ್ಟಿಲ್ಲ. ಈ ವಿಷಯವಾಗಿ ಚರ್ಚಿಸುವಾಗ ತಟ್ಟನೆ ನೆನಪಾಗುವ ಹೆಸರು ಮಿಲ್ಖಾ ಸಿಂಗರದು. ೧೯೬೦ನೇ ಇಸವಿಯಲ್ಲಿ ರೋಮ್ ನಗರದಲ್ಲಿ ನಡೆದ ಒಲಿಂಪಿಕ್‌ನಲ್ಲಿ ಕಂಚಿನ ಪದಕ ಗಳಿಸುವ ಹಂತದಲ್ಲಿದ್ದ ಮಿಲ್ಖಾ ಸಿಂಗ್ ಕೂದಲೆಳೆಯಷ್ಟು ಅಂತರದಲ್ಲಿ ಆ ಅವಕಾಶದಿಂದ ವಂಚಿತರಾದರು. ಕೈಗೆಟುಕಿದ ತುತ್ತು ಬಾಯಿಗೆ ಬಾರದೇ ಹೋದ ಸನ್ನಿವೇಶ ಭಾರತದ ಓಟ ಸ್ಪರ್ಧೆ ಇತಿಹಾಸದಲ್ಲಿ ಅಚ್ಚಳಿಯದ ರೀತಿ ದಾಖಲಾಗಿದೆ. ಮಿಲ್ಖಾ ಸಿಂಗರು ಪದಕ ಗೆಲ್ಲಲಾರದ ಸಂದರ್ಭವನ್ನು ಮೆಲುಕು ಹಾಕುವ ಮೊದಲು ಅವರು ಓಟವನ್ನು ಗಂಭೀರವಾಗಿ ಸ್ವೀಕರಿಸಿದ ಸನ್ನಿವೇಶವನ್ನು ನೆನೆಯುವುದು ಉಚಿತವಾಗಿದೆ.

ಭಾರತದ ಕ್ರೀಡೇತಿಹಾಸದಲ್ಲಿ ಒಲಿಂಪಿಕ್‌ನಲ್ಲಿ ರಜತ ಪದಕವನ್ನು ಗಳಿಸಿದವರೆಂದರೆ ನಾರ್ಮನ್ ಪ್ರಿಚರ್ಡ್ ಒಬ್ಬರೇ. ಕಲ್ಕತ್ತ ನಗರ ನಿವಾಸಿಯಾಗಿದ್ದ ಈ ಆಂಗ್ಲೋ–ಇಂಡಿಯನ್ ಕ್ರೀಡಾಪಟು ೧೯೦೦ರ "ಪ್ಯಾರಿಸ್ ಗೇಮ್ಸ್"ನಲ್ಲಿ ೨೦೦ ಮೀಟರ್ ಓಟ ಮತ್ತು ೨೦೦ ಮೀಟರ್ ಅಡೆತಡೆ ಜಿಗಿತದಲ್ಲಿ ಅಮೆರಿಕದ ಜಾನ್ ವಾಲ್ಟರ್ ಟ್ಯೂಕ್ಸ್‌ಬರಿ ಮತ್ತು ಆಲ್ವಿನ್ ಕ್ರೀಂಜ್ಲೀನ್‌ರವರಿಗೆ ಮೊದಲನೆಯ ಸ್ಥಾನಗಳನ್ನು ಬಿಟ್ಟುಕೊಟ್ಟರು.

ಅದಾದ ನಂತರ ಓಟದ ವಲಯದಲ್ಲಿ ಪದಕಗಳು ಏಕೆ ಪ್ರಾಪ್ತವಾಗಲಿಲ್ಲ ಎಂದು ತಿಳಿಯಲು ಕಾರಣ ಹುಡುಕುವುದು ಕಷ್ಟವಾಗುವುದಿಲ್ಲ. ಸಂಘಟಿತವಾದ, ದೀರ್ಘಕಾಲೀನವಾದ ಪ್ರಯತ್ನಗಳು ಇಲ್ಲಿ ನಡೆಯದ ಕಾರಣ ಆಧುನಿಕ ಕ್ರೀಡೆಗಳಲ್ಲಿ ಯಶಸ್ಸು ದಕ್ಕದಂತಾಗಿದೆ. ವೈಯಕ್ತಿಕ ಪ್ರಯತ್ನದಿಂದ ಮಾತ್ರ ಯಶಸ್ಸು ಕಂಡಿರುವುದನ್ನು ನಾವು ಗಮನಿಸಬಹುದಾಗಿದೆ.

---

ಸಂಗ್ರಹ : ನಾನಾ ಮೂಲಗಳಿಂದ.

೧೯೪೪ರ ಒಲಿಂಪಿಕ್‌ನಲ್ಲಿ ಅಂತಿಮ ಹಂತ ತಲುಪಿದ್ದ ಹೆನ್ರಿ ರೆಬೆಲೊ ಸ್ವಯಂನಿರ್ಮಿತ ಓಟಪಟುವಿಗೆ ಒಂದು ಉತ್ತಮ ಉದಾಹರಣೆಯಾಗಿದ್ದಾರೆ. ಒಲಿಂಪಿಕ್ ಅಂತಿಮ ಹಂತ ತಲುಪಿ ರೆಬೆಲೊರವರನ್ನು ಅನುಕರಿಸಿದ ಶ್ರೇಷ್ಠ ಕ್ರೀಡಾಪಟುಗಳೆಂದರೆ—ಮಿಲ್ಖಾ ಸಿಂಗ್ (೧೯೬೦ರ ರೋಮ್ ಒಲಿಂಪಿಕ್‌ನಲ್ಲಿ ೪೦೦ ಮೀಟರ್ ಓಟದಲ್ಲಿ ನಾಲ್ಕನೆಯ ಸ್ಥಾನ), ಗುರ್‌ಬಚನ್ ಸಿಂಗ್ ರಾಂಧವ (೧೯೬೪ರ, ಟೋಕಿಯೋ ಒಲಿಂಪಿಕ್‌ನಲ್ಲಿ ೧೧೦ ಮೀ ಅಡತಡೆ ಓಟದಲ್ಲಿ ಐದನೇ ಸ್ಥಾನ), ಶ್ರೀರಾಮ್ ಸಿಂಗ್ (೧೯೭೬ರ ಮಾಂಟ್ರಿಯೇಲ್ ಒಲಿಂಪಿಕ್‌ನಲ್ಲಿ, ೮೦೦ ಮೀಟರ್‌ನಲ್ಲಿ ಏಳನೇ ಸ್ಥಾನ) ಮತ್ತು ಪಿ. ಟಿ. ಉಷಾ (೧೯೮೪, ಲಾಸ್ ಎಂಜಲೀಸ್‌ನಲ್ಲಿ ೪೦೦ ಮೀ ಅಡೆತಡೆ ಓಟದಲ್ಲಿ ನಾಲ್ಕನೇ ಸ್ಥಾನ). ರೆಬೆಲೊ ಕಾಲದ ಸ್ಥಿತಿಗಳನ್ನು ನೆನೆದರೆ ಈ ಮೇಲೆ ಹೇಳಿದ ಮಂದಿ ವ್ಯವಸ್ಥೆಯಿಂದ ಪಡೆದ ಉತ್ತೇಜನ ತೃಪ್ತಿದಾಯಕವೆಂದೇ ಹೇಳಬೇಕು. ರಾಷ್ಟ್ರ ವಿಭಜನೆಯ ಕಾಲವಾದ್ದರಿಂದ ಉದ್ಭವವಾದ ವಿಪತ್ತಿನಲ್ಲಿ ಕ್ರೀಡೆಯ ಬಗ್ಗೆ ಯೋಚಿಸಲು ಯಾರಿಗೂ ತಾಳ್ಮೆಯಾಗಲೀ, ವ್ಯವಧಾನವಾಗಲೀ ಇರಲಿಲ್ಲ. ಹಾಗಾಗಿ ರೆಬೆಲೊ ತನ್ನೊಳಗಿನ ನೂಲನ್ನೇ ತೆಗೆದು ಕೊಂಡು ಗೂಡು ನೇಯ್ದುಕೊಳ್ಳಬೇಕಾಯಿತು.

ಸರ್ಕಾರ ಅಥವಾ ಅರೆ-ಸರ್ಕಾರದ ಯೋಜನೆಯ ಫಲವಾಗಿ ಮಿಲ್ಖಾ ಸಿಂಗರು ಓಟ ಕೈಗೊಳ್ಳಲು ತಿಳಿಯುವಂತಿಲ್ಲ. ೧೯೫೨ರಲ್ಲಿ ಭಾರತೀಯ ಸೇನೆಯಲ್ಲಿ ಸಿಪಾಯಿಯಾಗಿದ್ದ ಮಿಲ್ಖಾ ಸಿಂಗರು ದಿನನಿತ್ಯದ ಕವಾಯಿತಿನ ಏಕತಾನತೆಯನ್ನು ತಪ್ಪಿಸಿಕೊಳ್ಳುವ ಏಕೈಕ ಮಾರ್ಗವೆಂದರೆ ಕ್ರೀಡಾಪಟುವಾಗುವುದು ಎಂದು ತೀರ್ಮಾನಿಸಿದರು. ತಮ್ಮ ತುಕಡಿಯಲ್ಲಿ ಅವರು ಕಾಡುಮೇಡಿನ ಓಟದಲ್ಲಿ ಬಹಳ ಪರಿಶ್ರಮ ತೋರಿ ಎಲ್ಲರ ಗಮನ ಸೆಳೆದರು. ಆ ಋತುಮಾನದ ಕೊನೆಯ ವೇಳೆಗೆ ಅವರ ತಂಡದ ತರಬೇತುದಾರರು ೪೦೦ ಮೀಟರ್ ಓಟವನ್ನು ತೆಗೆದುಕೊಳ್ಳಲು ಸೂಚಿಸಿದರು. ೪೦೦ ಮೀಟರ್ ಓಟ ಎಂದರೇನು ಎಂದು ಮಿಲ್ಖಾ ಸಿಂಗರಿಗೆ ಏನೇನೂ ತಿಳಿದಿರಲಿಲ್ಲ. ತರಬೇತುದಾರರು "ಒಂದು ಸುತ್ತಿನ ಓಟ" ಅದು ಎಂದು ವಿವರಿಸಿದರು. ಮೊಟ್ಟ ಮೊದಲು ಅವರು ೪೦೦ ಮೀಟರ್ ಸ್ಪರ್ಧೆಯಲ್ಲಿ ಗೆದ್ದಾಗ ೬೩ ಸೆಕೆಂಡುಗಳನ್ನು ತೆಗೆದುಕೊಂಡರು. (ಮೊದಲನೇ ರೈಲು ಎಷ್ಟು ಸಮಯಕ್ಕೆ ಎಷ್ಟು ದೂರ ಓಡಿತು; ಮೊದಲ ವಿಮಾನ ಎಷ್ಟು ದೂರ ಹಾರಿತು ನಮಗೆ ನೆನಪಿದೆಯಲ್ಲವೆ?) ಅದ್ಭುತವಾದ ವೇಗದ ಓಟಗಾರನ ಜನನವಾದದ್ದು ಹೀಗೆ.

ಮಿಲ್ಖಾ ಸಿಂಗರು ಮೊಟ್ಟಮೊದಲ ಬಾರಿ ಒಲಿಂಪಿಕ್‌ನಲ್ಲಿ ಭಾಗವಹಿಸಿದುದು ೧೯೫೬. ಅದರ ಬಗ್ಗೆ ಅವರ ಅನುಭವವನ್ನು ಕೇಳೋಣ: "ಶಿಕ್ಷಣವಿಹೀನ ಮಗುವಿನ ರೀತಿ ನಾನು ಸಂಪೂರ್ಣವಾಗಿ ಕಕ್ಕಾಬಿಕ್ಕಿಯಾದೆ. ಉಳಿದವರು ನನಗಿಂತ ಎಷ್ಟು ಉತ್ತಮ ಮಟ್ಟದಲ್ಲಿದ್ದಾರೆ ಎಂದು ಅರಿವಾಗಿ ನನಗೆ ಒಂದು ಕಡೆ ದಿಗ್ಭ್ರಾಂತಿ, ಇನ್ನೊಂದು ಕಡೆ ಸ್ಫೂರ್ತಿ ದೊರೆಯಿತು. ಆ ಸ್ಪರ್ಧೆಯಲ್ಲಿ ವಿಜಯಿಯಾದ ಚಾರ್ಲ್ಸ್ ಜಂರೆನ್ಸ್‌ರನ್ನು ಧೈರ್ಯಮಾಡಿ ನನಗೆ ಸ್ವಲ್ಪ ಓಟದ ಹುನ್ನಾರ ತಿಳಿಸಿಕೊಡುವಂತೆ

ಕೇಳಿದೆ. ಆತ ಎಷ್ಟು ಅಪ್ತವಾಗಿ ನಡೆಸಿಕೊಂಡರೆಂದರೆ ತರಬೇತಿಗಾಗಿ ಒಂದು ಯೋಜನೆಯನ್ನೇ ತಯಾರಿಸಿಕೊಟ್ಟರು." ಚಾರ್ಲಿಯವರ ಸಲಹೆ ಹಾಗೂ ತಮ್ಮ ಅಚಲವಾದ ಪರಿಶ್ರಮದ ಜೋಡಿ ಬೆಂಬಲವನ್ನು ಹೊತ್ತು ಮಿಲ್ಖಾರವರು ಏನೇನೂ ಸಲಕರಣೆಯಿಲ್ಲದ ಸ್ಥಿತಿಯಲ್ಲಿ ತಮ್ಮ ತರಬೇತಿ ಪ್ರಾರಂಭಿಸಿದರು. ಪ್ರತಿದಿನ ಅವರು ಎಷ್ಟು ಶ್ರಮ ತೆಗೆದುಕೊಳ್ಳುತ್ತಿದ್ದರೆಂದರೆ, ಪ್ರತ್ಯಕ್ಷದರ್ಶಿಗಳ ಪ್ರಕಾರ, ದಿನದ ಕೊನೆಯಲ್ಲಿ ತರಬೇತಿ ಮುಗಿಯುವ ಹೊತ್ತಿಗೆ ಸಾಮಾನ್ಯವಾಗಿ ವಾಂತಿ ಮಾಡಿಕೊಳ್ಳುತ್ತಿದ್ದರು. ಬಹಳ ದುಬಾರಿ ಬೆಲೆ ಇದು ಅನ್ನಿಸುವುದಾದರೂ, ಈ ಅಗ್ನಿದಿವ್ಯದ ಫಲವನ್ನು ಕಾಣಲು ತುಂಬಾ ಕಾಯಬೇಕಾಗಲಿಲ್ಲ.

೧೯೫೮ರಲ್ಲಿ 'ಟೋಕಿಯೊ ಏಷ್ಯನ್ ಗೇಮ್ಸ್' ಮಿಲ್ಖಾ ಸಿಂಗ್ ೨೦೦ ಮೀ ಮತ್ತು ೪೦೦ ಮೀ ಸ್ಪರ್ಧೆಗಳಲ್ಲಿ ಚಿನ್ನದ ಪದಕ ಗೆದ್ದರು; ಹಾಗೆಯೇ ಕಾರ್ಡಿಫ್‌ನಲ್ಲಿ ನಡೆದ ಕಾಮನ್‌ವೆಲ್ತ್ ಪಂದ್ಯಗಳಲ್ಲಿ ೪೦೦ ಮೀಟರ್‌ನಲ್ಲಿ ವಿಜಯಿಯಾದರು. ರೋಮ್ ಒಲಿಂಪಿಕ್‌ಗೆ ಒಂದು ವರ್ಷ ಮೊದಲು, ಅಂದರೆ, ೧೯೫೯ರಲ್ಲಿ ಆ ವರ್ಷದ ಸರ್ವಶ್ರೇಷ್ಠ ಕಾಲು-ಮೈಲು ಓಟಗಾರರೆಂದು ಮಿಲ್ಖಾ ಸಿಂಗರಿಗೆ ಅಮೆರಿಕದ ಹೆಲ್ಮ್ಸ್ ಟ್ರೋಫಿ ದೊರಕಿತು. ಅದಾದ ನಂತರದ್ದು ಇತಿಹಾಸ. ಅದುವರೆಗಿನ ಮೂರನೇ ಸ್ಥಾನದ ಸಮಯ ೪೫.೯ ಸೆಕೆಂಡುಗಳಾದರೆ, ೪೦೦ ಮೀಟರ್‌ನಲ್ಲಿ ೧೯೬೦ರ ರೋಮ್ ಒಲಿಂಪಿಕ್‌ನಲ್ಲಿ ಮಿಲ್ಖಾ ಸಿಂಗ್ ಕೇವಲ ೪೫.೬ ಸೆಕೆಂಡುಗಳನ್ನು ತೆಗೆದುಕೊಂಡು ಆ ದೂರವನ್ನು ಓಡಿದರು. ಅದಾಗ್ಯೂ ಕಂಚಿನ ಪದಕ ಅವರಿಗೆ ದಕ್ಕದೆ ದಕ್ಷಿಣ ಆಫ್ರಿಕಾದ ಮ್ಯಾಲ್ಕಮ್ ಸ್ಪೆನ್ಸ್ ಅವರಿಗೆ ದಕ್ಕಿತು; ಸ್ಪೆನ್ಸ್ ಒಂದು ಅಡಿಗೂ ಕಡಿಮೆ ಅಂತರದಲ್ಲಿ ಮಿಲ್ಖಾರನ್ನು ಹಿಂದೆ ಹಾಕಿ ಜಯ ಸಾಧಿಸಿದ್ದರು. ಅವರು ಶ್ರೇಷ್ಠ ಮಟ್ಟದ ಕಾಲು-ಮೈಲು ಓಟಗಾರರ ನಡುವೆ ಎದ್ದು ಕಾಣುವ ಪಟುವಾಗಿದ್ದರಿಂದ ಈ ಪರಾಭವದಿಂದ ಮಿಲ್ಖಾ ಸಿಂಗರು ಧೃತಿಗೆಡಲಿಲ್ಲವೆನ್ನಬಹುದು. ೪೬ ಸೆಕೆಂಡುಗಳಿಗಿಂತ ಕಡಿಮೆ ಸಮಯ ತೆಗೆದುಕೊಂಡು ಅವರು ಓಡಿದ ೮೦ ಸ್ಪರ್ಧೆಗಳಲ್ಲಿ ಕೇವಲ ಮೂರು ಬಾರಿ ಮಾತ್ರ ಅವರಿಗೆ ಯಶಸ್ಸು ಸಿಕ್ಕಲಿಲ್ಲ.

ಈಗ ಮತ್ತೆ ನಾವು ೧೯೬೦ರ ರೋಮ್ ಒಲಿಂಪಿಕ್‌ನ ಚಾರಿತ್ರಿಕವಾದ ಆ ೪೦೦ ಮೀಟರ್ ಓಟದ ಕಡೆ ಗಮನ ಹರಿಸೋಣ. ಅದುವರೆಗೆ ಅವರು ಓಡಿದ ಓಟಗಳಲ್ಲೆಲ್ಲ ಅದು ಅದ್ಭುತವಾದ ಓಟವೆನ್ನಬೇಕು. ಆ ಓಟದಲ್ಲಿ ಗೆದ್ದಿದ್ದರೆ ಕೊರಳನ್ನು ಅಲಂಕರಿಸುತ್ತಿದ್ದ ಜಯಮಾಲೆಯಿಂದ ತನ್ನ ಸುಖ ಸಾಧನೆಯಾಗುತ್ತಿತ್ತೆಂದು ಮಿಲ್ಖಾ ಸಿಂಗ್ ಎಣಿಸಿದ್ದರೆಂದಲ್ಲ; ತಾಯ್ನಾಡಿಗೆ ಜಯ ತರಬೇಕೆಂಬ ಉತ್ಕಟವಾದ ಆಕಾಂಕ್ಷೆಯನ್ನು ಅವರು ಹೊಂದಿದ್ದರು.

ಮಾಂತ್ರಿಕವಾದ ಆ ಅನುಭವ ಹಾಗೂ ಉತ್ಕಟೇಚ್ಛೆಯಿಂದ ನಮ್ಮ ರಾಷ್ಟ್ರಕ್ಕೆ ಒಬ್ಬ "ಹಾರುವ ಸಿಖ್" ದಕ್ಕಿದ. ನಮ್ಮ ಹಿಂದಿನ ತಲೆಮಾರಿನವರು ಈ ಕ್ರೀಡಾಪಟು ಓಡುವುದನ್ನು ಸಾಕ್ಷಾತ್ತಾಗಿ ಕಂಡಿದ್ದರು; ಅವನು ಓಡುವ ರಭಸಕ್ಕೆ ಮೈದಾನದಲ್ಲಿ ಕಿಡಿಯೇಳುವುದನ್ನು ವೀಕ್ಷಿಸಿದ್ದರು. ಹಲವು

ರೀತಿಯ ಪವಾಡಗಳನ್ನು—ಇಂದಿನ ಓಟಗಾರರನ್ನು ನೆನೆದರೆ ಪವಾಡವೆನ್ನುವ ಮಾತು ಅತಿಶಯೋಕ್ತಿಯಾಗಿ ತೋರುವುದಿಲ್ಲವೆ? —ಮೆರೆದ ಈ "ಹಾರುವ ಸಿಖ್."

ಕಳೆದ ಮುವ್ವತ್ತು ವರ್ಷಗಳಿಂದ ಅದೆಷ್ಟು ಜನ ಓಟಗಾರರು ಬಂದು ಹೋಗಿಲ್ಲ? ಆದರೆ ಮಿಲ್ಖಾ ಸಿಂಗರು ನಿರ್ಮಿಸಿರುವ ದಾಖಲೆ ಮಾತ್ರ ಇನ್ನೂ ಮುಕ್ಕಾಗದೆ ಉಳಿದಿದೆ. ಪ್ರಾಯಶಃ ಇನ್ನು ಮುಂದೆಯೂ ಅನೇಕ ಸಂವತ್ಸರಗಳವರೆಗೆ ಆ ದಾಖಲೆಗೆ ಏನೂ ಊನವಾಗುವಂತೆ ತೋರುವುದಿಲ್ಲ.

ದಾಖಲೆಗಳಿರುವುದೇ ಮುರಿಯುವುದಕ್ಕೆ ಎಂದು ಎಲ್ಲಾ ಕ್ರೀಡಾಪಟುಗಳು ಒಪ್ಪುತ್ತಾರೆಯಾದರೂ ಮಿಲ್ಖಾ ಸಿಂಗರ ದಾಖಲೆಯನ್ನು ಮುರಿಯುವುದು ಅಷ್ಟು ಸುಲಭಸಾಧ್ಯವಲ್ಲ. ಒಂದು ವೇಳೆ ಅವರ ದಾಖಲೆಯನ್ನು ಮುರಿದರೆ ಅವರಿಗೆ ದುಃಖಕ್ಕಿಂತ ಸಂತೋಷವೇ ಆಗುತ್ತದೆ.

ಮುವ್ವತ್ತಾರು ವರ್ಷಗಳ ಹಿಂದೆ ಒಂದು ಅಪರಾಹ್ನ ಈ ಕ್ರೀಡಾಪಟು ಮಾಡಿದ ಸಾಹಸ, ಗಳಿಸಿದ ಯಶಸ್ಸು ಇಂದಿಗೂ ಅನುಪಮವಾಗಿ ತೋರುತ್ತದೆ. ಆ ಸಾಹಸದಿಂದಾಗಿಯೇ ಮಿಲ್ಖಾ ಸಿಂಗ್ ತಮ್ಮ ಜೀವಿತ ಕಾಲದಲ್ಲೇ ಒಂದು ಐತಿಹ್ಯವಾಗಿ ಹೋಗಿದ್ದಾರೆ.

ಕ್ರೀಡಾ ಚರಿತ್ರಕಾರರು ರೋಮ್ ಒಲಿಂಪಿಕ್‌ನ ಆಗಿನ ಸನ್ನಿವೇಶವನ್ನು ರೋಮಾಂಚಿತರಾಗಿ ನೆನೆಯುತ್ತಾರೆ: ಓಟಕ್ಕೆ ಎಲ್ಲರೂ ಸಿದ್ಧರಾಗಿ ನಿಂತಿದ್ದಾರೆ; ಬಂದೂಕು ಹಾರಿದ ಕೂಡಲೇ ಸಿಂಗ್ ತಮ್ಮ ಜೀವಮಾನದ ಅತ್ಯಂತ ಶ್ರೇಷ್ಠ ಮಟ್ಟದ ಓಟವನ್ನು ಓಡಿದರು. ಒಂದು ಸುತ್ತು ಓಟದಲ್ಲಿ ಅಪ್ರತಿಮರೆನಿಸಿಕೊಂಡ ಪಟುಗಳ ಜೊತೆಯಲ್ಲಿ ಅವರು ಆ ದಿನ ಓಡಿದರೆನ್ನುವುದು ಒಂದು ವಿಶೇಷ. ಹೊರಗಿನ ಲೇನ್‌ನಲ್ಲಿ ಓಡುತ್ತಿದ್ದ ಮಿಲ್ಖಾ ಸಿಂಗರ ಮುಂದುಮುಂದೆ ಇಬ್ಬರು ಓಡುತ್ತಿದ್ದರು. ಆದರೆ ೨೫೦ ಮೀಟರ್ ಗುರುತು ಸಮೀಪಿಸುತ್ತಲೇ ಉಳಿದೆಲ್ಲರನ್ನೂ ಹಿಂದೆ ಹಾಕಿ ಸಾಹಸಿ ಸಿಂಗ್ ಮುನ್ನುಗ್ಗಿದರೆ, ೩೦೦ ಮೀಟರ್ ಮುಟ್ಟುವಷ್ಟರಲ್ಲಿ ಉಳಿದವರು ಅವರ ಸಮಕ್ಕೆ ಬಂದುಬಿಟ್ಟರು. ಕಣ್ಣು ಮುಚ್ಚಿ ಕಣ್ಣು ಬಿಡುವುದರೊಳಗೆ ಇಬ್ಬರು ಅವರನ್ನು ಹಿಂದೆ ಹಾಕಿ ಮೊದಲು ಮತ್ತು ಎರಡನೆಯ ಸ್ಥಾನಕ್ಕೆ ನುಗ್ಗಿದರು. ಅವರ ಹಿಂದೆಯೇ ಹಾರಿದ ಇನ್ನಿಬ್ಬರು ಹೆಚ್ಚೂ ಕಡಿಮೆ ಒಟ್ಟಿಗೇ ಟೇಪನ್ನು ಮುಟ್ಟಿದರಾದರೂ ಮೂರು ಮತ್ತು ನಾಲ್ಕನೇ ಸ್ಥಾನಕ್ಕೆ ತಳ್ಳಲ್ಪಟ್ಟರು.

ಗಾದೆ ಮಾತಿನಲ್ಲಿ ಹೇಳುವಂತೆ ಕೂದಲೆಳೆಯಷ್ಟು ಹಿಂದೆ ಬಿದ್ದ ಆ ನಾಲ್ಕನೇ ಸ್ಥಾನವನ್ನು ಪಡೆದವರೇ ಮಿಲ್ಖಾ ಸಿಂಗ್. ಆ ಓಟದ ಸ್ಪರ್ಧೆಯಲ್ಲಿ ವಿಶ್ವದಾಖಲೆ ಸ್ಥಾಪಿತವಾಯಿತು (ಈ ದಾಖಲೆ ಅನೇಕ ವರ್ಷಗಳ ನಂತರ ಮುರಿಯಲ್ಪಟ್ಟಿತು ಎನ್ನುವುದು ಬೇರೆ ಮಾತು). ಮೊದಲ ಸ್ಥಾನ ಗಳಿಸಿ ದಾಖಲೆ ನಿರ್ಮಿಸಿದವರು ೪೦೦ ಮೀ. ದೂರವನ್ನು ೪೪.೯ ಸೆಕೆಂಡುಗಳಲ್ಲಿ ಮುಟ್ಟಿದ್ದರು. ಮಿಲ್ಖಾ ಸಿಂಗರು ತೆಗೆದುಕೊಂಡ ಸಮಯ ೪೫.೬ ಸೆಕೆಂಡುಗಳು; ೧೯೮೫ರವರೆಗೂ ಇದು ಏಷ್ಯನ್ ದಾಖಲೆಯಾಗಿ ಉಳಿಯಿತು.

ಮಿಲ್ಖಾ ಸಿಂಗರ ಜೊತೆ ಮಾತನಾಡುವಾಗ ಅನಿವಾರ್ಯವಾಗಿ ರೋಮ್

ಒಲಂಪಿಕ್‌ನ ೧೯೬೦ರ ಆ ಅಪರಾಹ್ನದ ಪ್ರಸ್ತಾಪ ಬಂದೇ ಬರುತ್ತದೆ. ಆ ಓಟ ಓಡಿ ಇಂದಿಗೆ ೩೬ ವರ್ಷಗಳು ಕಳೆದಿವೆಯಾದರೂ ಕೊಂಚದರಲ್ಲಿ ಕೈಜಾರಿ ಹೋದ ಯಶಸ್ಸನ್ನು ನೆನೆಯುವಾಗ ಮಿಲ್ಖಾ ಸಿಂಗರ ಧ್ವನಿ ಗದ್ಗದಿತವಾಗುತ್ತದೆ; ದೃಢವಾದ ವ್ಯಕ್ತಿತ್ವದ ಸಿಂಗರು ಮಂಜುಗಡ್ಡೆಯಂತೆ ಕರಗಿ ಹೋಗುತ್ತಾರೆ. ನಿರಾಶೆ, ನಿಟ್ಟುಸಿರು, ವಿಷಾದ ಮುಪ್ಪುರಿಗೊಂಡು ಮಿಲ್ಖರ ಮುಖ ಮಂಡಲವನ್ನು ವ್ಯಾಪಿಸುವಾಗ ವಿಷಾದಕ್ಕೆ ಮುಪ್ಪಿಲ್ಲವೆಂಬುದು ನಿಜವಾಗಿ ತೋರುತ್ತದೆ. "ಮಿಲ್ಖಾಜಿ ರೋಮ್ ಒಲಿಂಪಿಕ್‌ನ ಆ ಅಪರಾಹ್ನ ಏನಾಯಿತು ಹೇಳಿ?" ಎಂದು ಕೇಳಿದ ನಿಮ್ಮನ್ನು ಸಿಂಗರು ಕಣ್ಣಿಗೆ ಕಣ್ಣಿಟ್ಟು ನೋಡದೆ ಮುಖವನ್ನು ಅತ್ತ ಹೊರಳಿಸಿಬಿಡುತ್ತಾರೆ. ಕಣ್ಣಾಲಿಗಳನ್ನು ತುಂಬಿಕೊಳ್ಳುವ ಕಣ್ಣೀರು ಯಾವ ಕ್ಷಣದಲ್ಲಾದರೂ ಅವರ ಕೆನ್ನೆಯ ಮೇಲೆ ಕೋಡಿ ಹರಿಯಬಹುದೆಂದು ತೋರುತ್ತದೆ.

ಕ್ಷಣ ಹೊತ್ತಿನ ನಂತರ "ದಯವಿಟ್ಟು ಆ ಪ್ರಶ್ನೆಯನ್ನು ಮಾತ್ರ ಕೇಳಬೇಡಿ" ಎನ್ನುತ್ತಾರೆ ಮಿಲ್ಖಾ. "೧೯೫೬ರಲ್ಲಿ ಮೆಲ್‌ಬೋರ್ನ್ ಒಲಿಂಪಿಕ್‌ನಲ್ಲಿ ಭಾಗವಹಿಸಿದ್ದೆನಾದರೂ ಅದರಲ್ಲಿ ಹೆಚ್ಚೇನೂ ಸಾಧಿಸಲಿಲ್ಲ. ಮೊದಲ ಬಾರಿಗೆ ಒಲಂಪಿಕ್‌ನಲ್ಲಿ ಇದ್ದೆನಾದ್ದರಿಂದಲೋ ಏನೋ ನನಗೆ ಮೈಮರೆವೆ ಬಂದಿತ್ತು. ಆದರೆ ೧೯೬೦ರ ರೋಮ್ ಒಲಿಂಪಿಕ್‌ನಲ್ಲಿ ನನ್ನ ದೇಶಕ್ಕೆ ಒಂದು ಪದಕ ಗೆದ್ದೇ ಗೆಲ್ಲಬೇಕೆಂದು ದೃಢ ನಿಶ್ಚಯ ಕೈಗೊಂಡು ಅದಕ್ಕೆ ತಕ್ಕಂತೆ ವ್ಯವಸಾಯ ಮಾಡಿದ್ದೆ. ಮುಂದೇನಾಯಿತು ಎಂದು ನಿಮಗೇ ಗೊತ್ತಿದೆಯಲ್ಲ?" ಹಾಗನ್ನುವಾಗ ಆ ಮಾತಿನ ಅರ್ಥ ನಾನಾ ಬಗೆಯಾಗಿ ನಮ್ಮ ಮುಂದೆ ಗತ ಚರಿತ್ರೆಯನ್ನು ತೆರೆದು ತೋರುತ್ತದೆ.

"ನೋಡಿ, ನನ್ನ ಬದುಕಿನಲ್ಲಿ ಎರಡು ದೊಡ್ಡ ದುರಂತಗಳು ಸಂಭವಿಸಿವೆ. ಅವುಗಳನ್ನು ನಾನು ಎಂದೂ ಮರೆಯಲಾರೆ. ಅವುಗಳ ಬಗ್ಗೆ ಯಾರಾದರೂ ಪ್ರಸ್ತಾಪ ಮಾಡಿದರೆ ನನಗೆ ದುಃಖ ತಡೆದುಕೊಳ್ಳಲಾಗದು. ಮೊದಲನೆಯ ದುರಂತ ನನ್ನ ತಂದೆತಾಯಿಗಳ ಸಾವು. ರಾಷ್ಟ್ರ ವಿಭಜನೆಯ ಕಾಲದಲ್ಲಿ ಪಾಕಿಸ್ತಾನದಲ್ಲಿ ಅವರು ಹತ್ಯೆಗೀಡಾದರು. ಎರಡನೆಯದು ರೋಮ್ ಒಲಿಂಪಿಕ್‌ನಲ್ಲಿ ನಾನು ಗೆಲ್ಲಲಾರದ ಆ ಓಟ.

"ನಾನು ಚಿಕ್ಕವನಾಗಿದ್ದಾಗ ಒಬ್ಬಂಟಿಯಾಗಿದ್ದೆ; ಹಾಗಾಗಿ ಚಂಡೀಗಡದಲ್ಲಿ ಸುಮ್ಮನೆ ಕಾಲ ಕಳೆಯಲು ನನ್ನ ಬಂಧುಗಳ ಜೊತೆ ಆಟದ ಬಯಲಿಗೆ ಹೋಗುತ್ತಿದ್ದೆ. ಅಲ್ಲಿ ಕುಳಿತಿದ್ದ ಕೆಲವರ ಜೆರ್ಸಿಗಳ ಬೆನ್ನ ಮೇಲೆ "ಭಾರತ" ಅಂತ ಬರೆದಿದ್ದುದು ನನ್ನ ಕಣ್ಣಿಗೆ ಬಿದ್ದಿತು. ಚಿಕ್ಕ ಚಿಕ್ಕ ಹುಡುಗರು ಅವರ ಬಳಿ ಹೋಗಿ ಅವರ ಹಸ್ತಾಕ್ಷರ ಪಡೆಯುತ್ತಿದ್ದುದನ್ನು ನಾನು ಗಮನಿಸಿದೆ. ಆ ಕ್ರೀಡಾಪಟುಗಳು ಯಾರು ಎಂದು ಈಗ ನೆನಪಿಲ್ಲ. ಅವರ ಹಸ್ತಾಕ್ಷರ ಪಡೆಯಲು ಆ ಹುಡುಗರು ಯಾಕೆ ಮುಗಿಬೀಳುತ್ತಿದ್ದಾರೆ ಎಂದು ಅಕ್ಕಪಕ್ಕದವರನ್ನು ಕೇಳಿದೆ. ಅವರೆಲ್ಲಾ ನಮ್ಮ ರಾಷ್ಟ್ರವನ್ನು ಪ್ರತಿನಿಧಿಸಿರುವಂಥ ಕ್ರೀಡಾಪಟುಗಳೆಂದೂ ಹೊರ ದೇಶಗಳಿಗೆ ವಿಮಾನದಲ್ಲಿ ಅವರು ಹೋಗಿ ಬಂದಿರುವುದಾಗಿ ತಿಳಿಸಿದರು. ಉತ್ತಮವಾದ ಓಟದ ಪಟುವಾದರೆ ನೀನೂ ಕೂಡ ಅವರ ಹಾಗೆ ವಿದೇಶಗಳಿಗೆ ಹೋಗಿ

ಬರಲು ಸಾಧ್ಯವಾಗುವುದೆಂದು ಅವರು ಸೂಚಿಸಿದರು.

"ಜೆರ್ಸಿ ಅಥವಾ ಅಂಗಿಯ ಮೇಲೆ 'ಭಾರತ'ವೆಂದು ಮೂಡಿದ್ದ ಆ ಅಕ್ಷರಗಳು ನನ್ನೊಳಗೂ ಆಸೆ ಅಂಕುರಿಸುವಂತೆ ಮಾಡಿದವು. ನನ್ನ ಸುಪ್ತ ಪ್ರಜ್ಞೆಯಲ್ಲಿ ಒಂದು ದಿನ ನಾನೂ ನನ್ನ ದೇಶಕ್ಕೆ ಗೌರವ ತರುವುದಾಗಿ ಸಂಕಲ್ಪ ಮಾಡಿದೆ.

"ಮುಂದೆ ೧೯೫೨ರಲ್ಲಿ ಭಾರತೀಯ ಸೇನೆಯನ್ನು ಸೇರಿದೆ. ಬೇರೆ ಬೇರೆ ಕ್ರೀಡಾಕೂಟಗಳಲ್ಲಿ ಉತ್ತಮ ಪ್ರದರ್ಶನ ನೀಡಿದ ಪರಿಣಾಮವಾಗಿ ನನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ನನಗೆ ಉತ್ತೇಜನ ದೊರಕಿತು. ತುಂಬಾ ಶ್ರದ್ಧೆಯಿಂದ ವ್ಯಾಯಾಮ ಮಾಡಿದೆ. ಪ್ರತಿ ದಿನ ಐದು ಗಂಟೆಗಳಿಗೂ ಹೆಚ್ಚು ಕಾಲ ಅಭ್ಯಾಸ ಮಾಡುವುದನ್ನು ರೂಢಿಸಿಕೊಂಡೆ. ಎಲ್ಲರೂ ಮಲಗಿರುವ ಸಮಯದಲ್ಲಿ ರಾತ್ರಿ ಹೊತ್ತು ಎದ್ದು ಓಡುತ್ತಿದ್ದೆ. ನನ್ನ ಗುರಿಸಾಧನೆಯ ಹಾದಿಯಲ್ಲಿ ನಾನು ಕೇವಲ ಬೆವರು ಸುರಿಸಿಲ್ಲ, ರಕ್ತವನ್ನೇ ಬಸಿದಿದ್ದೇನೆ ಎನ್ನಬೇಕು. ನನಗೆ ಇದ್ದ ಗುರಿಯಾದರೂ ಒಂದೇ–ನನ್ನ ರಾಷ್ಟ್ರಕ್ಕೆ ಪದಕವೊಂದನ್ನು ಗೆದ್ದು ತರಬೇಕೆಂಬುದು.

"ಅನೇಕ ಓಟದ ಪಂದ್ಯಗಳಲ್ಲಿ ನಾನು ಜಯಗಳಿಸುತ್ತಿದ್ದ ಕಾರಣ ಸ್ಪರ್ಧೆಗಳಲ್ಲಿ ಭಾಗವಹಿಸಲು ಹೊರ ದೇಶಗಳಿಗೆ ನನ್ನನ್ನು ಕಳುಹಿಸಲು ಪ್ರಾರಂಭಿಸಿದರು. ಯೂರೋಪಿನ ಅನೇಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಆ ಕಾಲದಲ್ಲಿ ಶ್ರೇಷ್ಠರೆನಿಸಿದ್ದ ಓಟಗಾರರನ್ನು ನಾನು ಸೋಲಿಸಿದೆ. ವಾಸ್ತವವಾಗಿ ಆ ಕಾಲದ ಶ್ರೇಷ್ಠಮಟ್ಟದ ೪೦೦ ಮೀಟರ್ ಓಟದ ಅಗ್ರಮಾನ್ಯರ ಪಂಕ್ತಿಯಲ್ಲಿ ನನ್ನ ಹೆಸರನ್ನು ಜನರು ಸೇರಿಸಿದ್ದರು.

"ಯಶಸ್ಸಿಗೆ ಅಗತ್ಯವಾಗಿ ಬೇಕಾಗಿರುವುದು, ಶ್ರಮದ ದುಡಿಮೆ, ಪ್ರಾಮಾಣಿಕತೆ ಹಾಗೂ ದೃಢ ನಿರ್ಧಾರ. ಏನಾದರೂ ಸಾಧಿಸಬೇಕೆಂಬ ಛಲ ಹೊತ್ತು ನಾನು ಸರ್ವ ಪ್ರಯತ್ನ ಮಾಡಿದೆ. ನನ್ನ ರಾಷ್ಟ್ರಕ್ಕಾಗಿ ಬೇರೆ ಬೇರೆ ಸ್ಪರ್ಧೆಗಳಲ್ಲಿ ನಾನು ಪದಕ ಗೆದ್ದಿರುವೆನಾದರೂ ಒಲಿಂಪಿಕ್ ಪದಕವನ್ನು ಗೆದ್ದು ಕೊಡಲಾರದೇ ಹೋದೆನೆಂಬುದು ನನ್ನ ಜೀವನದ ದೊಡ್ಡ ನಿರಾಶೆಯಾಗಿದೆ.

"ಯಾವನೇ ಒಬ್ಬ ಕ್ರೀಡಾಪಟು ಉತ್ತಮನಾಗಬೇಕಾದರೆ ಶ್ರೇಷ್ಠಮಟ್ಟದ ಸ್ಪರ್ಧಿಗಳ ವಿರುದ್ಧ ಸೆಣಸಬೇಕು. ಜಗತ್ತಿನ ಯಾವ ಓಟಗಾರನನ್ನು ಕಂಡರೂ ನನಗೆ ದಿಗಿಲಿರಲಿಲ್ಲ. ಆದರೆ ನನಗೆ ಗಾಬರಿ ಹುಟ್ಟಿಸುತ್ತಿದ್ದ ಒಬ್ಬ ಕ್ರೀಡಾಪಟುವೆಂದರೆ ನನ್ನ ಅಣ್ಣ ಮಖನ್. ನನ್ನ ಹಾಗೆಯೇ ಅವನೂ ಸೈನ್ಯದಲ್ಲಿದ್ದ; ನಾವು ಒಟ್ಟಿಗೆ ಸ್ಪರ್ಧಿಸಿದಾಗಲೆಲ್ಲಾ ಗೆಲುವು ಸುಲಭವಲ್ಲ ಎನ್ನುವಂತೆ ಮಾಡುತ್ತಿದ್ದ. ಅಭ್ಯಾಸ ಮಾಡಲು ನಾನು ರಾತ್ರಿ (ಮುಂಜಾನೆ ಎನ್ನಬೇಕೇನೋ?) ಒಂದು ಗಂಟೆಗೆ ಎದ್ದರೆ ಅವನು ನನಗಿಂತ ಒಂದು ಗಂಟೆ ಮೊದಲೇ ಎದ್ದು ಅಭ್ಯಾಸ ಪ್ರಾರಂಭಿಸುತ್ತಿದ್ದ. ಸತತವಾಗಿ ನನಗೆ ಪಂಥಾಹ್ವಾನ ಒಡ್ಡುತ್ತಿದ್ದವನು ಅವನೇ."

ನೆನಪಿನ ಆಳದಿಂದ ತಮ್ಮ ಅನುಭವ ದ್ರವ್ಯವನ್ನು ಹೊರ ತೆಗೆಯುವುದನ್ನು ಕೇಳುತ್ತಾ ಅವರಿಗೆ "ಹಾರುವ ಸಿಖ್" ಎಂದು ಬಿರುದು ಬರಲು ಕಾರಣವೇನೆಂದು ಕೇಳಲು ಕುತೂಹಲವಾಗುತ್ತದೆ.

"ಅದೊಂದು ದೊಡ್ಡ ಕಥೆ. ವಾಸ್ತವವಾಗಿ ಪಾಕಿಸ್ತಾನದಲ್ಲಿ ನಡೆದ ಕ್ರೀಡೋತ್ಸವವೊಂದರಲ್ಲಿ ಉದ್ಘೋಷಕನೊಬ್ಬ ನೀಡಿದ ಬಿರುದು ಅದು. ನನಗೆ ಮುಖ್ಯ ಸ್ಪರ್ಧೆ ನೀಡಿದ್ದ ಅಬ್ದುಲ್ ಖಲೀಕ್ ಅವರಿಂದ ೧೦೦ ಮೀಟರ್‌ನಲ್ಲಿ ಪರಾಭವಗೊಂಡಿದ್ದೆ. ನಂತರ ೨೦೦ ಮೀಟರ್‌ನಲ್ಲಿ ವಿಜಯ ಸಾಧಿಸಿದೆ. ಮತ್ತೆ ನಾವಿಬ್ಬರೂ ೪೦೦ ಮೀಟರ್ ಸ್ಪರ್ಧೆಗೆ ನಿಂತುಕೊಂಡಿದ್ದೆವು; ನನ್ನ ಶಕ್ತಿಯನ್ನೆಲ್ಲಾ ಬಿಟ್ಟು ಓಡಬೇಕೆಂದು ನಿರ್ಧರಿಸಿಕೊಂಡು ಸಿದ್ಧನಾಗಿದ್ದೆ. ನನಗೆ ಅದು ಸಾವು-ಬದುಕಿನ ಪ್ರಶ್ನೆಯಾಗಿತ್ತು. ಆ ಹೊತ್ತು ನಾನು ಓಡಿದ ಓಟಕ್ಕೆ ಖಲೀಕ್‌ರ ಓಟ ಸಮವಾಗಿರಲಿಲ್ಲ. ಪಾಕಿಸ್ತಾನದವರು ನನ್ನ ತಂದೆ ತಾಯಿಗಳನ್ನು ಕೊಂದ ಸಂಗತಿ ನನ್ನ ಮನಸ್ಸಿಗೆ ಬಂದುಬಿಟ್ಟು ಅವರನ್ನು ನಾನು ಸೋಲಿಸಲೇಬೇಕೆಂದು ತೀರ್ಮಾನಿಸಿದ್ದೆ. ಅಬ್ದುಲ್ ಎರಡನೆಯ ಸ್ಥಾನವನ್ನು ಪಡೆದುಕೊಂಡರಾದರೂ ನನ್ನಿಂದ ಬಹಳ ಹಿಂದೆಯೇ ಉಳಿದಿದ್ದರು. ೪೫.೮ ಸೆಕೆಂಡುಗಳಲ್ಲಿ ನಾನು ಓಟವನ್ನು ಗೆದ್ದೆ; ರೋಮ್ ಒಲಿಂಪಿಕ್‌ನಲ್ಲಿ ಸಮಯವನ್ನು ಇನ್ನೂ ಉತ್ತಮಿಸಿಕೊಂಡೆ.

"ಆ ಓಟದ ಸ್ಪರ್ಧೆಯಾದ ಬಳಿಕ ಉದ್ಘೋಷಕ ಹೇಳಿದ: 'ಈ ವಿಜಯವು ಪಾಕಿಸ್ತಾನದ ಓಟದ ಸ್ಪರ್ಧೆಯ ಪುಸ್ತಕದಲ್ಲಿ ದಾಖಲಾಗುವುದು. ಮಿಲ್ಖಾ ಸಿಂಗ್ ವಾಸ್ತವವಾಗಿ ಓಡುತ್ತಿರಲಿಲ್ಲ, ಹಾರುತ್ತಿದ್ದರು. ಹಾಗಾಗಿ, ಅವರಿಗೆ "ಹಾರುವ ಸಿಖ್" ಎಂಬ ಬಿರುದು ಕೊಡಲು ನಾವು ನಿರ್ಧರಿಸಿದ್ದೇವೆ.' ಆ ಹೆಸರು ನನಗೆ ಅಂಟಿಕೊಂಡದ್ದು ಆ ಬಗೆಯಾಗಿ. ಅದಾದ ಬಳಿಕ ನಾನು ಸ್ಪರ್ಧಿಸಿದ ಕಡೆಯೆಲ್ಲಾ ಜನರು ಅದೇ ಹೆಸರು ಹಿಡಿದು ಕರೆಯುವುದು ರೂಢಿ ಮಾಡಿಕೊಂಡರು.

"ಭಾರತದಲ್ಲಿ ಪ್ರತಿಭೆಗೆ ಬರವಿಲ್ಲ, ಆದರೆ ಪ್ರಾಮಾಣಿಕತೆಯ ಕೊರತೆ ಬಹಳವಿದೆ. ದೃಢ ನಿರ್ಧಾರದ ಓಟಗಾರನೊಬ್ಬ ಸಿಕ್ಕುವುದಾದರೆ ಒಲಿಂಪಿಕ್ ಪದಕ ಗೆಲ್ಲುವುದು ನಮಗೆ ಏನೇನೂ ಕಷ್ಟವಾಗಲಾರದು. ಪದಕ ಗೆಲ್ಲುವ ಆ ಕ್ಷಣ ನಿಜವಾಗಿ ದೇಶದಲ್ಲಿ ನನ್ನಷ್ಟು ಸಂತೋಷಪಡುವ ವ್ಯಕ್ತಿ ಇನ್ನೊಬ್ಬನಿರಲಾರ."

ನಮ್ಮ ವೈಯಕ್ತಿಕ ಸಾಧನೆಗಳಿಂದ ಪರಿಮಿತವಾದ ಶ್ರೇಯಸ್ಸು ಸಿಕ್ಕಿದರೆ ತೃಪ್ತಿಪಟ್ಟುಕೊಳ್ಳುವುದು ಲೋಕಾರೂಢಿ. ಆದರೆ ಒಂದು ರಾಷ್ಟ್ರದ ಗೌರವವನ್ನು ಹೆಚ್ಚಿಸುವ ಸಲುವಾಗಿ ತುಡಿಯುವವರು ವಿರಳರೆಂದೇ ಹೇಳಬೇಕು. ಅಂಥ ವಿರಳರ ಪಂಕ್ತಿಯಲ್ಲಿ ಕಾಣುವ ಮಿಲ್ಖಾ ಸಿಂಗರ ವಿಷಾದದ ಗಾಢತೆ ಅಳತೆಗೆ ನಿಲುಕದ್ದು. ಅವರ ಬದುಕಿನುದ್ದಕ್ಕೂ ನೆರಳಿನ ಹಾಗೆ ಸಾಗುವ ವೈರಾಗ್ಯ ಅವರ ಕಣ್ಣಂಚಿನಲ್ಲಿ ಹನಿಯಾಗಿ ಮಿಂಚುತ್ತದೆ, ಅದನ್ನು ಕಂಡು ಬದುಕಿನ ರಹಸ್ಯ ಗೋಚರವಾಯಿತೆಂದು ನಾವು ಮತ್ತೆ ಅವರ ಕಡೆ ತಿರುಗುವ ಹೊತ್ತಿಗೆ ಮಿಲ್ಖಾ ಸಿಂಗ್ ಮೌನಿಯಾಗುತ್ತಾರೆ. ಕೋಟಿ ಕೋಟಿ ಯುವಕರಲ್ಲಿ ಇವರ ಕನಸನ್ನು ನನಸು ಮಾಡುವವರು ಯಾರೂ ಇಲ್ಲವೆ? ನಮ್ಮ ಯುವಕರು ಬೇರೆ ಕೆಲಸದಲ್ಲಿ ಬಿಸಿಯಾಗಿರಬಹುದೆ? ಅಟ್ಲಾಂಟಾ ಒಲಿಂಪಿಕ್ಸ್—ಯಾರಿದ್ದೀರಿ?

# ನಿಮ್ಮ ಭಾವನಾತ್ಮಕ ಬುದ್ಧ್ಯಂಕವೆಷ್ಟು?

ಶಂಸ ಐತಾಳ

ಸುಡುಬೇಸಿಗೆಯ ಒಂದು ಉರಿ ಮಧ್ಯಾಹ್ನ ನಗರದ ಬಸ್‌ಸ್ಟಾಪ್ ಒಂದರಲ್ಲಿ ಸಿಟಿಬಸ್‌ಗಾಗಿ ಕಾಯುತ್ತ ಫುಟ್‌ಪಾತಿನಲ್ಲಿ ನಿಂತಿದ್ದೆ. ಬಸ್ ಬಂದು ನಿಲ್ಲುತ್ತಲೇ ಸ್ವಾಗತದ ಧ್ವನಿ. 'ಬನ್ನಿ, ಬನ್ನಿ ಸರ್, ನಿಧಾನವಾಗಿ ಏರಿ'—ಇತ್ಯಾದಿ. ಧ್ವನಿ ಬಂದತ್ತ ತಿರುಗಿ ನೋಡಿದೆ. ಅದೇ ಮಧ್ಯವಯಸ್ಸಿನ ಕಂಡಕ್ಟರ್, ಮುಖದ ಮೇಲೆ ಸದಾ ಸುಳಿದಾಡುವ ಮುಗುಳ್ನಗು. 'ಚೆನ್ನಾಗಿದ್ದೀರಾ?' ಎಂದು ಅವನು ಪ್ರತಿಯೊಬ್ಬ ಪ್ರಯಾಣಿಕನನ್ನು ವಿಚಾರಿಸಿ ಆ ಮೇಲೆ ಕೇಳುತ್ತಿದ್ದ: 'ಎಲ್ಲಿಗೆ?'

ಈ ಕಂಡಕ್ಟರನನ್ನು ನಾನು ಹಲವು ಸಲ ಕಂಡಿದ್ದೇನೆ, ಅವನ ಬಸ್ಸಿನಲ್ಲಿಯೇ ಹಲವುಸಲ ಪ್ರಯಾಣಮಾಡಿದ್ದೇನೆ. ಸದಾ ಲವಲವಿಕೆಯ ಮನುಷ್ಯ, ಮಾತುಗಾರ. ತಾನು ನೋಡಿದ ಎಷ್ಟೋ ಸಂಗತಿಗಳ ಬಗ್ಗೆ ಸ್ವಾರಸ್ಯಕರ ವೀಕ್ಷಕ ವಿವರಣೆ ನೀಡುತ್ತಿದ್ದ: ಆ ಬಟ್ಟೆ ಅಂಗಡಿಯಲ್ಲಿ ಸೀರೆಗಳ ಎಂಥ ಭಯಂಕರ ರಿಯಾಯತಿ ಮಾರಾಟ ನಡೆಯುತ್ತಿದೆ! ವೆಂಕಟಪ್ಪ ಗ್ಯಾಲರಿಯಲ್ಲಿ ನಡೆಯುತ್ತಿರುವ ಚಿತ್ರಪ್ರದರ್ಶನ ಎಷ್ಟು ಅದ್ಭುತ! ನಿನ್ನೆ ಶುಕ್ರವಾರವಷ್ಟೇ ಪ್ರಾರಂಭವಾದ ಹೊಸ ಸಿನೆಮಕ್ಕೆ ಟಿಕೆಟ್ ಪಡೆಯುವುದು ಸಕತ್ ಕಷ್ಟ! ಥಿಯೇಟರ್ ಪಕ್ಕ ಮೈಲುದ್ದದ ಕ್ಯೂ, ಟಿಕೆಟ್‌ಗಳ ಕಾಳಸಂತೆ ಮಾರಾಟ ಇಷ್ಟೊಂದು ಮಾತುಗಳ ನಡುವೆ ಕೂಡ ಸ್ಟಾಪ್ ಬಂದಾಗ ಆ ಸ್ಟಾಪ್‌ನ ಹೆಸರು ಕೂಗಿ ಪ್ರಯಾಣಿಕರಿಗೆ ತಿಳಿಸುವ ಕ್ರಮ, ಶಿಸ್ತು—ಇವುಗಳನ್ನು ಎಂದೂ ಮರೆಯುವವನಲ್ಲ ಆ ಕಂಡಕ್ಟರ್. ಸ್ಟಾಪ್‌ನಲ್ಲಿ ಇಳಿಯುವವರಿಗೆ ವಿದಾಯ: 'ಹೋಗಿ ಬರುತ್ತೀರಾ?' ಬಸ್ ಏರುವ ಮಂದಿಗೆ ಅದೇ ಮುಗುಳ್ನಗೆಯ ಸ್ವಾಗತ: 'ಚೆನ್ನಾಗಿದ್ದೀರಾ?' ಇಷ್ಟೆಲ್ಲ ಮುಗಿದ ಅನಂತರವೇ: ಪ್ರಶ್ನೆ 'ಎಲ್ಲಿಗೆ?' ಮತ್ತೆ ವೀಕ್ಷಕ ವಿವರಣೆ. ನಡುನಡುವೆ ಮರೆಯದೆ ವಿಚಾರಣೆ: 'ಯಾರಿಗಾದರೂ ಚಿಲ್ಲರೆ ಬರಬೇಕೇ? ಕೇಳಿ ತೆಗೆದುಕೊಳ್ಳಿ.'

---

೧೯೯೬ ರ ಫೆಬ್ರವರಿ ತಿಂಗಳ 'ರೀಡರ್ಸ್ ಡೈಜೆಸ್ಟ್.' ಮಾಸಪತ್ರಿಕೆಯಲ್ಲಿ ಪ್ರಕಟವಾದ ಡೇನಿಯಲ್ ಗೋಲ್‌ಮನ್ ಅವರ 'ವಾಟ್ ಈಸ್ ಯುವರ್ ಇಮೋಷನಲ್ ಐ. ಕ್ಯೂ?' ಎಂಬ ಲೇಖನದ ಆಧಾರದಿಂದ.

ಕಳೆದ ಹತ್ತು–ಹನ್ನೆರಡು ವರ್ಷಗಳಿಂದ ಇವನನ್ನು ಆಗಾಗ ಕಾಣುತ್ತ ಬಂದಿದ್ದ ನನಗೆ, ತನ್ನ ಉದ್ಯೋಗದಲ್ಲಿ ಅವನು ಸಂಪೂರ್ಣ ಯಶಸ್ವಿಯಾಗುತ್ತಾನೆ ಎಂಬ ಭರವಸೆಬಂದಿದೆ. ಅವನ ವ್ಯಕ್ತಿತ್ವವೇ ಅಂಥದು—ಸದಾ ಜಯ ಪಡೆಯುವಂಥದು, ಎಂದೂ ಸೋಲು ಅನುಭವಿಸದಂಥದು.

ಇದಕ್ಕೆ ವ್ಯತಿರಿಕ್ತವಾದ ಇನ್ನೊಂದು ನಿದರ್ಶನ ನೋಡಿ. ನಗರದ ಹೆಸರಾಂತ ಹೈಸ್ಕೂಲೊಂದರ ಕೊನೆಯ ವರ್ಷದ ವಿದ್ಯಾರ್ಥಿ, ಎಲ್ಲ ವಿಷಯಗಳಲ್ಲಿಯೂ ಶೇಕಡ ೯೦–೯೫ ಅಂಕಗಳಿಸುವ ಪ್ರತಿಭಾವಂತ. ಶಾಲಾ ಉಪಪರೀಕ್ಷೆಯೊಂದರಲ್ಲಿ ವಿಜ್ಞಾನದಲ್ಲಿ ಕೇವಲ ೪೦ ಅಂಕಗಳು ಬಂದಾಗ, ಅವನು ಮಾಡಿದ್ದಾದರೂ ಏನು? ಹರಿತವಾದ ಚಾಕುವನ್ನು ಹಿಡಿದು ಶಾಲೆಗೆ ಹೋದ, ಪ್ರಯೋಗಾಲಯದಲ್ಲಿ ಕೆಲಸಮಾಡುತ್ತ ಕುಳಿತಿದ್ದ ಅಧ್ಯಾಪಕರ ಮೇಲೆ ಹಲ್ಲೆ ನಡೆಸಿದ, ಅವರನ್ನು ಗಾಯಗೊಳಿಸಿದ.

ಪ್ರತಿಭಾವಂತ ವಿದ್ಯಾರ್ಥಿಯೊಬ್ಬ ಇಂಥ ನೀಚ ಕೆಲಸ, ಹೇಯ ಕಾರ್ಯ ಮಾಡಬಹುದೆಂದು ಯಾರಾದರೂ ಊಹಿಸಲು ಸಾಧ್ಯವೆ? ನಂಬಲು ಸುಲಭಸಾಧ್ಯವಲ್ಲದ, ಆದರೆ ನಿಜವಾಗಿಯೂ ನಡೆದ ಘಟನೆ. ಅತ್ಯಂತ ಹೆಚ್ಚು ಬುದ್ಧಿಶಕ್ತಿ ಅಂದರೆ ಬುದ್ಧ್ಯಂಕ ಇರುವ ವ್ಯಕ್ತಿಗಳು ಜೀವನದಲ್ಲಿ ಯಶಸ್ಸು ಸಾಧಿಸುತ್ತಾರೆ ಎಂದೇನೂ ಭಾವಿಸುವಂತಿಲ್ಲ ಎಂದು ಈ ಘಟನೆ ಸೂಚಿಸುತ್ತದೆ. ಬದುಕಿನಲ್ಲಿ ಸರ್ವತೋಮುಖ ಯಶಸ್ಸು ಲಭಿಸುತ್ತದೆಯೆ ಇಲ್ಲವೆ ಎಂದು ತೀರ್ಮಾನಿಸುವ ಅಂಶಗಳಲ್ಲಿ ಬುದ್ಧ್ಯಂಕದ ಕೊಡುಗೆ ಶೇಕಡಾ ಇಪ್ಪತ್ತರಷ್ಟು ಮಾತ್ರ ಎಂಬುದು ಆಧುನಿಕ ಮನೋವಿಜ್ಞಾನಿಗಳ ಅಭಿಪ್ರಾಯ. ಉಳಿದ ಶೇ. ಎಂಬತ್ತರಷ್ಟು ಅಂಶಗಳು ಬೇರೆಯೇ ಆಗಿರುತ್ತವೆ. ಇವು ವ್ಯಕ್ತಿಯ ಒಟ್ಟು ವ್ಯಕ್ತಿತ್ವಕ್ಕೆ, ಅವನ ವ್ಯವಹಾರ ಜ್ಞಾನಕ್ಕೆ, ಸಾಮಾನ್ಯ ತಿಳುವಳಿಕೆಗೆ, ಆಲೋಚನಾಶಕ್ತಿಗೆ ಮತ್ತು ಸಕಾಲಿಕ ವರ್ತನೆಗೆ ಸಂಬಂಧಿಸಿರುತ್ತದೆ. ಇವನ್ನೇ ನಾವು ಭಾವನಾತ್ಮಕ ಬುದ್ಧಿಶಕ್ತಿ ಅಥವಾ ಇ.ಐ. (ಇಮೋಷನಲ್ ಇಂಟಲಿಜೆನ್ಸ್) ಎಂದು ಕರೆಯುತ್ತೇವೆ.

ವ್ಯಕ್ತಿಯ ಇ.ಐ.ಯ ಆಧಿಕ್ಯಕ್ಕೆ ಕಾರಣವಾಗಬಲ್ಲ ಕೆಲವು ಮುಖ್ಯ ಗುಣಲಕ್ಷಣ ಸ್ವಭಾವಗಳನ್ನು ಅವುಗಳನ್ನು ಹೇಗೆ ಅಭಿವೃದ್ಧಿಗೊಳಿಸಿಕೊಳ್ಳಬಹುದೆಂಬುದನ್ನು ಈಗ ನೋಡೋಣ.

### ೧. ತನ್ನ ಬಗೆಗಿನ ಅರಿವು

ತನಗೆ ಏನಾದರೂ ಅನಿಸಿದಾಗ, ಆ ಅನಿಸಿಕೆಯನ್ನು, ಭಾವನೆಯನ್ನು ಸಂಪೂರ್ಣ ಅರಿತುಕೊಳ್ಳುವ ಸಾಮರ್ಥ್ಯವೇ ವ್ಯಕ್ತಿಯ ಇ.ಐ.ಯನ್ನು ನಿರ್ಧರಿಸುವ ಪ್ರಮುಖ ಅಂಶ. ತಮ್ಮ ಭಾವನೆಗಳ ಬಗ್ಗೆ ಹೆಚ್ಚು ಖಚಿತವಾದ ಅರಿವಿರುವ ವ್ಯಕ್ತಿಗಳು ತಮ್ಮ ಜೀವನಕ್ಕೆ ತಾವೇ ಉತ್ತಮ ಮಾರ್ಗದರ್ಶಕರಾಗಬಲ್ಲರು.

ತನ್ನ ಬಗೆಗಿನ ಅರಿವನ್ನು ಬೆಳೆಸಿಕೊಳ್ಳುವುದು ಹೇಗೆ? ತನ್ನ ಅಂತರ್ಗತ ಭಾವನೆಗಳನ್ನು ಸಂಪೂರ್ಣವಾಗಿ, ನಿಸ್ಪಷ್ಟವಾಗಿ ತಿಳಿದುಕೊಂಡಾಗಲೇ ಇದು ಸಾಧ್ಯ. ಈ ಅಂತರ್ಗತ ಭಾವನೆಗಳೇನೆಂಬುದನ್ನು ಎಷ್ಟೋಬಾರಿ ವ್ಯಕ್ತಿ ಪ್ರಜ್ಞಾಪೂರ್ವಕ

ವಾಗಿ ತಿಳಿದುಕೊಂಡಿರುವುದಿಲ್ಲ. ಉದಾಹರಣೆಗೆ, ಹಾವುಗಳೆಂದರೆ ಭಯ ಪಡುವ ವ್ಯಕ್ತಿಗಳಿಗೆ ಹಾವಿನ ಚಿತ್ರವನ್ನು ತೋರಿಸಿದಾಗ, ಅವರು ತಮಗರಿವಿಲ್ಲದಂತೆಯೇ ಬೆವರುತ್ತಾರೆ. ತಮಗೆ ಭಯವಾಗಿಲ್ಲವೆಂದು ಅವರು ಹೇಳಿದರೂ ಅವರ ಮಾತಿನಲ್ಲಿಯೇ ಆತಂಕ ಕಾತರಗಳ ಚಿಹ್ನೆ ಕಾಣುತ್ತದೆ. ತನ್ನೆದುರಿಗೆ ಹಿಡಿದ ಚಿತ್ರ ಹಾವಿನದು ಎಂದು ಪ್ರಜ್ಞಾಪೂರ್ವಕವಾಗಿ ಗಮನಿಸಲು ವ್ಯಕ್ತಿಗೆ ಸಾಧ್ಯವಾಗದಷ್ಟು ವೇಗವಾಗಿ ಹಾವಿನ ಚಿತ್ರವನ್ನು ಅವನ ಮುಂದೆ ಪ್ರದರ್ಶಿಸಿ, ಹಿಂದೆ ತೆಗೆದುಕೊಂಡಾಗ ಕೂಡ ಅವನ ಮೈಯಲ್ಲಿ ಭಯದಿಂದಾಗಿ ಬೆವರಿನ ಹನಿಗಳು ಮೂಡಿದ ಉದಾಹರಣೆಗಳು ಉಂಟು.

ನಮ್ಮ ಅಂತರ್ಗತ ಭಾವನೆಗಳ ಬಗ್ಗೆ ಹೆಚ್ಚು ಅರಿವು ಹೊಂದಲು ಉದ್ದೇಶಪೂರ್ವಕ ಪ್ರಯತ್ನದಿಂದ ಸಾಧ್ಯ. ಅಹಿತಕರ ಘಟನೆಯೊಂದು ಸಂಭವಿಸಿದ ಕೆಲವು ಗಂಟೆಗಳ ತರುವಾಯ ಆ ಕುರಿತು ವಿಷಾದಪಡಲು ಪ್ರಾರಂಭಿಸುವ ವ್ಯಕ್ತಿಯನ್ನೆ ತೆಗೆದುಕೊಳ್ಳಿ. ಯಾರೋ ಒಬ್ಬರು ಆ ಅಹಿತಕರ ಘಟನೆಯತ್ತ ವ್ಯಕ್ತಿಯ ಗಮನ ಸೆಳೆದುದೇ ಅವನ ವಿಷಾದಕ್ಕೆ ಕಾರಣವಾಗಿರುತ್ತದೆ. ಎಂದರೆ ಇಲ್ಲಿ ವ್ಯಕ್ತಿಗೆ ತನ್ನ ಅಂತರ್ಗತ ಭಾವನೆಯ ಬಗ್ಗೆ ಪ್ರಜ್ಞಾಪೂರ್ವಕವಾದ ಅರಿವು ಮೊದಲು ಇದ್ದಿರುವುದಿಲ್ಲ.

ಇ.ಐ.ಯನ್ನು ಬೆಳೆಸಿಕೊಳ್ಳುವಲ್ಲಿ ಹೀಗೆ ತನ್ನ ಬಗೆಗಿನ ಅರಿವನ್ನು ಸಂಪೂರ್ಣವಾಗಿ ಹೊಂದುವುದು ಮೊದಲ ಹಂತವಾಗಿದ್ದರೆ, ಕೆಟ್ಟ ಮನೋಭಾವಗಳನ್ನು ದೂರ ಮಾಡುವುದು ಎರಡನೆಯ ಹಂತವಾಗಿರುತ್ತದೆ.

## ೨. ಮನೋಭಾವಗಳ ನಿರ್ವಹಣೆ

ಮನೋಭಾವಗಳು, ಒಳ್ಳೆಯವಾಗಿರಲಿ ಅಥವಾ ಕೆಟ್ಟವೇ ಆಗಿರಲಿ, ಬದುಕಿನ ಸ್ವಾರಸ್ಯವನ್ನು ಹೆಚ್ಚಿಸುತ್ತವೆ ಹಾಗೂ ವ್ಯಕ್ತಿಯ ಗುಣಸ್ವಭಾವಗಳನ್ನು ರೂಪಿಸುತ್ತವೆ. ಒಳ್ಳೆಯ ಮತ್ತು ಕೆಟ್ಟ ಮನೋಭಾವಗಳ ಸಮತೋಲನವೇ ಜೀವನದ ಯಶಸ್ಸಿಗೆ ಕಾರಣ.

ಭಾವೋದ್ರೇಕಕ್ಕೆ ಒಳಗಾದಾಗ ನಮಗೆ ನಮ್ಮ ಮೇಲೆಯೇ ನಿಯಂತ್ರಣ ಇರುವುದಿಲ್ಲ. ಮನಸ್ಸಿನ ಉದ್ವಿಗ್ನಸ್ಥಿತಿ ಎಷ್ಟು ಕಾಲ ಇರುತ್ತದೆಂದು ಹೇಳುವುದು ಕೂಡ ಸಾಧ್ಯವಿಲ್ಲ. ಅಹಿತಕರ ಚಿತ್ತವೃತ್ತಿಗಳನ್ನು ಸಾಧ್ಯವಾದಷ್ಟು ಬೇಗ ದೂರಮಾಡಬೇಕು. ಇದು ಹೇಗೆ? ಕೆಲವು ಆಧುನಿಕ ಮನೋವಿಜ್ಞಾನಿಗಳು ನಡೆಸಿದ ಸಮೀಕ್ಷೆಗಳಿಂದ ಕೆಲವು ಅಮೂಲ್ಯ ಮಾಹಿತಿಗಳು ಲಭಿಸಿವೆ.

ಅನೇಕ ಜನರು ಪಾರಾಗಲು ಬಯಸುವ ಕೆಟ್ಟ ಮನೋಭಾವಗಳಲ್ಲಿ ಅತ್ಯಂತ ಪ್ರಮುಖವಾದುದೆಂದರೆ ಕೋಪೋದ್ರೇಕ ಅಥವಾ ಸಿಡುಕುತನ. ಸಿಟ್ಟನ್ನು ನಿಯಂತ್ರಿಸುವುದೂ ತುಂಬ ಕಷ್ಟ. ಹೆದ್ದಾರಿಯಲ್ಲಿ ಸಾಗುತ್ತಿರುವಾಗ ಮಾರ್ಗಮಧ್ಯದಲ್ಲಿ ನಿಮ್ಮ ಕಾರನ್ನು ಇನ್ನೊಂದು ಕಾರು ಹಿಂದೆ ಹಾಕಿ ಮುಂದೆ ಹೋದರೆ, ಆಗ ನೀವು ಸಿಟ್ಟಾಗುತ್ತೀರಿ. ಇಂಥ ಸಿಟ್ಟು–ಕೆರಳುವಿಕೆ–ಮಿದುಳಿನ ಉತ್ತೇಜನ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ಸಂಶೋಧಕರು ಹೇಳುತ್ತಾರೆ.

ಇಂಥ ಕೋಪೋದ್ರೇಕವುಂಟಾಗದಂತೆ ಎಚ್ಚರ ವಹಿಸುವುದು ಹೇಗೆ? ಎಲ್ಲವೂ ನಿಮ್ಮ ಕೈಯಲ್ಲಿಯೇ ಇದೆ, ಎಂದರೆ ನೀವು ಆಲೋಚಿಸುವ ವಿಧಾನದಲ್ಲಿಯೇ ಇದೆ. ನಡೆದ ಘಟನೆಯನ್ನು-ಸಂಗತಿಯನ್ನು-ಹೆಚ್ಚು ಇತ್ಯಾತ್ಮಕವಾದ ಬೆಳಕಿನಲ್ಲಿ ಅರ್ಥ ಮಾಡಿಕೊಳ್ಳಲು ನೀವು ಪ್ರಯತ್ನಿಸಬೇಕು ಅಷ್ಟೆ. ಇನ್ನೊಂದು ಕಾರು ನಿಮ್ಮ ಕಾರನ್ನು ಹಿಂದೆ ಹಾಕಿ ಮುಂದೆ ಹೋದಾಗ, 'ಆ ಕಾರಿನಲ್ಲಿರುವವರು ಬಹುಶ: ಯಾವುದೋ ತುರ್ತು ಪರಿಸ್ಥಿತಿಯಲ್ಲಿರಬೇಕು' ಎಂದು ಮುಂತಾಗಿ ಆಲೋಚಿಸಿ. ಆಗ ಸಿಟ್ಟು ತನಗೆತಾನೇ ಅಡಗಿಹೋಗುತ್ತದೆ.

ಯಾವುದೇ ವಿಧದ ಭಾವೋದ್ವಿಗ್ನತೆಗೆ ಒಳಗಾದಾಗ, ಮನಸ್ಸನ್ನು ಸಮಾಧಾನ ಪಡಿಸಿಕೊಳ್ಳಲು ನಡೆದ ಸಂಗತಿಯನ್ನು ಕುರಿತಂತೆ ಸ್ಪಷ್ಟವಾಗಿ ಆಲೋಚಿಸುವುದು ಅಗತ್ಯ. ಗುಂಪಿನಲ್ಲಿರುವಾಗ ಆಲೋಚಿಸುವುದು ಕಷ್ಟವಾದ್ದರಿಂದ, ಮನಸ್ಸು ಉದ್ವಿಗ್ನಗೊಂಡಾಗ ಒಂಟಿಯಾಗಿ ಜನರಹಿತ ಪ್ರದೇಶದತ್ತ ವಾಕಿಂಗ್ ಹೋಗುವುದು ಒಳ್ಳೆಯದು. ಕೋಪ, ಆತಂಕ, ಭಯ, ಹತಾಶೆ ಮೊದಲಾದ ಚಿತ್ತವೃತ್ತಿಗಳಿಂದ ತಪ್ಪಿಸಿಕೊಳ್ಳಲು ಯೋಗ, ಧ್ಯಾನ, ಪ್ರಾರ್ಥನೆಗಳೂ ಕೆಲಮಟ್ಟಿಗೆ ನೆರವಾಗುತ್ತವೆ.

## ೩. ಸ್ವಯಂಪ್ರೇರಣೆ

ಉತ್ಸಾಹ, ಕುತೂಹಲ, ಭರವಸೆ, ಹಂಬಲ ಮೊದಲಾದುವನ್ನು ತಕ್ಕ ಕ್ರಮದಲ್ಲಿ ಯೋಜಿಸಿ, ಉಪಯುಕ್ತ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಂತೆ ತನ್ನನ್ನು ತಾನೇ ಪ್ರಚೋದಿಸಿಕೊಳ್ಳುವುದರಿಂದ ಬದುಕಿನಲ್ಲಿ ಅತ್ಯುನ್ನತ ಮಟ್ಟದ ಸಾಧನೆ ಸಾಧ್ಯವಾಗುತ್ತದೆ. ಒಲಂಪಿಕ್ ಕ್ರೀಡಾಪಟುಗಳು, ಜಗದ್ವಿಖ್ಯಾತ ಸಾಹಿತಿ-ಕಲಾವಿದ-ಹಾಡುಗಾರರು ಹಾಗೂ ಚದುರಂಗ ಕ್ರೀಡಾಪರಿಣತರ ಜೀವನ ಚರಿತ್ರೆಗಳ ಅಧ್ಯಯನದಿಂದ, ಈ ಸಾಧಕರ ಪರಿಪೂರ್ಣ ಸಾಧನೆಗಳಿಗೆ ಅವರಲ್ಲಿದ್ದ ಸ್ವಯಂ ಪ್ರೇರಣೆ-ಸ್ವಯಂ ಪ್ರಚೋದನಾ ಸಾಮರ್ಥ್ಯಗಳೇ ಕಾರಣವೆಂದು ತಿಳಿದು ಬಂದಿದೆ.

ನಿಮ್ಮನ್ನು ನೀವೇ ಪ್ರಚೋದಿಸಿಕೊಂಡು ಕಾರ್ಯನಿರ್ವಹಣೆಯಲ್ಲಿ ಯಶಸ್ಸು ಪಡೆಯಬೇಕೇ? ಹಾಗಿದ್ದರೆ ಮೊದಲನೆಯದಾಗಿ ನಿಮಗೆ ಸ್ಪಷ್ಟವಾದ, ಖಚಿತವಾದ ಧ್ಯೇಯೋದ್ದೇಶಗಳಿರಬೇಕು, ಎರಡನೆಯದಾಗಿ ನೀವು ನಿರಾಶಾವಾದಿಗಳಾಗಿರಕೂಡದು; ಮೂರನೆಯದಾಗಿ 'ಏನನ್ನು ಬೇಕಾದರೂ ಸಾಧಿಸಬಲ್ಲೆ' ಎಂಬ ಆತ್ಮವಿಶ್ವಾಸ ನಿಮ್ಮಲ್ಲಿರಬೇಕು. ನಿಮ್ಮ ಪ್ರತಿಕ್ರಿಯೆಯೂ ಸದಾ ಇತ್ಯಾತ್ಮಕವಾಗಿರಬೇಕು. ಉದಾಹರಣೆಗೆ, ನೀವು ಸೇಲ್ಸ್‌ಮನ್ ಆಗಿದ್ದೀರೆಂದುಕೊಳ್ಳಿ. ನಿರೀಕ್ಷಿತ ಪ್ರಮಾಣದ ಉತ್ಪಾದನೆಗಳನ್ನು ಮಾರಲು ನಿಮಗೆ ಸಾಧ್ಯವಾಗದೆ ಹೋಯಿತು ಎಂದುಕೊಳ್ಳಿ. ಅಂಥ ಸಂದರ್ಭದಲ್ಲಿ 'ನಾನು ಈ ವೃತ್ತಿಯಲ್ಲಿ ಗೆಲವು ಪಡೆಯಲಾರೆ' ಎಂದು ಎಂದೂ ಭಾವಿಸಬೇಡಿ. ಬದಲಾಗಿ 'ಬಹುಶ: ನಾನು ಗ್ರಾಹಕನ ಮೇಲೆ ಪ್ರಭಾವವುಂಟಾಗುವ ರೀತಿಯಲ್ಲಿ ಮಾತನಾಡಲಿಲ್ಲ' ಅಥವಾ 'ಆ ಗ್ರಾಹಕನ ಮನೋಭಾವ ಚೆನ್ನಾಗಿಲ್ಲದೆ ಇರುವ ಕಾಲದಲ್ಲಿ ನಾನು

ಅವನನ್ನು ಮಾತನಾಡಿಸಬಾರದಾಗಿತ್ತು' ಎಂದು ಕೊಳ್ಳಿ. ಆಶಾವಾದಿಗಳು ತಮ್ಮ ಸೋಲಿಗೆ ತಾವೇ ಕಾರಣರೆಂದು ಎಂದೂ ಭಾವಿಸುವುದಿಲ್ಲ, ಅವರು ಸೋಲಿಗೆ ಸನ್ನಿವೇಶವನ್ನೇ ಕಾರಣವಾಗಿ ತಿಳಿಯುತ್ತಾರೆ ಹಾಗೂ ಇನ್ನೊಮ್ಮೆ ಸ್ವಯಂ ಪ್ರೇರಣೆಯಿಂದ ಕೆಲಸವನ್ನು ಪ್ರಾರಂಭಿಸುತ್ತಾರೆ.

## ೪. ಆವೇಗ ನಿಯಂತ್ರಣ

ಯಾವುದೇ ಕೆಲಸವಿರಲಿ, ಬೇಗಮಾಡಿ ಮುಗಿಸೋಣ ಎಂಬ ಆತುರ ಸರ್ವಥಾ ಬೇಡ, ಆವೇಗಪರತೆ ಬೇಡ, ಕಾರ್ಯ ಸಾಧನೆಗೆ ತಕ್ಕುದಾದ ಕಾಲ ಬರುವ ತನಕ ಕಾಯುವ ತಾಳ್ಮೆ ಇರಲಿ. ಯಾವುದೇ ತಾತ್ಕಾಲಿಕ ಪ್ರಲೋಭನೆಗೆ ಬಲಿಯಾಗ ಬೇಡಿ. ನಿಮ್ಮ ಅಂತಿಮ ಉದ್ದೇಶವೇನೆಂಬುದನ್ನು ಸದಾ ನೆನಪಿಗೆ ತಂದುಕೊಳ್ಳುತ್ತಾ, ಆ ಉದ್ದೇಶ ಸಾಧನೆಗೆ ಸರಿಯಾದ ಸಮಯ ಬಂದಾಗಲೇ ಕಾರ್ಯಮಗ್ನರಾಗಿ.

## ೫. ಜನಸಂಪರ್ಕ ಕೌಶಲ

ಉದ್ಯೋಗ ಕ್ಷೇತ್ರದಲ್ಲಾಗಲಿ, ಪ್ರಣಯ ಪ್ರಕರಣದಲ್ಲಿಯೇ ಆಗಲಿ, ಸ್ನೇಹಸಂಬಂಧದಲ್ಲಾಗಲಿ, ಕೌಟುಂಬಿಕ ಸಂಬಂಧಗಳಲ್ಲಿಯೇ ಆಗಲಿ, ಯಶಸ್ಸು ಸಾಧಿಸಬೇಕಾದರೆ, ಇತರರು ನಿಮ್ಮ ಬಗ್ಗೆ ನಿಜವಾಗಿಯೂ ಏನು ಭಾವಿಸಿದ್ದಾರೆ ಎಂದು ತಿಳಿದುಕೊಳ್ಳುವ ಶಕ್ತಿ ನಿಮಗಿರಬೇಕು. ಏಕೆಂದರೆ ಜನರ ನಡುವಿನ ಪರಸ್ಪರ ಸಂಬಂಧಗಳು ತುಂಬ ಸೂಕ್ಷ್ಮವಾಗಿರುತ್ತವೆ, ಸುಲಭದಲ್ಲಿ ಅರ್ಥಮಾಡಿಕೊಳ್ಳಲು ಸಾಧ್ಯವಾಗದಷ್ಟು ಸಂಕೀರ್ಣವಾಗಿರುತ್ತವೆ. ಉದಾಹರಣೆಗೆ, ಯಾರಾದರೂ ನಿಮಗೆ ಕೃತಜ್ಞತೆ ಸೂಚಿಸಿದರು ಎನ್ನೋಣ ಅವರು ಕೃತಜ್ಞತೆ ಸೂಚಿಸಿದ ರೀತಿ, ಅವರ ಸ್ವರ, ಅಭಿನಯ ಮೊದಲಾದವುಗಳಿಂದ ಅವರು ನಿಜವಾಗಿ ನಿಮ್ಮನ್ನು ಹೊಗಳುತ್ತಿದ್ದಾರೆಯೋ ಅಥವಾ ನಿಮ್ಮನ್ನು ಅವರು ಮೆಚ್ಚಿಕೊಂಡೇ ಇಲ್ಲವೋ ಎಂದು ತಿಳಿಯಲು ನಿಮಗೆ ಸಾಧ್ಯವಾಗಬೇಕು.

ಪರಸ್ಪರರನ್ನು ಅರ್ಥಮಾಡಿಕೊಳ್ಳುವ ಕೌಶಲವುಳ್ಳವರು ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಯಶಸ್ಸು ಸಾಧಿಸುತ್ತಾರೆ. ಯಶಸ್ಸಿಗೆ, ಹಿಂದೆಯೇ ಹೇಳಿದಂತೆ, ವ್ಯಕ್ತಿಯ ಬುದ್ಧ್ಯಂಕ ಒಂದೇ ಕಾರಣವಲ್ಲ, ಅತ್ಯುಚ್ಚ ಬುದ್ಧ್ಯಂಕವನ್ನೇ ಹೊಂದಿರುವಂಥ ಎಂಜಿನಿಯರರೂ ವಿಜ್ಞಾನಿಗಳೂ ಸಂಶೋಧಕರೂ ಇರುವ ಸಂಸ್ಥೆಯೊಂದರಲ್ಲಿ ಇತ್ತೀಚೆಗೆ ನಡೆದ ಒಂದು ಸಮೀಕ್ಷೆ, ಆ ಸಿಬ್ಬಂದಿಗಳಲ್ಲಿ ಕೆಲವರು ಮಾತ್ರ 'ತಾರೆ'ಗಳಾಗಿದ್ದು ಉಳಿದವರು ಅಪ್ರಸಿದ್ಧರಾಗಿರುವುದನ್ನು ಬೆಳಕಿಗೆ ತಂದಿದೆ.

ಒಂದೇ ಸಂಸ್ಥೆಯಲ್ಲಿರುವ, ಒಂದೇ ಬುದ್ಧ್ಯಂಕ ಮಟ್ಟದ, ವಿದ್ಯಾವಂತರಲ್ಲಿ ಕೆಲವರು ಮಾತ್ರ ಖ್ಯಾತಿ ಪಡೆದು, ಉಳಿದವರು ಜನರ ನೆನಪಿನಿಂದ ಮರೆಯಾಗುವುದಕ್ಕೆ ಕಾರಣವಾದರೂ ಏನು? ಸುಪ್ರಸಿದ್ಧ 'ತಾರೆ'ಗಳು ಸದಾ ವ್ಯಾಪಕ ಜನಸಂಪರ್ಕವನ್ನು ಇರಿಸಿಕೊಂಡಿರುತ್ತಾರೆ. 'ತಾರೆ'ಗಳೆನಿಸದ ಅಪ್ರಸಿದ್ಧರು, ತಾಂತ್ರಿಕ ಸಮಸ್ಯೆಗಳೇನಾದರೂ ಎದುರಾದಾಗ, 'ವಿವಿಧ ತಾಂತ್ರಿಕ ತಜ್ಞರನ್ನು ಸಲಹೆಗಾಗಿ ಕರೆಯು

ತ್ತಾರೆ, ಅವರಿಗಾಗಿ ಕಾಯುತ್ತಾರೆ, ಅಂತ ತಜ್ಞರು ಬರುವವರೆಗೆ ಇವರ ಕಾಲ ವ್ಯರ್ಥವಾಗುತ್ತದೆ. ಆದರೆ 'ತಾರೆ'ಗಳು ಇಂಥ ಸಮಸ್ಯೆಗಳು ಬಂದಾಗ, ತತ್‌ಕ್ಷಣವೇ ತಜ್ಞರ ನೆರವುಪಡೆಯುವ ಸ್ಥಿತಿಯಲ್ಲಿರುತ್ತಾರೆ. ಎಂದರೆ ಅವರ ಜನಸಂಪರ್ಕ ಕೌಶಲ ಅಷ್ಟೊಂದು ಚೆನ್ನಾಗಿರುತ್ತದೆ. 'ತಾರೆ'ಗಳಿಗೆ ಇತರರ ಸಹಾಯ ಕೂಡಲೇ ದೊರೆಯುತ್ತದೆ.

ಆದ್ದರಿಂದ ಬುದ್ಧ್ಯಂಕ ಯಾವುದೇ ಇರಲಿ, 'ತಾರೆ'ಗಳನ್ನು ಸರಾಸರಿ ಕೆಲಸಗಾರರಿಗಿಂತ ಪ್ರತ್ಯೇಕಿಸುವ ಅಂಶ ಭಾವನಾತ್ಮಕ ಬುದ್ಧಿಶಕ್ತಿಯೇ ಆಗಿರುತ್ತದೆ.



ಧರ್ಮದಿಂದ ಸಂಪತ್ತು, ಸುಖ ಲಭಿಸುತ್ತದೆ. ಎಲ್ಲ ಇಷ್ಟಾರ್ಥಗಳೂ ಲಭಿಸುವುದು ಧರ್ಮದಿಂದಲೇ. ಆದ್ದರಿಂದ ಧರ್ಮವೇ ಪ್ರಪಂಚದಲ್ಲಿ ಶ್ರೇಷ್ಠವಾದುದು.

—ರಾಮಾಯಣ

ಪ್ರಾಣಿಗಳನ್ನು ಹಿಂಸಿಸುವವನು ಪೂಜ್ಯನಲ್ಲ. ಎಲ್ಲಾ ಪ್ರಾಣಿಗಳನ್ನೂ ಪ್ರೀತಿಸಿ, ಅಹಿಂಸೆಯನ್ನು ಆಚರಿಸುವವನೇ ಪೂಜ್ಯನು.

—ಭಗವಾನ್ ಬುದ್ಧ

ಯಾವ ಪ್ರಾಣಿಯನ್ನೂ ಹಿಂಸಿಸದಿರುವುದು ; ಬೇರೆಯವರ ವಸ್ತುಗಳನ್ನು ಕದಿಯದಿರುವುದು ಮತ್ತು ಸುಳ್ಳು ಹೇಳದಿರುವುದು—ಇವೇ ಸತ್ಪುರುಷರು ಆಚರಿಸಬೇಕಾದ ಧರ್ಮಗಳು.

—ಭಗವಾನ್ ಮಹಾವೀರ

# ವಿದ್ಯುತ್ತಿನ ಅಪಾಯ ತಪ್ಪಿಸುವ ಉಪಾಯಗಳು

ಎಸ್. ಆರ್. ಪಾಟೀಲ

"ವಿದ್ಯುತ್"—ಜಗತ್ತಿನ ನಾಗರಿಕತೆಗೆ ಮುನ್ನಡೆ ನೀಡಬಲ್ಲ ಒಂದು ಅವಶ್ಯಕ ಸಾಧನ. ಇಂದು ನಮಗೆ ಲಭ್ಯವಿರುವ ಎಲ್ಲ ಇಂಧನ ಮೂಲಗಳಲ್ಲಿ ವಿದ್ಯುತ್ತಿಗೇ ಅಗ್ರ ಸ್ಥಾನ; ಮಹತ್ವ. ಇಂದಿನ ನಾಗರಿಕತೆಯ ಪ್ರತಿ ಕ್ಷೇತ್ರದ ಮುನ್ನಡೆಯಲ್ಲಿ ವಿದ್ಯುತ್ತಿನ ಪಾತ್ರ ಅತ್ಯಂತ ಗಮನಾರ್ಹವಾದುದು. ಕೃಷಿಯಿರಲಿ, ಕಾರ್ಖಾನೆಯಿರಲಿ, ಮನೆಯಿರಲಿ, ಬೀದಿಯಿರಲಿ, ಹಳ್ಳಿಯ ಬೋರನಿರಲಿ, ದಿಲ್ಲಿಯ ಮಂತ್ರಿಯಿರಲಿ ಇಂದು ಎಲ್ಲರಿಗೂ—ಎಲ್ಲರಿಗೂ ವಿದ್ಯುತ್ ಬೇಕು. ಅದು ನಮ್ಮ ಬದುಕಿನಲ್ಲಿ ಬೆಳಕಾಗಿ, ಶಕ್ತಿಯಾಗಿ ನೀಡುತ್ತಿರುವ ಸಹಾಯವನ್ನು ಹೊಗಳಲು ಶಬ್ದಗಳೇ ಸಾಲದಾದರೂ, ಅದರಿಂದಾಗುವ ಅನಾಹುತಗಳನ್ನು ನೆನೆದಾಗ ಹೊಗಳಲು ಶಬ್ದಗಳೇ ಹೊರಬರಲಾರವು. ವಿದ್ಯುತ್ ಬಳಕೆಯಲ್ಲಿ ಸ್ವಲ್ಪ ಅಸ್ತವ್ಯಸ್ತವಾದರೂ ನಮ್ಮ ಬದುಕನ್ನೇ ಕಸಿದುಕೊಂಡು ಬಿಡುತ್ತದೆ. ಇತ್ತೀಚೆಗೆ ವಿದ್ಯುತ್ ಅಪಘಾತಗಳು ಹೆಚ್ಚುತ್ತಿವೆ. ಎಷ್ಟೋ ಅಪಘಾತಗಳಲ್ಲಿ ವಿದ್ಯುತ್ ಬಳಕೆಯ ಬಗೆಗಿನ ಅಜ್ಞಾನವೇ ಕಾರಣ ಎಂಬುದು ಅಧ್ಯಯನಗಳಿಂದ ತಿಳಿದು ಬಂದಿದೆ.

## ದುರಂತ

"ರೈತನೊಬ್ಬ ಹೊಲಕ್ಕೆ ನೀರುಣಿಸಲು ಪಂಪ್‌ಸೆಟ್‌ನ ಸ್ವಿಚ್ ಹಾಕಲು ಹೋದಾಗ ಆಕಸ್ಮಿಕವಾಗಿ ವಿದ್ಯುತ್ ಅಪಘಾತಕ್ಕೊಳಗಾಗಿ ಮರಣವನ್ನಪ್ಪಿದ...."; "ಗೃಹಿಣಿಯೊಬ್ಬಳು ಇಲೆಕ್ಟ್ರಿಕ್ ಒಲೆಯಲ್ಲಿ ಅಡುಗೆ ಮಾಡುತ್ತಿರುವಾಗ ವಿದ್ಯುತ್ ಸ್ಪರ್ಶವಾಗಿ ಪಾರ್ಶ್ವವಾಯು ಹೊಡೆತಕ್ಕೆ ಬಲಿಯಾಗಿದ್ದಾಳೆ...."; "ಹತ್ತು ವರ್ಷದ ಮಗು ನೀರು ಕಾಯಿಸಲು ಸ್ನಾನಗೃಹದಲ್ಲಿರುವ ಹೀಟರ್ ಹಾಕಲು ಹೋಗಿ ವಿದ್ಯುತ್ ಹೊಡೆದು ಸ್ನಾನಗೃಹದಲ್ಲೇ ಮರಣ ಹೊಂದಿದೆ...."—ಇಂಥಹ ಸುದ್ದಿಗಳನ್ನು ನಾವು ಪ್ರತಿನಿತ್ಯ ದಿನಪತ್ರಿಕೆಗಳಲ್ಲಿ ಓದುತ್ತೇವೆ; ಅವರಿವರ ಬಾಯಿಂದ ಕೇಳುತ್ತೇವೆ. ಗ್ರಾಮೀಣ ಪ್ರದೇಶಗಳಲ್ಲಂತೂ ರೈತಬಾಂಧವರು ವಿದ್ಯುತ್ತಿನ ಬಗೆಗೆ ಕಿಂಚಿತ್ತೂ ಭಯವಿಲ್ಲದೇ ಅದರೊಡನೆ ವರ್ತಿಸುತ್ತಾರೆ. ನೀರನ್ನು ಹೊಲಗದ್ದೆಗಳಿಗೆ ಹಾಯಿಸಲು ಪಂಪ್‌ಸೆಟ್‌ಗಳಿಗೆ ಬಳಸುವ ಇಂಧನಗಳಲ್ಲಿ ವಿದ್ಯುತ್ತೇ ಸರಳ ಹಾಗೂ ಸಮರ್ಪಕವಾದ ಹಾಗೂ ಕಡಿಮೆ ಖರ್ಚಿನ ಇಂಧನವಾಗಿದ್ದು, ರೈತರು ರಾತ್ರಿಯಲ್ಲೂ ನೀರು ಹಾಯಿಸುತ್ತಾರೆ. ಆದರೆ ಅವರು

ಪಂಪ್‌ಸೆಟ್ಟುಗಾಗಿ ಬಳಸುವ ವಿದ್ಯುತ್ ಸಲಕರಣೆಗಳು ನಿಜಕ್ಕೂ ಕಳಪೆಯಾಗಿರುತ್ತವೆ. ರಾತ್ರಿಯ ಹೊತ್ತು ಬೆಳಕಿನ ಸಹಾಯವೂ ಇಲ್ಲದೆ ಅಭ್ಯಾಸ ಬಲದಿಂದ ಸ್ವಿಚ್ ಹಾಕುತ್ತಾರೆ. ಇದು ಅನಾಹುತಕ್ಕೆ ದಾರಿಯಾಗುತ್ತಲಿದೆ. ಇದಕ್ಕೆ ಕಾರಣ ವಿದ್ಯುತ್ತಿನ ದುರಂತ ಹಾಗೂ ಬಳಕೆಯ ಬಗೆಗೆ ಅವರಿಗೆ ಪರಿಪೂರ್ಣಜ್ಞಾನ ಇಲ್ಲದೇ ಇರುವುದು.

ವಿದ್ಯುತ್ತಿನ ದುರಂತಗಳು ಅನೇಕ ರೂಪದಲ್ಲಿರುತ್ತವೆ. ವಿದ್ಯುತ್ತಿನ ಆಘಾತದಿಂದ ವ್ಯಕ್ತಿ ಸಾಯುವುದರೊಂದಿಗೆ ಅನೇಕ ರೀತಿಯ ಅಂಗವೈಕಲ್ಯಗಳಿಗೂ ಬಲಿಯಾಗುವ ಸಾಧ್ಯತೆಗಳಿವೆ. ಈ ಅಪಾಯಗಳು ಸೌಮ್ಯವಾದ ಸ್ನಾಯು ಸೆಳೆತದಿಂದಾರಂಭಿಸಿ ಉಸಿರಾಟ ನಿಲ್ಲುವವರೆಗೆ ಗಂಭೀರವಾಗಿರುತ್ತವೆ. ಕಡಿಮೆ ವೋಲ್ಟೇಜ್ ವಿದ್ಯುತ್ ಸಹ ನಮ್ಮ ದೇಹದಲ್ಲಿ ಪ್ರವೇಶಿಸುತ್ತಿದ್ದರೆ ಅದು ಮಾಡುವ ಹಾನಿ ತಕ್ಷಣ ಗೊತ್ತಾಗದಿದ್ದರೂ ನಂತರದ ದಿನಗಳಲ್ಲಿ ಕಂಡುಬರುತ್ತದೆ. ಕಡಿಮೆ ವೋಲ್ಟೇಜ್ ವಿದ್ಯುತ್ ದೇಹದ ಮುಖ್ಯ ಭಾಗಗಳಲ್ಲಿ ಪ್ರವಹಿಸುತ್ತಿದ್ದರೆ ಹೆಚ್ಚು ಹಾನಿಯಾಗಲೂ ಬಹುದು. ವಿದ್ಯುತ್ ಆಘಾತದ ಗಂಭೀರತೆಯು ಆಘಾತದ ಅವಧಿ, ಗಂಭೀರತೆ ಮತ್ತು ಷಾಕ್ ಆದ ಸ್ಥಳ ಇವುಗಳನ್ನು ಅವಲಂಬಿಸಿರುತ್ತದೆ. ದೇಹದಲ್ಲಿ ವಿದ್ಯುತ್ ಆಘಾತದಿಂದಾಗುವ ಅಂಗಾಂಶಗಳ ನಾಶವಾಗುವಿಕೆಯೂ ಕೂಡ ಇವುಗಳ ತೀವ್ರತೆಯನ್ನೇ ಅವಲಂಬಿಸಿರುತ್ತದೆ.

ತೇವಕ್ಕೂ, ವಿದ್ಯುತ್ತಿಗೂ ಅತ್ಯಂತ ಬಿಡಿಸಲಾಗದ ನಂಟು. ಒಣಗಿದ ದೇಹಕ್ಕಿಂತ ತೇವವುಳ್ಳ ದೇಹವನ್ನು ವಿದ್ಯುತ್ ಸುಲಭವಾಗಿ ಪ್ರವೇಶಿಸುತ್ತದೆ. ವಿದ್ಯುತ್ ದೇಹಕ್ಕೆ ಸ್ಪರ್ಶವಾದ ಕೂಡಲೇ ಅದು ರಕ್ತನಾಳಗಳು ಹಾಗೂ ನರಗಳ ಮೂಲಕ ಅತಿ ವೇಗವಾಗಿ ಪ್ರವಹಿಸಲಾರಂಭಿಸುತ್ತದೆ. ವಿದ್ಯುತ್ ಅಪಾಯಕ್ಕೊಳಗಾದ ವ್ಯಕ್ತಿ ಲೋಹದ ಮೇಲೆ ನಿಂತಿದ್ದರೆ, ಲೋಹ ಹಿಡಿದಿದ್ದರೆ ಅಪಾಯ ಇನ್ನೂ ಭಯಾನಕವಾಗಿರುತ್ತದೆ. ವಿದ್ಯುತ್ ಸ್ಪರ್ಶ ಸ್ನಾಯುಗಳಿಗೆ ತುಂಬ ತೊಂದರೆ ಮಾಡುತ್ತದೆ. ವಿದ್ಯುತ್ ಸಂಪರ್ಕವು ಕೆಲವು ಸಮಯ ಸ್ನಾಯುಗಳಿಗೆ ನಿರಂತರವಾಗಿದ್ದಲ್ಲಿ ಸ್ನಾಯುಗಳು ತಮ್ಮ ಪೂರ್ಣ ಶಕ್ತಿಯನ್ನೇ ಕಳೆದುಕೊಳ್ಳುತ್ತವೆ. ಕೆಲಸ ಮಾಡಲು ಅನರ್ಹವಾಗುತ್ತವೆ. ವ್ಯಕ್ತಿ ಅಂಗವೈಕಲ್ಯಕ್ಕೆ ಬಲಿಯಾಗುತ್ತಾನೆ. ವಿದ್ಯುತ್ ದೇಹದೊಳಕ್ಕೆ ಇಳಿದಾಗ ಆ ಸ್ಥಳದಲ್ಲಿ ಕಪ್ಪು ಮಚ್ಚೆ ಉಂಟಾಗಬಹುದು. ಚರ್ಮದಲ್ಲಿ ತಗ್ಗು ಕಂಡುಬರಬಹುದು. ಸಾಧಾರಣ ವಿದ್ಯುತ್ ಹೊಡೆತವಿದ್ದಲ್ಲಿ ಅದು ನಮ್ಮ ದೇಹದ ಮಾಂಸಖಂಡಗಳಲ್ಲಿ ಎಷ್ಟು ಆಳಕ್ಕೆ ಇಳಿದು ಅಂಗಾಂಶಗಳನ್ನು ಹಾಳು ಮಾಡಿದೆ ಎಂಬುದು ನಮಗೆ ತಕ್ಷಣ ತಿಳಿದುಬರುವುದಿಲ್ಲ. ಅಲ್ಲದೆ ಕಪ್ಪು ಮಚ್ಚೆ ಅಥವಾ ಚರ್ಮದಲ್ಲಾದ ತಗ್ಗಿನ ಆಕಾರವನ್ನೂ ನಾವು ತಿಳಿದುಕೊಳ್ಳದೇ ಹೋಗಬಹುದು. ವಿದ್ಯುತ್ ಹೊಡೆತದಿಂದ ರಕ್ತನಾಳಗಳು ಹೆಚ್ಚು ಪ್ರಭಾವಕೊಳ್ಳಗಾಗಿದ್ದಲ್ಲಿ ಕೆಲದಿನಗಳ ನಂತರ ಅಲ್ಲಿಂದ ರಕ್ತಸ್ರಾವವಾಗಬಹುದು. ಇಲ್ಲವೆ ರಕ್ತನಾಳಗಳು ಹೆಪ್ಪುಗಟ್ಟಿ ರಕ್ತಪರಿಚಲನೆಗೆ ಅಡ್ಡಿಯಾಗಲೂಬಹುದು. ಮಿದುಳು ಮತ್ತು ನರವ್ಯೂಹ ವ್ಯವಸ್ಥೆಯ ಮೂಲಕ—

ವಿದ್ಯುತ್ ಹರಿದಲ್ಲಿ ವ್ಯಕ್ತಿಯು ಪ್ರಜ್ಞೆ ತಪ್ಪಬಹುದು ಇಲ್ಲವೆ ಪಾರ್ಶ್ವವಾಯುವಿನ ಸೆಳೆತಕ್ಕೂ ಒಳಗಾಗಬಹುದು.

ವಿದ್ಯುತ್ ಹೊಡೆತದಿಂದಾಗುವ ದುರಂತಗಳಲ್ಲಿ ಹೃದಯ ಸ್ನಾಯುಗಳ ಕಾರ್ಯ ಚಟುವಟಿಕೆಗಳ ತೊಂದರೆಯೂ ಒಂದು. ವಿದ್ಯುತ್ ಸ್ಪರ್ಶ ಅತಿಯಾದಾಗ ಹೃದಯ ಸ್ನಾಯುಗಳ ಕಾರ್ಯಚಟುವಟಿಕೆಗಳಿಗೆ ಅಡ್ಡಿಯಾಗಬಹುದು. ರಕ್ತ ಪರಿಚಲನೆಗೆ ಹೃದಯ ಸ್ನಾಯುಗಳ ಕಾರ್ಯಚಟುವಟಿಕೆ ಅತ್ಯಂತ ಅವಶ್ಯಕ. ವಿದ್ಯುತ್ ಆಘಾತಕ್ಕೊಳಗಾಗಿದ್ದಲ್ಲಿ ಹೃದಯ ಸ್ನಾಯುಗಳು ದುರ್ಬಲವಾಗಿ ಹೊಡೆಯಬಹುದು. ಆಗ ಹೃದಯದ ತೊಂದರೆಗಳೂ ಕಂಡುಬರುತ್ತವೆ. ವಿದ್ಯುತ್ ದೇಹದ ಎದೆಯ ಭಾಗದಲ್ಲಿ ಹರಿದಾಗ ವಪೆ ಹಾಗೂ ಸ್ನಾಯುಗಳು ಸೆಳೆತಕ್ಕೆ ಬಲಿಯಾಗಬಹುದು. ಇದರಿಂದ ಉಸಿರಾಟ ನಿಲ್ಲಬಹುದು. ಕೆಲವೊಮ್ಮೆ ವಿದ್ಯುತ್ ತನ್ನ ಮುಟ್ಟಿದ ವ್ಯಕ್ತಿಯನ್ನು ರಭಸದಿಂದ ದೂರಕ್ಕೆ ಎಸೆದುಬಿಡುತ್ತದೆ. ಇದಕ್ಕೆ ವಿದ್ಯುತ್ ಸ್ಪರ್ಶದಿಂದ ಆಗುವ ದೇಹದ ಅವಯವಗಳ ಹಾಗೂ ಸ್ನಾಯುಗಳ ರಭಸದ ಸಂಕೋಚನವೇ ಕಾರಣವಾಗಿದೆ. ಎಸೆದ ರಭಸಕ್ಕೆ ವ್ಯಕ್ತಿಯು ಹಾನಿಗಳಿಗೆ ಬಲಿಯಾಗಬಹುದು. ಸೌಮ್ಯವಾದ, ಮಿತವಾದ ವಿದ್ಯುತ್ ಆಘಾತಕ್ಕೊಳಗಾದ ವ್ಯಕ್ತಿ ಆ ಸಮಯಕ್ಕೆ ಹಗುರವಾಗಿ ಅಲ್ಲಾಡಿದಂತೆ ಆಗಿ ಯಾವ ಅಪಾಯವಿಲ್ಲದೇ ಪಾರಾಗಬಹುದು. ಆದರೆ ದೇಹದ ಒಳಭಾಗವು ಅಪಾಯಕ್ಕೆ ಬಲಿಯಾಗಿರುತ್ತದೆ ಎಂಬುದನ್ನು ಮರೆಯಬಾರದು. ಇದು ನಂತರದ ದಿನಗಳಲ್ಲಿ ಕಂಡುಬರುತ್ತದೆ.

## ಮನೆಯ ವಿದ್ಯುತ್ ಮತ್ತು ನೀವು

ಇಂದು ಹೆಚ್ಚು ಕಡಿಮೆ ಎಲ್ಲರೂ ಮನೆಯಲ್ಲಿ ವಿದ್ಯುತ್ ಬಳಸುತ್ತಾರೆ. ಮೊದಲು ಸ್ನಾನದ ಮನೆಯಿಂದ ಆರಂಭಿಸೋಣ. ಕಟ್ಟಿಗೆ, ಗ್ಯಾಸ್‌ಗಳು ಸರಿಯಾಗಿ ಸಿಗದ ಇಂದಿನ ದಿನಗಳಲ್ಲಿ ನೀರು ಕಾಯಿಸಲು ಬಹಳಷ್ಟು ಮನೆಗಳಲ್ಲಿ ವಿದ್ಯುತ್ ಬಳಕೆಯಾಗುತ್ತಲಿದೆ. ಇದನ್ನು ತುಂಬ ಎಚ್ಚರದಿಂದ ಬಳಸಬೇಕು. ಹೀಟರ್‌ಗಾಗಿ ಬಳಸುವ ಸಾಕೆಟ್‌ಬಿಟ್ಟು ಅಲ್ಲಿ ಬೇರೆ ಯಾವುದೇ ಸಾಕೆಟ್ ಇರಬಾರದು. ಅಲ್ಲದೇ ಬೇರೆ ರೂಮಿನಿಂದ ಸ್ನಾನದ ಮನೆಗೆ ಸ್ವಿಚ್ ಹಾಕಿರುವ ಯಾವುದೇ ವಿದ್ಯುತ್ ವಸ್ತುಗಳಿರಬಾರದು. ಹೀಟರ್ ಸಹ ಗೋಡೆಯ ಮೇಲೆ ಮಕ್ಕಳ ಕೈಗೆ ಸಿಗದಂತೆ ಎತ್ತರವಾದ ಸ್ಥಳದಲ್ಲಿರಬೇಕು.

ಅಡುಗೆ ಮನೆಯಲ್ಲಿ ಒದ್ದೆಯಾದ ಕೈಯಿಂದ ಸ್ವಿಚ್ ಪ್ಲಗ್ ಅಥವಾ ವಿದ್ಯುತ್ ಸಾಧನಗಳನ್ನು ಉಪಯೋಗಿಸಕೂಡದು. ತೇವವಾದ ನೆಲ ಅಥವಾ ಲೋಹದ ವಸ್ತುವಿನ ಮೇಲೆ ನಿಂತು ಯಾವುದೇ ವಿದ್ಯುತ್ ಸಾಧನಗಳನ್ನು ಉಪಯೋಗಿಸಬಾರದು. ವಿದ್ಯುತ್ತಿನ ಯಾವುದೇ ಉಪಕರಣಗಳನ್ನು ಜೋಡಿಸುವಾಗ, ತೆಗೆಯುವಾಗ, ದುರಸ್ತಿ ಮಾಡುವಾಗ ಸ್ವಿಚ್ ಬಂದ್ (ಆಫ್) ಮಾಡುವುದನ್ನು ಮರೆಯಬಾರದು. ವಿದ್ಯುತ್ ಒಲೆಯಲ್ಲಿ ಅಡುಗೆ ಮಾಡುವ ಗೃಹಿಣಿಯರು ತುಂಬ ಎಚ್ಚರವಾಗಿರಬೇಕು. ವಿದ್ಯುತ್ತಿನ ಸೆಳತ ಬಲವಾಗಿದ್ದು, ಅತ್ಯಂತ ತೀವ್ರವಾಗಿರುತ್ತದೆ ಎಂಬುದನ್ನು ಗೃಹಿಣಿಯರು ಮರೆಯಬಾರದು. ವಿದ್ಯುತ್ ಪ್ರಭಾವೀ ವಸ್ತುವಾಗಿದ್ದು ಅದು

ಯಾವಾಗ ಯಾವುದರಿಂದ ಪ್ರಭಾವಕ್ಕೊಳಗಾಗುತ್ತದೆ ಎಂಬುವನ್ನು ಹೇಳಲಿಕ್ಕಾಗದು. ಸಾಧ್ಯವಾದಷ್ಟು ಎಚ್ಚರದಿಂದ ಇರಬೇಕು. ವಿದ್ಯುತ್ ಒಲೆಯಲ್ಲಿ ಅಡುಗೆ ಮಾಡುವಾಗ ನಿಂತ ನೆಲ ಒದ್ದೆಯಾಗದಂತೆ ನೋಡಿಕೊಳ್ಳಬೇಕು. ಅಗಲವಾದ ರಬ್ಬರ್ ಮ್ಯಾಟ್ ಮೇಲೆ ನಿಂತು ಅಡುಗೆ ಮಾಡಿದರೆ ಒಂದು ವೇಳೆ ವಿದ್ಯುತ್ ಸ್ಪರ್ಶವಾದರೂ ಷಾಕ್ ಹೊಡೆಯುವುದಿಲ್ಲ. ರಬ್ಬರ್, ಒಣಗಿದ ಕಟ್ಟಿಗೆ, ಇವೆಲ್ಲ ವಿದ್ಯುತ್ತಿನ ದುರ್ಬಲ ವಾಹಕವಾಗಿರುತ್ತವೆ. ಒಣಗಿದ ಕಟ್ಟಿಗೆಯ ಮೇಲೆ ವಿದ್ಯುತ್ ಒಲೆಯನ್ನಿಡುವುದು ಒಳ್ಳೆಯದು. ವಿದ್ಯುತ್ ಒಲೆಯ ಸ್ವಿಚ್ ಹಾಕಿರುವಾಗಲೇ ಒಲೆಯ ಮೇಲಿಸಿಂದ ಇಳಿಸಿದ ಯಾವುದೇ ಬಿಸಿ ಪಾನೀಯವನ್ನು ಬೇರೊಂದು ಪಾತ್ರೆಗೆ ಒಲೆಯ ಹತ್ತಿರದಿಂದಲೇ ಸುರಿಯಕೂಡದು. ಅಡುಗೆ ಮಾಡುವುದು ಮುಗಿದಾಗ ವಿದ್ಯುತ್ತಿನ ಎಲ್ಲ ಸಾಧನಗಳ ಸ್ವಿಚ್ ತೆಗೆಯಬೇಕು. ಹಾಗೂ ಅಡುಗೆ ಮಾಡುವುದು ಮುಗಿದಾಗ, ಟೇಪ್ ರಿಕಾರ್ಡರ್ ಬಂದ್ ಮಾಡಿದಾಗ, ಟಿ.ವಿ. ಸೆಟ್ ಬಂದ್ ಮಾಡಿದಾಗ ವಿದ್ಯುತ್ತಿನೊಂದಿಗಿನ ಅವುಗಳ ಸಂಪರ್ಕದ ವೈರ್‌ಗಳನ್ನು ಪೂರ್ತಿಯಾಗಿ ತೆಗೆಯುವುದು ಕ್ಷೇಮ.

ಮನೆಯಲ್ಲಿರುವ ಪ್ಲಗ್‌ಗಳೆಲ್ಲವೂ ಸರಿಯಾದ ರೀತಿಯಲ್ಲಿ ವೈರಿಂಗ್ ಮಾಡಲ್ಪಟ್ಟಿವೆಯೇ ಎಂಬುದನ್ನು ಪರೀಕ್ಷಿಸಿ ನೋಡಬೇಕು. ಒಂದು ಅಂದಾಜಿನ ಪ್ರಕಾರ ಒಂದು ವರ್ಷದಲ್ಲಿ ವಿದ್ಯುತ್ ಆಘಾತದಿಂದಾಗುವ ಮರಣಗಳಲ್ಲಿ ಶೇಕಡಾ ೩೫ರಷ್ಟು ಕಳಪೆ ವೈರಿಂಗ್ ಹಾಗೂ ಕಳಪೆ ಪ್ಲಗ್ ಮುಂತಾದ ಅವ್ಯವಸ್ಥೆಯ ಕಾರಣಗಳಿಂದ ಸಂಭವಿಸುತ್ತವೆ ಎಂದು ತಿಳಿದು ಬಂದಿದೆ. ಇವುಗಳನ್ನು ಸರಿಪಡಿಸಿದ್ದಲ್ಲಿ ಎಷ್ಟೋ ಪ್ರಾಣಗಳನ್ನು ಉಳಿಸಬಹುದು. ವೈರಿಂಗ್, ಪ್ಲಗ್‌ಗಳಲ್ಲಿ ಸೂಕ್ಷ್ಮ ತೊಂದರೆಗಳಿದ್ದರೂ ನಿರ್ಲಕ್ಷಿಸಬಾರದು. ತಕ್ಷಣವೇ ರಿಪೇರಿ ಮಾಡಿಸಬೇಕು. ಯಾವುದೇ ಪ್ಲಗ್ ಅಥವಾ ಸಾಕೆಟ್ ಬಳಸುವಾಗ ಬಿಸಿಯಾದಲ್ಲಿ ಅದರಲ್ಲಿ ಏನೋ ತೊಂದರೆಯಿದೆ ಎಂದು ತಿಳಿದು ತಕ್ಷಣ ರಿಪೇರಿ ಮಾಡಿಸುವುದು ಸೂಕ್ತ. ಅಡಾಪ್ಟರ್‌ಗಳನ್ನು ಬಳಸಿ ಒಂದೇ ಸಾಕೆಟ್‌ನಿಂದ ಅನೇಕ ಕಡೆ ಒಂದೇ ಕಾಲಕ್ಕೆ ವಿದ್ಯುತ್ ಹರಿಸಿಕೊಳ್ಳುವುದನ್ನು ಮಾಡಕೂಡದು. ಒಂದೇ ಸಾಕೇಟಿನಿಂದ ಅಡಾಪ್ಟರ್ ಮೂಲಕ ಟಿ.ವಿಗೂ ಮಿಕ್ಸಿಗೂ ವಿದ್ಯುತ್ ಹರಿಸಿಕೊಂಡಿದ್ದು, ಒಂದೇ ಸಮಯದಲ್ಲಿ ಎರಡನ್ನೂ ಬಳಸಿದರೆ ಬಳಸುವ ವಸ್ತುಗಳು ಹಾಳಾಗಬಹುದು. ಒಂದು ಸಮಯದಲ್ಲಿ ಒಂದು ಸಾಕೆಟಿನ ಮೂಲಕ ಒಂದೇ ಉಪಕರಣದ ಪ್ರಯೋಜನ ಪಡೆಯುವುದು ಒಳ್ಳೆಯದು. ಮನೆಯಲ್ಲಿ ವಿದ್ಯುತ್ತಿನ ಯಾವುದೇ ರಿಪೇರಿ ನಡೆದಿರುವಾಗ ಎಲ್ಲಾ ವಿದ್ಯುತ್ ಸಾಧನಗಳನ್ನು ವಿದ್ಯುತ್ ಸಂಪರ್ಕದಿಂದ ದೂರವಿಡಬೇಕು. ಪೂರ್ತಿಯಾಗಿ ಪ್ಲಗ್‌ಗಳನ್ನು ತೆಗೆಯಬೇಕು. ವಿದ್ಯುತ್ ಹರಿಯಲು ಬಳಸುವ ವೈರ್ ಗಟ್ಟಿಮುಟ್ಟಾಗಿರಬೇಕು. ಅಲ್ಲಲ್ಲಿ ಜೋಡಣೆಯಾಗಿರಬಾರದು. ಇದರಿಂದ ವಿದ್ಯುತ್ತಿನ ಪ್ರವಾಹಕ್ಕೆ ಅಡ್ಡಿಯಾಗುತ್ತದೆ. ಇದರಿಂದ ವಿದ್ಯುತ್ ಇಂಧನ ಬಳಕೆ ಹೆಚ್ಚಾಗುವ ಸಂಭವವಿದೆ.

ರೈತ ಬಾಂಧವರಲ್ಲಿ ಒಂದು ವಿನಂತಿ ಎಂದರೆ ನೀವು ಪಂಪ್‌ಸೆಟ್‌ಗೆ ಬಳಸುವ ವಿದ್ಯುತ್ ಉಪಕರಣಗಳು ಅಪಾಯರಹಿತ ವಾಗಿದ್ದು, ಐಎಸ್‌ಐ ಮುದ್ರೆಯಿರುವ ವಸ್ತುಗಳು ಹೆಚ್ಚು ಸುರಕ್ಷಿತವಾಗಿದ್ದು, ಮಾನ್ಯತೆ ಪಡೆದ ಹೆಸರಾಂತ ಕಂಪೆನಿಗಳಿಂದ ತಯಾರಿಸಲ್ಪಟ್ಟಿರುತ್ತವೆ. ಗೃಹ ಬಳಕೆಯ ವಿದ್ಯುತ್ ಉಪಕರಣಗಳೂ 'ಐಎಸ್‌ಐ' ಮುದ್ರೆ ಹೊಂದಿದವುಗಳಾಗಿದ್ದಲ್ಲಿ ಹೆಚ್ಚು ಸುರಕ್ಷಿತವಾಗಿರುತ್ತವೆ. ರೈತರು ಪಂಪ್ ಸೆಟ್ಟಿನ ಸ್ವಿಚ್ ಹಾಕುವಾಗ ಎಚ್ಚರದಿಂದಿರ ಬೇಕು. ರಬ್ಬರ್ ಅಥವಾ ಒಣಗಿದ ಕಟ್ಟಿಗೆಯ ಹಲಗೆ ಮೇಲೆ ನಿಂತು ಸ್ವಿಚ್ ಹಾಕಬೇಕು. ಗೃಹಬಳಕೆಯ ವಸ್ತುಗಳಲ್ಲಿ ಹರಿಯುವ ವಿದ್ಯುತ್‌ಗಿಂತಲೂ ಪಂಪ್ ಸೆಟ್‌ನಲ್ಲಿ ಹರಿಯುವ ವಿದ್ಯುತ್ ಹೆಚ್ಚು ಶಕ್ತಿಯುತವಾಗಿರುತ್ತದೆ ಎಂಬುದನ್ನು ತಿಳಿದುಕೊಳ್ಳಿರಿ.

**ಚಿಕಿತ್ಸೆ**

ವಿದ್ಯುತ್‌ಹೊಡೆತಕ್ಕೆ ಒಳಗಾದವರಿಗೆ ತುರ್ತುಚಿಕಿತ್ಸೆಯ ಅವಶ್ಯಕತೆಯಿದೆ. ಈ ಈ ಚಿಕಿತ್ಸೆಯ ವಿಧಾನವನ್ನು ಸರ್ವರೂ ತಿಳಿದುಕೊಳ್ಳುವ ಅವಶ್ಯಕತೆಯಿದೆ. ಈ ಚಿಕಿತ್ಸೆಯಲ್ಲಿ ಅವಸರ ಸಲ್ಲದು. ಅವಸರದಲ್ಲಿ ಅರಿತುಕೊಳ್ಳದೇ ಮಾಡುವ ಚಿಕಿತ್ಸೆಯು, ಚಿಕಿತ್ಸೆ ಮಾಡುವವರನ್ನೇ ಬಲಿ ತೆಗೆದು ಕೊಳ್ಳಬಹುದು. ಕಾರಣ ಎಚ್ಚರಿಕೆಯಿಂದ ಚಿಕಿತ್ಸೆಗೆ ಮುಂದಾಗಬೇಕು. ಚಿಕಿತ್ಸೆ ಹಾಗೂ ಎಚ್ಚರಿಕೆಯ ಕ್ರಮಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

* ವಿದ್ಯುತ್ ಸಂಪರ್ಕದ ವ್ಯಕ್ತಿಯನ್ನು ಹಿಡಿದುಕೊಳ್ಳಬಾರದು. ವಿದ್ಯುತ್ ಹೊಡೆತಕ್ಕೆ ಒಳಗಾದ ವ್ಯಕ್ತಿಯಲ್ಲಿ ವಿದ್ಯುತ್ ಹರಿಯುತ್ತಲಿರುತ್ತದೆ. ಅವನನ್ನು ಮುಟ್ಟಿದ ಕೂಡಲೆ ವಿದ್ಯುತ್ ನಿಮ್ಮನ್ನು ಹಿಡಿದುಕೊಳ್ಳುತ್ತದೆ. ಮೊದಲು ಮೇನ್ (ಮುಖ್ಯ) ಸ್ವಿಚ್ ತೆಗೆದು ವ್ಯಕ್ತಿಯನ್ನು ವಿದ್ಯುತ್ ಸಂಪರ್ಕದಿಂದ ದೂರ ಮಾಡಿ. ನಂತರ ಅವನನ್ನು ಮುಟ್ಟಬೇಕು.
* ಸ್ವಿಚ್ ಆರಿಸಲು ಸಾಧ್ಯವಾಗದಿದ್ದಲ್ಲಿ ಒಣಗಿದ ಮರದ ಕೋಲನ್ನು ತೆಗೆದು ಕೊಂಡು ವಿದ್ಯುತ್‌ಗೊಳಗಾದ ವ್ಯಕ್ತಿಗೆ ತಗುಲಿದ ವೈರನ್ನು ಹೊಡೆದು ಅವನಿಂದ ಅದರ ಸಂಪರ್ಕ ತಪ್ಪಿಸಬೇಕು. ಇಲ್ಲವೆ ವಿದ್ಯುತ್‌ಕ್ಕೊಳಗಾದ ವ್ಯಕ್ತಿಯ ದೇಹಕ್ಕೆ ದೂರದಿಂದ ಹಗ್ಗ ಎಸೆದು ಅವ ನನ್ನು ಆ ಸ್ಥಾನದಿಂದ ರಭಸದಿಂದ ಎಳೆದುಕೊಳ್ಳಬೇಕು. ಹೀಗೆ ಮಾಡು ವಾಗ ಕಾಲಲ್ಲಿ ರಬ್ಬರ್ ಚಪ್ಪಲಿಗಳಿರಲಿ. ವಿದ್ಯುತ್‌ಗೊಳಗಾದ ವ್ಯಕ್ತಿ ಬಿದ್ದ ಸುತ್ತಲಿನ ಭೂಮಿಯೂ ವಿದ್ಯುತ್ ಸಂಪರ್ಕಕ್ಕೊಳಗಾಗಿರಬಹುದು. ಕಾರಣ ಕಾಲಲ್ಲಿ ರಬ್ಬರ್ ಚಪ್ಪಲಿ ಹಾಕಿಕೊಂಡು ಅವನನ್ನು ಬದುಕಿಸಲು ಪ್ರಯತ್ನಿಸಿ.
* ವಿದ್ಯುತ್ ಉಪಕರಣ ಷಾಕ್ ಹೊಡೆ ದಾಗ, ತಕ್ಷಣ ಸ್ವಿಚ್ ತೆಗೆಯಬೇಕು.
* ವಿದ್ಯುತ್ ಹೊಡೆತಕ್ಕೊಳಗಾದ ವ್ಯಕ್ತಿಯು ದೂರಕ್ಕೆ ಎಸೆಯಲ್ಪಟ್ಟಲ್ಲಿ ಅವನು ಮೂಳೆ ಮುರಿತಕ್ಕೆ ಒಳಗಾಗಿ ರಲೂಬಹುದು. ಕಾರಣ ಅವನನ್ನು ಅತ್ತಿಂದಿತ್ತ ಬೇಕಾದ ಹಾಗೆ ಎಳೆದಾಡ ಕೂಡದು.

* ಸುಟ್ಟ ಗಾಯ ಅಥವಾ ಇತರ ಗಾಯವಾಗಿದೆಯೇ ನೋಡಿ. ಅವನ್ನು ಡ್ರೆಸ್ ಮಾಡಿ, ತಕ್ಷಣವೇ ಆಸ್ಪತ್ರೆಗೆ ಒಯ್ಯಬೇಕು.

* ವಿದ್ಯುತ್‌ಗೊಳಗಾದ ವ್ಯಕ್ತಿಯು ಬಳಚಿಕೊಂಡು ಉಸಿರುತ್ತಿದ್ದಾನೆಯೇ ಎಂಬುದನ್ನು ಗಮನಿಸಿ. ಪ್ರಜ್ಞೆ ತಪ್ಪಿದಲ್ಲಿ ಹೃದಯವನ್ನು ಮಸಾಜ್ ಮಾಡಿ. ಕೃತಕ ಉಸಿರಾಟ ನೀಡಬೇಕು. ವಿದ್ಯುತ್ ನಮಗೆ ಎಷ್ಟು ಅನುಕೂಲ ಮಾಡಿದೆಯೋ ಅಷ್ಟೇ ದುರಂತಗಳ ಸರಮಾಲೆಯನ್ನೂ ಸೃಷ್ಟಿಸುತ್ತಿದೆ ಎಂಬುದನ್ನು ನೆನಪಿನಲ್ಲಿಡಬೇಕು. ವಿದ್ಯುತ್ತಿನೊಡನೆ ಸರಸಾಟ ಸಾವಿನೊಡನೆ ಸರಸಾಟ ಎಂಬುದು ನೆನಪಿರಲಿ. ವಿದ್ಯುತ್ ಬಳಸುವ ಕಾರ್ಯ ಸಣ್ಣದಿರಲಿ ದೊಡ್ಡದಿರಲಿ ತುಂಬ ಎಚ್ಚರಿಕೆಯಾಗಿರಬೇಕು. ಅವಸರಬೇಡ. ಅವಸರ ಅಪಘಾತಕ್ಕೆ ಕಾರಣ ಎಂಬುದನ್ನು ನೆನಪಿನಲ್ಲಿಟ್ಟುಕೊಂಡು ನಿಧಾನವಾಗಿ ಎಚ್ಚರಿಕೆಯಿಂದ ಬಳಸಿದ್ದಲ್ಲಿ ವಿದ್ಯುತ್ತಿನ ಅಪಘಾತಗಳನ್ನು ತಡೆಗಟ್ಟಬಹುದು.



ಧರ್ಮ ಎಂದರೆ ಲೌಕಿಕ ಜೀವನವನ್ನು ಸಮಾಧಾನ ಸ್ಥಿತಿಯಲ್ಲಿರಿಸಿ ಕಾಪಾಡುವ ಒಂದು ನ್ಯಾಯ ವಿಧಾನ.

—ಭಗವದ್ಗೀತೆ

ಆಚಾರವೇ ಶ್ರೇಷ್ಠ ಎಂದು ಎಲ್ಲ ಶಾಸ್ತ್ರಗಳೂ ಹೇಳಿವೆ. ಆಚಾರದಿಂದ ಧರ್ಮ ಲಭಿಸುತ್ತದೆ; ಧರ್ಮದಿಂದ ಆಯುಸ್ಸು ಹೆಚ್ಚುತ್ತದೆ.

—ಮಹಾಭಾರತ

# ಮರಳು ಸೇತುವೆಯ ಮೇಲೆ

**ಟಿ. ಎಸ್. ಲಲಿತ**

ರೌಂಡ್ಸ್ ಮುಗಿಸಿ ವಾಚ್ ನೋಡಿದಾಗ ಗಂಟೆ ಒಂದಾಗಿತ್ತು. ಬಂದ ಡ್ಯೂಟಿ ಡಾಕ್ಟರ್ ನೀನಾಳನ್ನು ನೋಡಿ "ಮಧ್ಯಾಹ್ನ ಒಂದು ಡೆಲಿವರಿ ಕೇಸ್ ಇದೆ ಅಟೆಂಡ್ ಮಾಡು. ಏನಾದ್ರೂ ಕಾಂಪ್ಲಿಕೇಷನ್ ಇದ್ರೆ ಫೋನ್ ಮಾಡು ಬರ್ತೀನಿ" ಎಂದು ಹೊರಟಳು ನೇಹ. ಪೋರ್ಟಿಕೋದಿಂದ ಕಾರ್ ತೆಗೆಯುತ್ತಿದ್ದಾಗ 'ಹಲೋ' ಎಂದಿದ್ದಳು ಗೆಳತಿ ರೇಖ. ಅವಳನ್ನು ಕಾರ್ ಹತ್ತಿಸಿ, ಸ್ಟಾರ್ಟ್ ಮಾಡಿದಾಗ ಕೇಳಿದ್ದಳು ರೇಖ, "ಮಧ್ಯಾಹ್ನ ಗೈನಕಾಲಜಿ ಕಾನ್‌ಫರೆನ್ಸ್ ಇದೆಯಲ್ಲಾ ಹೋಗೋಣ್ವಾ?"

ಇಲ್ಲಮ್ಮ ಇವತ್ತಂತೂ ತುಂಬಾ ಸಾಕಾಗಿದೆ. ರಾತ್ರಿ ಎಲ್ಲಾ ನಿದ್ರೇನೂ ಇಲ್ಲ. ಮೊದ್ಲು ಮನೆಗೋಗಿ ನಿದ್ರೆ ಮಾಡ್ಬೇಕು. ಸಂಜೆ ನರ್ಸಿಂಗ್ ಹೋಂನಲ್ಲಿ ಅಟೆಂಡ್ ಮಾಡ್ಬೇಕಾದ ಕೇಸ್ ತುಂಬಾ ಇವೆ."

'ನಿನ್ನ ನರ್ಸಿಂಗ್ ಹೋಂ ಬಿಟ್ರೆ ನಿಂಗಿನ್ನೇನೂ ಪ್ರಪಂಚಾನೇ ಇಲ್ಲಾನ್ಸತ್ತೆ. ಯಾಕ್ಹಾಗೆ ಒದ್ದಾಡ್ತೀಯೋ. ಆ ಸುಹಾಸ್ ನಿನ್ನ ಕಂಡ್ರೆ ಪ್ರಾಣ ಬಿಡ್ತಾನೆ. ಅವನ್ನ ಮದ್ವೆಯಾಗಿ ಅರ್ಧ ಹೊರೆ ಇಳಿಸ್ಕೊಂಡು ಸುಖವಾಗಿರ್ಬಾರ್ದಾ? ಅಷ್ಟೂ ನರ್ಸಿಂಗ್ ಹೋಂ ನೋಡ್ಕೊಂಡ್ರೆ ನಿನ್ಕೆಲ್ಸಾನೂ ಹಗುರ.'

"ನಿಂಗೆಲ್ಲೋ ಭ್ರಾಂತು ರೇಖ, ಬರೀ ಭ್ರಾಂತು." ಜೋರಾಗಿ ನಕ್ಕಳು ನೇಹ. "ಇಳಿಸೋದಲ್ಲಿ, ಇಡೀ ಜೀವಮಾನ ಒದ್ದಾಡಿದ್ರು ಇಳಿಸೋಕೆ ಆಗ್ತಿರೋ ಹೊರೇನೇ ಹೊರ್ಸಿ ಬಿಡ್ತಾರೆ. ಈ ಗಂಡು ಜಾತೀನೇ ಅಷ್ಟು. ಹುಲ್ಲೂ ಚಿಗುರದ ಮರುಭೂಮಿ ಮಾಡ್ಬಿಡ್ತಾರೆ, ಮನಸ್ಸನ್ನು. ಐ ಹೇಟ್ ದೆಮ್, ಐ ಹೇಟ್ ದೆಮ್" ಕೋಪದಿಂದ ಮುಖ ಕೆಂಪೇರಿ, ತುಟಿ ಕಂಪಿಸುತ್ತಿದ್ದ ನೇಹಳ ಹೆಗಲ ಮೇಲೆ ಕೈಯಿಟ್ಟು 'ರಿಲ್ಯಾಕ್ಸ್' ಎಂದಳು ರೇಖ.

"ಯಾಕೆ ಹಾಗೆ ತಾಳ್ಮೆಗೆಡ್ತೀಯ. ನಿನ್ನಾಗೇ ಎಲ್ರೂ ಯೋಚ್ನೆ ಮಾಡ್ಬಿಟ್ರೆ ಪ್ರಪಂಚ ಬೆಳೀತಾನೇ ಇರ್ಲಿಲ್ಲಾ. ಮದ್ವೆ ಮಾಡ್ಕೊಂಡಿರೋವ್ರು ಯಾರೂ ಸುಖ್ವಾಗೀ ಇಲ್ವಾ? ನಾಣ್ಯಕ್ಕೆ ಯಾವಾಗ್ಲೂ ಎರಡು ಮುಖ. ಜೀವನ ನಾವು ಹೇಗೆ ನೋಡ್ತೀವಿ ಅನ್ನೋದ್ರ ಮೇಲೆ ಅವಲಂಬಿತವಾಗಿರತ್ತೆ. ಪ್ರೀತಿ ವಿಶ್ವಾಸದ ಆಧಾರವಿಲ್ದೆ ಮನುಷ್ಯ ಬಾಳೋಕ್ಯಾಗತ್ತಾ? ಹಾಗಿಲ್ದೆ, ಮದ್ವೆ ಪವಿತ್ರ ಬಂಧನ ಅಂತ ಯಾಕೆ ಹೇಳ್ತಾರೆ?"

"ಹೂವಿಂದ ಹೂವಿಗೆ ಹಾರೋ ದುಂಬಿಗಳು ಈ ಗಂಡಸ್ರು. ಅವರಿಂದ ಪ್ರೀತಿ ವಿಶ್ವಾಸ ಅರಸಿಕೊಂಡು ಹೋಗೋದಂದ್ರೆ ಮರಳುಗಾಡಿನಲ್ಲಿ ಮರೀಚಿಕೆಯ ಬೆನ್ನಟ್ಟಿದಂತೆ. ಇಂಥವರ ಕೈಲಿ 'ಪ್ರೀತಿ' ಅನ್ನೋ ಸುಂದರ ಪವಿತ್ರ ಶಬ್ದ ತನ್ನ ಪವಿತ್ರತೆಯನ್ನೇ ಕಳೆದುಕೊಳ್ಳುತ್ತೆ. 'ವಿಶ್ವಾಸ' ಅರ್ಥ ಕಳೆದುಕೊಂಡ ಸವಕಳಿ ಶಬ್ದವಾಗತ್ತೆ."

"ಏನೋಮ್ಮ, ನಿನ್ನ ವಿಚಾರಲಹರಿ ನನಗರ್ಥವಾಗಲ್ಲ."

'ಒಪ್ಪೆ, ನನ್ಜಾಗದಲ್ಲಿ ನೀನಿದ್ದಿದ್ರೆ, ನನ್ನಮ್ಮನ ಜೀವನದ ಕಥೆ ಕೇಳಿದ್ರೆ ನಿಂಗರ್ಥವಾಗ್ತಿತ್ತು. ಮದುವೆ ಜೀವಮಾನ ಪೂರ್ತಿ ಉಳಿಯೋ ಗಟ್ಟಿಯಾದ ಪವಿತ್ರ ಬಂಧನ ಅಂತಾರೆ ಅನ್ನೋರು. ಅದೆಷ್ಟು ಗಟ್ಟಿಯೋ, ಅದೆಷ್ಟು ಟೊಳ್ಳೋ ಯಾವ ಮುನ್ಸೂಚನೇನೂ ಕೊಡದೆ ಅದು ಯಾವಾಗ ಹುಡಿಗಟ್ಟುತ್ತೋ ಯಾರ್ಗೂ ಗೊತ್ತಿಲ್ಲ. ನಿನ್ನ ಅನುಭವದ ಮೇಲಿಂದ ನೀನು ಮಾತಾಡ್ತಿ. ಆದ್ರೆ ನನ್ನ ಅನುಭವ, ಜೀವನ ನನಗೆ ಕಲಿಸಿರೋ ಪಾಠ—ಎಲ್ಲ ಬಂಧನಗಳೂ ಕ್ಷಣಿಕ, ಅರ್ಥವಿಲ್ಲದವು ಅಂತ. ಬಂಧನಗಳು ಕೇವಲ ಶಾರೀರಿಕ ಪರಿಮಿತಿಯೊಳಗೇ ಉಳಿದರೆ, ಅದು ಜೈಲಿನಲ್ಲಿ ಅಲುಗಾಡದಂತೆ ಕಬ್ಬಿಣದ ಸರಪಳಿಯಿಂದ ಕಟ್ಟಿದಂಥ ಬಂಧನ ಎನಿಸುತ್ತೆ. ಜೀವನದಲ್ಲಿ ಮುನ್ನಡೆದು, ಉನ್ನತ ಗುರಿ ಮುಟ್ಟಬೇಕಾದರೆ, ವ್ಯಕ್ತಿವ್ಯಕ್ತಿಗಳ ನಡುವಿನ ಬಂಧನ ಮಾನಸಿಕವಾಗಿರಬೇಕಾದ್ದು ಅತಿಮುಖ್ಯ. ಅದಕ್ಕೂ ಮೀರಿದ್ದು ನಂಬಿಕೆ. ನಂಬಿಕೆಯ ಭದ್ರ ಅಡಿಪಾಯದ ಮೇಲೆ ಕಟ್ಟಿದ ಮನೆ ಸುರಕ್ಷಿತ. ಅಡಿಪಾಯವೇ ಬಿರುಕುಬಿಟ್ಟರೆ ತನ್ನನ್ನೇ ನಿಯಂತ್ರಿಸಿಕೊಳ್ಳದೆ ವ್ಯಕ್ತಿ ಮತ್ತೊಬ್ಬ ವ್ಯಕ್ತಿಗೆ ಹೇಗೆ ಆಧಾರವಾಗಬಲ್ಲ? ಸಂದರ್ಭದ ಅಲೆಗಳ ಹೊಡತಕ್ಕೆ ಸಿಕ್ಕರೂ, ಜಗ್ಗದ ಬಂಡೆಯಂತಿರಬೇಕು ವ್ಯಕ್ತಿ.'

ನೇಹ ಇಷ್ಟೊಂದು ಭಾವುಕಳಾದುದನ್ನು ಎಂದೂ ಕಾಣದ ರೇಖ ತುಟಿ ಎರಡು ಮಾಡಲಾರದಾದಳು. ಮನೆ ಮುಂದೆ ಕಾರು ನಿಂತಾಗ ಗೆಳತಿಯನ್ನು ಒಳಗೆ ಕರೆದಳು ನೇಹ. ಏಕೋ ವ್ಯಗ್ರಳಾಗಿದ್ದ ಮಗಳನ್ನು ಕಂಡು, ಮೀರ ತಣ್ಣನೆಯ ಕಿತ್ತಲೆ ಜ್ಯೂಸ್ ತಂದಿಟ್ಟಳು. ಜ್ಯೂಸ್ ಕುಡಿದು, "ಅಮ್ಮಾ ಕ್ಯಾಂಟೀನ್‌ನಲ್ಲಿ ತಿಂಡಿ ತಿಂದಿದ್ದೆ. ನಂಗೀಗ್ಲೇ ಊಟಬೇಡ. ನೀನು ಊಟ ಮಾಡ್ಬಿಡು" ಎಂದು ರೇಖಳೊಂದಿಗೆ ರೂಮು ಸೇರಿದಳು. ಮನದಲ್ಲಿ ಕುದಿಯುತ್ತಿದ್ದ ಹಾಲಾಹಲ ಹೊರಬರಲು ಅವಕಾಶಕ್ಕಾಗಿ ಕಾದಿತ್ತು.

* * *

ರಸ್ತೆಯ ತಿರುವಿನಲ್ಲಿ ಗಕ್ಕನೆ ಸ್ಕೂಟರ್ ನಿಲ್ಲಿಸಿದ ಶ್ರೀಕಾಂತ, ಮೀರಳತ್ತ ನೋಡಿ, ಮುಗುಳ್ನಗೆ ಬೀರಿದ. "ಹಲೋ, ಇಷ್ಟು ಬೇಗ ಹೊರಟ್ಬಿಟ್ಟಿದ್ದೀರಿ. ಪ್ರೊ|| ರಾವ್ ಕ್ಲಾಸ್‌ಗೆ ಅಟೆಂಡ್ ಮಾಡ್ಲಿಲ್ಲಾ."

"ಮನೇಗೆ ನೆಂಟರೆಲ್ಲಾ ಬಂದಿದ್ದಾರೆ. ಅದಕ್ಕೆ ಸ್ವಲ್ಪ ಬೇಗ ಹೋಗ್ತಿದೀನಿ ಮತ್ತೆ ನೀವು?"

"ಹೀಗೆ, ಲೈಬ್ರರಿಯಲ್ಲಿ ನೋಟ್ಸ್ ಮಾಡೋದಿತ್ತು, ಹೊರಟೆ." ಮಾತಾಡುತ್ತ ನಡೆದು ರಸ್ತೆಯ ತಿರುವಿನಲ್ಲಿ, ಮೀರ ಮನೆಯತ್ತ ನಡೆದಾಗ ಸ್ಕೂಟರ್ ಏರಿದ್ದ ಶ್ರೀಕಾಂತ. ಮೆಡಿಕಲ್ ಸೇರಿ, ಹಾಸ್ಟೆಲ್ ವಾಸ ಶ್ರೀಕಾಂತನದು. ಮಧ್ಯಮ

ವರ್ಗದ ವೀರ ತನ್ನೂರಲ್ಲೇ ತನ್ನ ಪ್ರತಿಭೆಯ ಫಲವಾಗಿ ಸೀಟ್ ಗಿಟ್ಟಿಸಿದ್ದಳು. ಕಾಲೇಜಿನಲ್ಲಿ ದಿನವೂ ಭೇಟಿ. ಇಬ್ಬರದೂ ಒಂದೇ ಟೇಬಲ್ಲಿನಲ್ಲಿ ಡಿಸೆಕ್ಷನ್, ವಿಚಾರ ವಿನಿಮಯ, ಕ್ರಮೇಣ ಆಕರ್ಷಣೆ, ನಂತರ ಪ್ರೀತಿ. ಹೂಂ ಹೀಗೆ....ಅಸಾಧ್ಯ ಚುರುಕು ಬುದ್ಧಿ ಶ್ರೀಕಾಂತನದು. ಮಾತು ಕಡಿಮೆ. ಹೆಚ್ಚಿನ ಗೆಳೆಯರೂ ಇಲ್ಲ. ತಾನಾಯಿತು ತನ್ನ ವಿದ್ಯಾಭ್ಯಾಸವಾಯಿತು. ಆದ್ದರಿಂದಲೇ ಗೆಳತಿಯರಿಗೆ ವೀರ, ಶ್ರೀಕಾಂತರ ಸ್ನೇಹ ಒಂದು ಒಗಟಾಗಿತ್ತು. 'ಋಷ್ಯಶೃಂಗನಿಂದ ಮಾಲೆಹಾಕಿಸಿಕೊಳ್ಳುವ ಹುಡುಗಿ ನೀನು' ಎಂದು ಗೆಳತಿಯರು ಛೇಡಿಸುತ್ತಿದ್ದುದೂ ಇತ್ತು. ಇಬ್ಬರ ನಡುವಿನ ಸಲಿಗೆ 'ನೀವನ್ನು' 'ನೀನಾಗಿ'ಸಿತ್ತು.

ಪರೀಕ್ಷೆ ಸಮೀಪಿಸುತ್ತಿದೆ. ಓದಲು ಸಮಯ ಸಾಲುತ್ತಿಲ್ಲ, ಕಾಲೇಜಿಂದ ಬರುವಾಗ ಸಿಕ್ಕ ಶ್ರೀಕಾಂತನನ್ನು ಕೇಳಿದಳು ವೀರ, ಮುಂದೇನು ಮಾಡುವ ಆಲೋಚನೆ?'

'ಇನ್ನೇನು?', ಪಿ.ಜಿ.ಗೆ ಅಪ್ಲೈ ಮಾಡಿ ಎಂಟ್ರೆನ್ಸ್ ತಗೊಳ್ಳೋದು, ನೀನು?

'ನೀನು ಮಾಡೋದನ್ನೇ.'

ವೀರ, ಶ್ರೀಕಾಂತರ ಸ್ನೇಹ ಈಗ ಎಲ್ಲರಿಗೂ ಗೊತ್ತಿದ್ದ ವಿಷಯ. ಪರೀಕ್ಷೆ ಮುಗಿದು ನಾಳೆ ಊರಿಗೆ ಹೊರಡಲಿದ್ದ ಶ್ರೀಕಾಂತನನ್ನು ಸಂಜೆ ಮನೆಗೆ ಬರುವಂತೆ ಕರೆದಿದ್ದಳು ವೀರ.

"ಹೇಗೂ ನಮ್ತಂದೆ ಮನೇಲೇ ಇರ್ತಾರೆ. ಒಬ್ಬರನ್ನೊಬ್ಬರು ಭೇಟಿಯಾದ ಹಾಗಾಗತ್ತೆ. ಮದ್ವೆ ವಿಷಯ ಮಾತಾಡೋಕೆ ಅದೊಂದೇ ದಾರಿ."

ಶ್ರೀಕಾಂತ ಬಂದಾಗ, ಸಂಜೆಯ ಪತ್ರಿಕೆ ಓದುತ್ತಿದ್ದ ಅವಳ ತಂದೆ ಪ್ರಶ್ನಾರ್ಥಕವಾಗಿ ಅವಳತ್ತ ನೋಡಿದ್ದರು.

"ಅಪ್ಪಾ, ನನ್ನ ಕ್ಲಾಸ್ ಮೇಟ್ ಶ್ರೀಕಾಂತ. ಇವ್ರು ನಮ್ಮ ತಂದೆ" ಪರಸ್ಪರ ಪರಿಚಯ ಮಾಡಿಸಿದ್ದಳು.

ಕೈಮುಗಿದು ಕುಳಿತ ಶ್ರೀಕಾಂತ.

ಚಹ, ಚಕ್ಕುಲಿ ತಂದಿಟ್ಟು ಕುಳಿತರು ವೀರಳ ಅಮ್ಮ. ಮಾತುಕತೆಗಳಲ್ಲಿ ತಿಳಿದದ್ದು, ಶ್ರೀಕಾಂತನ ಅಣ್ಣನೊಬ್ಬ ಇಂಜಿನಿಯರ್. ಅಕ್ಕನ ಮದುವೆಯಾಗಿತ್ತು. ತಂಗಿ ಓದುತ್ತಿದ್ದಾಳೆ. ಎಂಜಿನಿಯರ್ ತಂದೆ, ತಾಯಿ ಪೂನಾದಲ್ಲಿದ್ದಾರೆ. ಹುಡುಗ ಲಕ್ಷಣವಾಗಿದ್ದಾನೆಂದುಕೊಂಡರು, ವೀರಳ ಅಮ್ಮ.

ಅದು ಶ್ರೀಕಾಂತನಿಂದ ಬಂದ ಮೊದಲ ಪತ್ರ. ಕಾಗದ ಹಿಡಿದು ಒಳ ಬಂದ ವೀರಳಿಗೆ ಏನೋ ಉದ್ವೇಗ. ಏನೋ ಕಾತರ. ನವಿರಾಗಿ ಕಂಪಿಸುತ್ತಿದ್ದ ಕೈಗಳಿಂದ ಕಾಗದ ಒಡೆದು ಓದಿದಾಗ ಸಂಭ್ರಮ ಮುಗಿಲು ಮುಟ್ಟಿತ್ತು. ಓಹ್! ಏನೆಲ್ಲ ಬರೆದಿದ್ದ ಶ್ರೀಕಾಂತ. ದೂರವಿದ್ದರೂ ಮನಸ್ಸೆಲ್ಲ ಇಲ್ಲೇ ಇದೆ ಎಂದಿದ್ದ. ತನ್ನ ತಂದೆ, ತಾಯಿ ಮದುವೆಗೊಪ್ಪಿದ್ದಾರೆ. ನಿನ್ನನ್ನು ನೋಡಲು ಇಷ್ಟಪಡ್ತಾರೆ. ಈ ಬಗ್ಗೆ ನಿನ್ನ ತಂದೆ ತಾಯಿಯ ಅಭಿಪ್ರಾಯ ತಿಳಿ ಎಂದಿದ್ದ. ಆದಷ್ಟು ಬೇಗ ಊರಿಗೆ ಬರುವ ಕಾತರ ತೋರಿದ್ದ.

"ಪೋಸ್ಟ್" ಶಬ್ದ ಕಿವಿಗೆ ಬಿದ್ದು, ವೀರಳ ಅಮ್ಮ "ಯಾರದ್ದೇ ಕಾಗದ?" ಎನ್ನುತ್ತ ಈಚೆಗೆ ಬಂದಿದ್ದರು. ಮೂಡಿದ ಮಂದಹಾಸ ವೀರಳ ಮುಖವನ್ನು

ಬೆಳಗಿತ್ತು. ಕಾಗದದ ಬಗ್ಗೆ ತಿಳಿದ ಶಂಕರಪ್ಪನವರು, ಶ್ರೀಕಾಂತನ ತಂದೆಗೆ ಮದುವೆಯನ್ನು ಪ್ರಸ್ತಾಪಿಸಿ ಕಾಗದ ಬರೆದರು. ತಂದೆ ತಾಯಿಯೊಂದಿಗೆ ಒಂದೇ ಹಾರಿಗೆ ಹಾರಿ ಬಂದಿದ್ದ ಶ್ರೀಕಾಂತ. ಮದುವೆಯಾದರೂ ಇಬ್ಬರೂ ಓದು ಮುಂದುವರಿಸುವ ನಿರ್ಧಾರದೊಂದಿಗೆ ಮದುವೆ ನಿಷ್ಕರ್ಷೆಯಾಯಿತು. ವೀರ ಶ್ರೀಕಾಂತರಿಬ್ಬರೂ ಈಗ ಗರಿಗೆದರಿದ ಹಕ್ಕಿಗಳು. ಪರಸ್ಪರರು ಮೆಚ್ಚಿ ಪ್ರೀತಿಸಿದ್ದಕ್ಕೆ ಹಿರಿಯರ ಆಶೀರ್ವಾದವೂ ಸಿಕ್ಕ ಮೇಲೆ ಕೇಳಬೇಕೆ?"

ಮದುವೆ ಮುಗಿದು, ಓದಲು ಪುನಃ ಕಾಲೇಜಿಗೆ ಸೇರಿದ ಮೇಲೆ ವೀರ ಶ್ರೀಕಾಂತರಿಗೆ ಇದ್ದ ಸಮಯ ಸಾಲದು. ಶ್ರೀಕಾಂತ ಹಾಸ್ಟೆಲ್ ಬಿಟ್ಟು, ಈಗ ವೀರಳ ಮನೆಗೇ ಬಂದಿದ್ದ. ಇಬ್ಬರೂ ಓಡಾಡದ ಜಾಗವಿಲ್ಲ. ನೋಡದ ಸಿನೆಮಾ ಇಲ್ಲ, ಆಡದ ಮಾತಿಲ್ಲ. ಒಟ್ಟಲ್ಲಿ ಸ್ವರ್ಗಕ್ಕೆ ಕಿಚ್ಚು ಹಚ್ಚುವಂತಿತ್ತು ಸಂಸಾರ. ಮಕ್ಕಳ ಒಡನಾಟ, ವೀರಳ ತಂದೆ ತಾಯಿಗೂ ತೃಪ್ತಿ ತಂದಿತ್ತು. ಸದ್ಯ ಜೀವನದಲ್ಲಿ ನೆಲೆ ಕಂಡಾಯ್ತು ಮಗಳು. ಇಬ್ಬರ ಪರೀಕ್ಷೆಯೊಂದು ಮುಗಿದು ಬಿಟ್ಟರೆ, ತಮ್ಮ ಜವಾಬ್ದಾರಿ ಕಳೆದಂತೆ. ಭವಿಷ್ಯ ಅವರಿಗೆ ಸೇರಿದ್ದು. ಕರುಳ ಕುಡಿಯ ಮುಖದ ಮೇಲೆ ಮೂಡುವ ಮುಗುಳ್ನಗೆ ತರುವ ಸಂತೃಪ್ತಿ, ಮತ್ತಾವುದರಿಂದಲೂ ಇಲ್ಲ. ಇದಕ್ಕಿಂತ ಬೇರೇನು ಬೇಕು ತಂದೆತಾಯಿಗಳಿಗೆ?

ಪರೀಕ್ಷೆ ಮುಗಿದಾಗ ಶ್ರೀಕಾಂತ ಹೇಳಿದ್ದ "ವೀರ, ಅಬುದಾಬಿಯ ಆಸ್ಪತ್ರೆಯಿಂದ, ವೈದ್ಯರು ಬೇಕೆಂದು ಜಾಹಿರಾತು ಬಂದಿದೆ. ನಾನೊಮ್ಮೆ ಹೋಗಿಬರುವ ಯೋಚನೆ ಮಾಡಿದ್ದೇನೆ. ೪–೫ ವರ್ಷ ಅಲ್ಲಿದ್ದು ಬಂದು, ಇಲ್ಲೇ ನರ್ಸಿಂಗ್ ಹೋಂ ತೆರೆಯುವ ಆಲೋಚನೆ ಇದೆ. ಸದ್ಯಕ್ಕೆ ನೀನಂತೂ ನನ್ನೊಂದಿಗೆ ಬರುವಂತಿಲ್ಲ. ನಾನಲ್ಲಿ ಸೆಟಲ್ ಆದ್ಮೇಲೆ ನೀನೂ ಬರಬಹುದು."

ವೀರಳ ಮನಸ್ಸಿಗೇಕೋ ಈ ವಿಷಯ ಅಷ್ಟೊಂದು ಹಿತವಾಗಲಿಲ್ಲ. ಎಲ್ಲಿದ್ದರೂ ಇಬ್ಬರೂ ಒಟ್ಟಿಗೆ ಇರುವಾಸೆ ಅವಳದು. ಹೇಳುವಾಗ ಶ್ರೀಕಾಂತ ನಕ್ಕಿದ್ದ, ಬರೋ ನಿನ್ನ ರಾಜಕುಮಾರನ ಲಾಲನೆಯಲ್ಲಿ ನಿನ್ಗೆ ನನ್ನ ನೆನಪೂ ಆಗೋಲ್ಲ. ನೋಡ್ತಾ ಇರು, ಒಂದ್ವರ್ಷ ಎಷ್ಟು ಬೇಗ ಕಳ್ದೋಗತ್ತೆ?"

ಒಲ್ಲದ ಮನದ ವೀರಳ ಒಪ್ಪಿಗೆ ಪಡೆದ ಶ್ರೀಕಾಂತನನ್ನು ಹೊತ್ತ ವಿಮಾನ ಹಾರಿತ್ತು. ಪುಟ್ಟ ಮಗಳ ಆಟದಲ್ಲಿ ಸಮಯ ಸರಿದಿದ್ದರ ಅರಿವೇ ಆಗುತ್ತಿರಲಿಲ್ಲ ವೀರಳಿಗೆ. ಮಗಳು ಮನವನ್ನೆಲ್ಲಾ ಆವರಿಸಿದ್ದರೂ ನಡುವೆ ಶ್ರೀಕಾಂತನ ನೆನಪು ನುಗ್ಗಿ ನುಗ್ಗಿ ಬರುತ್ತಿತ್ತು. ಯಾವಾಗ ಅವನನ್ನು ಕಂಡೇನೋ ಎಂದು ತವಕಿಸುವ ಮನ.

ಶ್ರೀಕಾಂತ ಅಬುದಾಬಿಯ ಆಸ್ಪತ್ರೆಯೊಂದರಲ್ಲಿ ಕೆಲಸ ಮಾಡುತ್ತಿದ್ದ. ವಾರಕೊಮ್ಮೆಯಾದರೂ, ಅಲ್ಲಿನ ವಿಷಯಗಳನ್ನು ಎಷ್ಟು ಬರೆದರೂ ಸಾಲದು ಅವನಿಗೆ. 'ಪೋಸ್ಟ್' ಎನ್ನುವ ಸೋಮಯ್ಯನ ಕೂಗು ಕೇಳುವಾಗಲೇ ಮುಖ ಅರಳುತ್ತಿತ್ತು ವೀರಳಿಗೆ. ಬರಬರುತ್ತ ಆಸ್ಪತ್ರೆಯ ಕೆಲಸ ಹೆಚ್ಚಿದಾಗ ಕಾಗದ ಬರಲು ಒಂದೆರಡು ದಿನ ತಡವಾದರೂ ಮಿಡುಕುತ್ತಿತ್ತು ವೀರಳ ಮನ.

ವಾರವಲ್ಲ, ಹದಿನೈದು ದಿನ ಕಳೆದಿದೆ, ಶ್ರೀಕಾಂತನ ಪತ್ರವಿಲ್ಲ. ಪೋಸ್ಟ್

ಮ್ಯಾನ್‌ನ ಸೈಕಲ್ ಸದ್ದಿಗೆ ಹೂವಾದ ಮನ, ಆತ ತನಗಾವ ಪತ್ರ ಕೊಡದೆ ಮನೆ ದಾಟಿದಾಗ ಮುದುಡಿದ ಮುಖಹೊತ್ತು ಒಳಬರುವಳು ವೀರ. ತಿಂಗಳಾದರೂ ಪತ್ರ ವಿಲ್ಲ. ಆಸ್ಪತ್ರೆಗೆ ಫೋನ್ ಮಾಡಿದಾಗಲೂ ಶ್ರೀಕಾಂತನಿಲ್ಲವೆಂಬ ಉತ್ತರ.

ಅಂಚೆಯಾಳಿನ ದಾರಿ ಕಾಯುವುದನ್ನೇ ಬಿಟ್ಟಿದ್ದ ವೀರ, ಇಂದು 'ಪೋಸ್ಟ್' ಎನ್ನುವ ಶಬ್ದ ಕೇಳಿ, ಒಂದೇ ಹಾರಿಗೆ ಗೇಟು ತಲುಪಿದ್ದಳು. ಕೈಗೆ ಸಿಕ್ಕ ಕಾಗದ ಅನುಮಾನವೇ ಇಲ್ಲ, ಶ್ರೀಕಾಂತನದೇ ಅಕ್ಷರ. ಕಾತರದಿಂದ ಕಂಪಿಸುತ್ತಿದ್ದ ಕೈಗಳಿಂದ ಕಾಗದ ಒಡೆದು ಓದಿದ ವೀರ, ಮರು ಕ್ಷಣವೇ ಭೂಕಂಪವಾದಂತೆ, ಆಳವಾದ ಜಲಪಾತಕ್ಕೆ ತನ್ನನ್ನಾರೋ ತಳ್ಳಿದಂತೆ 'ಅಮ್ಮಾ' ಎಂದು ಕೂಗಿಕುಸಿದಿದ್ದಳು. ಕರೆ ಕೇಳಿ ಓಡೋಡಿ ಬಂದ ತಾಯನ್ನು ತಬ್ಬಿ ಅತ್ತಿದ್ದಳು.

ಶ್ರೀಕಾಂತ ಬರೆದಿದ್ದ,

"ವೀರ, ಪತ್ರನೋಡಿ ನಿನಗಾಗುವ ಆಘಾತ ಬಲ್ಲೆ, ಆದರೇನು ಮಾಡಲಿ?, ನಿರ್ಬಂಧಕ್ಕೆ ಸಿಲುಕಿದ್ದೇನೆ. ನನ್ನೊಂದಿಗೆ ಇಲ್ಲಿ ಕೆಲಸ ಮಾಡುವ ಇಟಾಲಿಯನ್ ಹುಡುಗಿಯೊಬ್ಬಳನ್ನು ಮದುವೆಯಾಗಿದ್ದೇನೆ. ಮುಂದೆ ನನ್ನನ್ನು ಹುಡುಕುವ ಯತ್ನ ಫಲಿಸಲಾರದು. ನನ್ನನ್ನು ಮರೆತು ನಿನಗಿಷ್ಟ ಬಂದವರನ್ನು ಮದುವೆಯಾಗುವ ಸ್ವಾತಂತ್ರ್ಯ ನಿನ್ನದು."

ಶ್ರೀಕಾಂತ

*  *  *

"ಇದು ನನ್ನಮ್ಮನ ಕಥೆ. ನನ್ನಪ್ಪನ ಮುಖವನ್ನೇ ನಾನು ಕಾಣಲಿಲ್ಲ. ಅಮ್ಮನ ಬಾಳನ್ನು ಹೊಸಕಿ ಹಾಕಿದ್ದ ಆ ವ್ಯಕ್ತಿ. ಪ್ರೀತಿ, ವಿಶ್ವಾಸ ಕಡಿಮೆ ತೋರಿದ್ದಳೇ ಅಮ್ಮ ಆತನ ಬಗ್ಗೆ ? ಬದಲಿಗೆ ಅವಳಿಗೆ ಸಿಕ್ಕದ್ದೇನು ?, ಸಮಾಜದ ಕುಹಕ, ನಿಂದನೆ. ಯಾವ ತಪ್ಪಿಗೆ ಈ ಶಿಕ್ಷೆ ?, ತುಕ್ಕು ಹಿಡಿಯುತು ಅವಳ ಪ್ರೀತಿ ವಿಶ್ವಾಸಕ್ಕೆ. ನನ್ನನ್ನು ಸಾಕಿ, ಈ ನರ್ಸಿಂಗ್ ಹೋಂ ಕಟ್ಟಿ, ನನ್ನ ಕಾಲ ಮೇಲೆ ನಾನು ನಿಲ್ಲುವಂತಾಗಲು ಎಷ್ಟು ಕಷ್ಟಪಟ್ಟಿದ್ದಾಳೆ. ಇದೆಲ್ಲವನ್ನು ಇನ್ನೊಬ್ಬ ಶ್ರೀಕಾಂತನಿಗೆ ಬಲಿ ಕೊಡಲೇನು ? ಬದುಕಿರುವವರೆಗೂ ಅಮ್ಮನನ್ನೂ ಅವಳು ಕಟ್ಟಿದ ಈ ನರ್ಸಿಂಗ್ ಹೋಂ ಅನ್ನೂ ಆದಷ್ಟು ಚೆನ್ನಾಗಿ ನೋಡಿಕೊಳ್ಳುವುದೇ ನನ್ನ ಗುರಿ. ಜೀವನದ ಆಚೆ ದಡ ಸೇರಲು, ಅಮ್ಮನಂತೆ, ಮರಳು ಸೇತುವೆಯ ಮೇಲೆ ಕಾಲಿಡುವ ಇಚ್ಛೆ ನನಗಿಲ್ಲ" ಎಂದ ನೇಹಳ ಮಾತಿಗೆ ನಿರುತ್ತರಳಾಗಿದ್ದಳು. ರೇಖಾ.

---

ದ್ವೇಷ ಹಾಗೂ ಹಿಂಸೆಯ ಬೀಜ ಬಿತ್ತಿದರೆ ಯಾವ ಫಲ ದೊರಕೀತು ? ದ್ವೇಷ ಹಾಗೂ ಹಿಂಸೆಯೇ ಅದರ ಫಲ.

—ಪಂಡಿತ್ ನೆಹರೂ

# ಮೊಸಳೆಯ ದವಡೆಯಲ್ಲಿ

ಗ. ನಾ. ಭಟ್ಟ

ಸೆಖೆ ಮತ್ತು ಚಳಿಯಿಂದ ಕೂಡಿದ ಆ ದಿನ ಸ್ಯಾಂಡಿರೋಸಿ ಊಟಕ್ಕೆ ಮೊದಲಿನ ತನ್ನ ಅಭ್ಯಸ್ತ ಈಜಗಾಗಿ ಸಿದ್ಧತೆ ಮಾಡಿಕೊಳ್ಳುತ್ತಿದ್ದಳು. ಆಫ್ರಿಕಾದ ಅಡವಿಯ ಕ್ಯಾಂಪೊಂದರಲ್ಲಿರುವ, ಎಪುಲ್ಯು ನದಿಯಲ್ಲಿ ರಭಸದ ಪ್ರವಾಹವಿಲ್ಲದ, ಜಾಗವೊಂದರಲ್ಲಿ ಪ್ರತಿಯೊಬ್ಬರೂ ಸ್ನಾನ ಮಾಡುತ್ತಿದ್ದರು.

ನ್ಯೂಯಾರ್ಕ್‌ನಿಂದ ಕೇಂದ್ರದ ರೆಫೈರೆಯ ವಿಶಾಲ ಇಟ್ಯೂರಿ ಅಡವಿಯಲ್ಲಿ, ಪ್ರಕೃತಿಯ ಅಧ್ಯಯನಕ್ಕೋಸ್ಕರ ಅಲ್ಲಿಗೆ ಬಂದ ಜಾನ್ ಹಾಗೂ ಆತನ ಹೆಂಡತಿ ತೆರೆಸಳ ಇಬ್ಬರು ಮಕ್ಕಳಿಗೆ ಖಾಸಗಿ ಶಿಕ್ಷಕಿ ಹಾಗೂ ದಾದಿಯಾಗಿ ಮೂರು ತಿಂಗಳ ಹಿಂದಷ್ಟೆ ಸ್ಯಾಂಡಿರೋಸಿ ಬಂದಿದ್ದಳು. ಈ ಕೆಲಸಕ್ಕೆ ಸೇರುವ ಮುನ್ನ ಶಾಂತಿಸೇನಾ ಪಡೆಯಲ್ಲಿ ಕೆಲಸ ಮಾಡಿ ಅನುಭವವಿದ್ದ ರೋಸಿ ಮಿಸೌರಿಯಲ್ಲಿದ್ದ ತನ್ನ ತಂದೆ ತಾಯಿಯರಿಗೆ ತನ್ನ ಈ ಹೊಸ ಕೆಲಸ ಚೆನ್ನಾಗಿರುವುದಾಗಿ ತಿಳಿಸಿದ್ದಳು.

ದಿನಾಂಕ ೧೪-೩-೧೯೭೩. ರೋಸಿ ಎತ್ತರ ೧೬೫ ಸೆಂ.ಮೀ. ೧೦ ವರ್ಷದ ಬೆಲ್ ಮತ್ತು ಮೂರು ವರ್ಷದ ಜೋಜೋವನ್ನು ಸ್ನಾನಕ್ಕೆ ಕರೆದುಕೊಂಡು ಹೋದಳು. ಕ್ಯಾಲಿಫೋರ್ನಿಯಾದಿಂದ ಬಂದ ಕೆನ್ ಚಚ್ರೇನ್ ಎಂಬ ೨೮ ವರ್ಷ ವಯಸ್ಸಿನ ಸಹಾಯಕ ಸಂಶೋಧಕನೂ ಇವರೊಡನೆ ಸೇರಿಕೊಂಡ.

ಸ್ಯಾಂಡಿ ರೋಸಿ ತನ್ನ ಕೈಗಡಿಯಾರ ನೋಡಿಕೊಂಡಳು. ಅದು ಸಂಜೆ ೬ ಗಂಟೆ ೧೦ ನಿಮಿಷಗಳನ್ನು ತೋರಿಸುತ್ತಿತ್ತು. "ಆ ವೇಳೆ ಮನೆಗೆ ಹಿಂತಿರುಗುವ ಸಮಯವಾಗಿತ್ತು. ಮುಂಗತ್ತಲೆ ಆವರಿಸತೊಡಗಿತ್ತು." ಅವಳು ಮಕ್ಕಳನ್ನು ಕರೆದಳು. ಸೊಂಟದವರೆಗೆ ಆವರಿಸಿದ್ದ ನೀರನ್ನು ತಳ್ಳುತ್ತಾ, ಹೆಗಲವರೆಗೆ ಬೆಳೆದಿದ್ದ ದಪ್ಪ ಕೂದಲಿಂದ ನೀರನ್ನು ಹಿಂಡಿ ತೆಗೆಯುತ್ತಾ, ರೋಸಿ ದಡದ ಕಡೆಗೆ ಬರುತ್ತಿರುವಾಗ ಕೆನ್ ಮಕ್ಕಳನ್ನು ಕರೆದುಕೊಂಡು ಮುಂದೆ ಹೋಗುತ್ತಿದ್ದ. ಅಂತೆಯೇ ಆಕೆ ಮುಂದೆ

---

೧೯೭೪ರ ಫೆಬ್ರವರಿ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸ ಪತ್ರಿಕೆಯಲ್ಲಿ ಪ್ರಕಟವಾದ ಜಿಮ್ ಹುಚಿಸನ್ ಅವರ "ಇನ್ ದಿ ಜಾಸ್ ಆಫ್ ಎ ಕ್ರೊಕೊಡೈಲ್" ಎಂಬ ಲೇಖನದ ಅನುವಾದ.

ವಾಗಿ ತನ್ನ ಕೈಗಳೆರಡನ್ನೂ ತೊಳೆದಳು. ಅಷ್ಟರಲ್ಲಿ ದೊಡ್ಡ ಮೂತಿಯನ್ನೊಳಗೊಂಡ ಎರಡು ಹಳದಿ ಕಣ್ಣುಗಳು ನೀರಿನ ಮೇಲ್ಭಾಗವನ್ನು ಭೇದಿಸಿಕೊಂಡು ಗೋಚರಿಸಿದವು. ತನಗೆ ಬೇಟೆಯ ಆಹಾರ ಸಿಗಲಿರುವುದೆಂಬ ಸೂಕ್ಷ್ಮಗ್ರಹಿಕೆ ಆ ಪ್ರಾಣಿಗೆ ಉಂಟಾಗಿತ್ತು. ಮಬ್ಬು ಬೆಳಕು ಕಳೆಯುತ್ತಿದ್ದಂತೆ ಅದು ನೀರನ್ನು ಸಿಡಿಸುತ್ತಾ ಕಾಣಿಸಿಕೊಂಡಿತು. ೨.೫ ಮೀಟರ್ ಉದ್ದವುಳ್ಳ ಆ ಜಲಚರ ಪ್ರಾಣಿ ಶಬ್ದ ಮಾಡದೆ ನೀರಿನಲ್ಲಿ ಮುಳುಗುತ್ತಾ ತನ್ನ ಮೊನಚಾದ ಉಗುರನ್ನು ಮಡಿಸಿತು. ೧೩೬ ಕಿಲೋಗ್ರಾಮ್ ತೂಕದ ತನ್ನ ಶರೀರದ ವಿರುದ್ಧ ತನ್ನ ಪಾದಗಳನ್ನು ಆಕುಂಚನಗೊಳಿಸಿತು. ನೀರಿನ ಒಳಗಿನಿಂದಲೇ ತನ್ನ ಬಲಿಷ್ಠ ಬಾಲವನ್ನು ಕ್ಷಿಪ್ರವಾಗಿ ಲಂಬಿಸಿತು.

ಓsss! ಲಂಬಿಸಿದ ಆ ಬಾಲ ಸ್ಯಾಂಡಿಯ ಪಾದಗಳಿಗೆ ಬಡಿಯಿತು. ಕೂಡಲೆ ಆಕೆ ಮುಗ್ಗರಿಸಿದಳು. ಎಡಮುಂಗೈಯನ್ನು ಹಿಸುಕುತ್ತಿರುವ ನೋವೊಂದು ಅವಳ ಉಸಿರು ಹೋಗುವಂತೆ ಮಾಡಿತು. ಯಾವುದೋ ದುಷ್ಟಪ್ರಾಣಿಯಿಂದ ತಾನು ಗಂಡಾಂತರಕ್ಕೊಳಗಾಗಿರುವುದನ್ನು ಆಕೆ ಗುರುತಿಸಿದಳು. ಮೊಸಳೆಯಿಂದ ತಾನು ಹಿಡಿಯಲ್ಪಟ್ಟಿರುವುದಾಗಿಯೂ ಅರಿತಳು.

ಆ ಕ್ಷಣ ಆಕೆ ಮಕ್ಕಳ ಬಗ್ಗೆ ಯೋಚಿಸಿದಳು. ಕೆನ್‌ಗೆ ಸೂಚಿಸಬೇಕೆಂದು ತ್ವರಿತಳಾದಳು. ತಳದಲ್ಲಿ ಹೂತಿದ್ದ ಮರಳರಾಶಿಯ ನೀರನ್ನು ತಳ್ಳುತ್ತಾ ನೀರಿನ ಮೇಲ್ಭಾಗಕ್ಕೆ ತಲೆಯನ್ನು ನೂಕಿದಳು. ಕೆನ್ ಅವಳ ಹಿಂದೆ (ಪಡದತ್ತ) ಮೂರು ಮೀಟರ್ ಅಂತರದಲ್ಲಿ ಮೊಳಕಾಲವರೆಗಿನ ನೀರಿನಲ್ಲಿ ನಿಂತಿದ್ದ. ಟವಲ್‌ಗೋಸ್ಕರ ನದಿಯ ದಡದತ್ತ ಸಾಗುತ್ತಿದ್ದ ಮಕ್ಕಳನ್ನು ರೋಸಿ ನೋಡಿದಳು. ಏದುಸಿರು ಬಿಡುತ್ತಾ "ಮೊಸಳೆ" ಎಂದು ಕೂಗಿದಳು. ಕೆನ್ ಅದನ್ನು ನಂಬದವನಂತೆ ನೋಡಿದ. ಅದನ್ನು ಕುರಿತು ತಮಾಷೆಯನ್ನು ಮಾಡಬೇಡ ಎಂದು ಅವಳನ್ನು ಎಚ್ಚರಿಸಿದ.

ಮೊಸಳೆ ಸ್ಯಾಂಡಿಯನ್ನು ಚಿಂದಿಬಟ್ಟೆಯಿಂದ ಮಾಡಿದ ಬೊಂಬೆಯನ್ನು ಎಳೆಯುವಂತೆ ಪಾಶವೀಯವಾಗಿ ಅವಳನ್ನು ನೀರಿನೊಳಗೆ ಎಳೆಯಿತು. ಮಾಂಸವನ್ನು ಭೇದಿಸಿಕೊಂಡು ಹೋಗಲು ಸಮರ್ಥವಾದ ೭೦ ಕ್ರೂರಹಲ್ಲುಗಳಿಂದ ಕೂಡಿದ ಅದರ ಬೃಹತ್ತಾದ ದವಡೆಗಳು ಆ ಕೂಡಲೆ ಮುಚ್ಚಲ್ಪಟ್ಟವು ಮತ್ತು ತನ್ನ ಬಲಿಪಶು ಮುಳುಗುವವರೆಗೆ ಹಿಡಿದುಕೊಂಡಿತು. ತನ್ನ ಮುಂಗೈಮೂಳೆ ಅರೆಯಲ್ಪಡುತ್ತಿರುವಂತೆ ಆಕೆಗೆ ಅನುಭವವಾಯಿತು. "ತಾನು ಸೆಳೆಯಲ್ಪಡುತ್ತಿದ್ದೇನೆ ಮತ್ತು ಈ ವಸ್ತುವಿನಿಂದ ತಿನ್ನಲ್ಪಡುತ್ತಿದ್ದೇನೆ. ಆದರೆ ಕೆನ್ ನನ್ನನ್ನು ನಂಬುತ್ತಿಲ್ಲ." ಎಂದು ಯೋಚಿಸಿದಳು.

ತನ್ನ ಬಲಗೈಯೊಡನೆ ಮೊಸಳೆಯ ಮೂತಿಯತ್ತ ಸಾಗುತ್ತಾ, ಎಡಗೈಯನ್ನು ಮುಷ್ಟಿ ಹಿಡಿದು, ಮೊಸಳೆಯ ದವಡೆಯಿಂದ ತಪ್ಪಿಸಲು ಎರಡೂಕೈಗಳನ್ನು ಸೇರಿಸಿ ಪ್ರಯತ್ನಿಸಿದಳು. ಮೇಲಕ್ಕೆ ಮುಗ್ಗರಿಸುತ್ತಾ ತನ್ನ ಕಾಲುಗಳಿಂದ ಮೇಲಕ್ಕೆ ಬರಲು ಯತ್ನಿಸಿದಳು. ನೀರಿನ ಮೇಲ್ಮೈಯನ್ನು ಸೀಳಿಕೊಂಡು ಮೇಲೆ ಬಂದು 'ಮೊಸಳೆ' ಎಂದು ದೊಡ್ಡದಾಗಿ ಅರಚಿದಳು.

ಕೆನ್ ಮರಗಟ್ಟಿಹೋದ. ಸ್ಯಾಂಡಿ ಸಿಕ್ಕಿದ್ದನ್ನು ಹಿಡಿದುಕೊಳ್ಳುವುದಕ್ಕೆ ಆಯಾಸಪಡುತ್ತಾ ಸೊಂಟಪರ್ಯಂತದ ನೀರಿನಲ್ಲಿ ನಿಂತಿದ್ದಳು. ಹಸಿರು ಬಣ್ಣದ ಭಯಾನಕ ತಲೆಯ ಆ ಮೊಸಳೆಯ ಘೋರ ದವಡೆಗಳು ಅವಳ ಎಡಗೈಯನ್ನು ಬಂಧಿಸಿದ್ದುವು. ಒಂದು ಎದೆಬಡಿತ ಆಗುವಷ್ಟರಲ್ಲಿ ಆಕೆ ಮತ್ತೆ ನೀರೊಳಗೆ ಸೆಳೆಯಲ್ಪಟ್ಟಳು.

"ನನ್ನ ತೋಳು ಹೋಗುತ್ತಿದೆ" ಎಂದು ಆವೇಶದಿಂದ ಕೂಗುತ್ತಾ, ಆಕೆ ಮತ್ತೆ ಮೇಲಕ್ಕೆ ಕಾಣಿಸಿಕೊಳ್ಳುತ್ತಿದ್ದಂತೆ ಕೆನ್ ಆಕೆಯನ್ನು ಸಮೀಪಿಸುತ್ತಾ ನೀರಿನ ಸುಳಿಯಲ್ಲಿ ಧುಮುಕಿದ. ಹಿಂದಿನಿಂದ ಅವಳ ಹೆಗಲನ್ನು ಹಿಡಿದುಕೊಂಡು ನದಿಯ ದಡದತ್ತ ಅವಳನ್ನು ಎಳೆಯಲಾರಂಭಿಸಿದ. ಅವಳಿಗೆ ಭರವಸೆ ನೀಡುತ್ತಾ ತನ್ನನ್ನು "ಅವಲಂಬಿಸು" ಎಂದ.

ಕೂಡಲೆ ನೀರು ಸ್ತಬ್ಧಗೊಂಡಿತು. ಹಿಡಿದ ತನ್ನ ಬೇಟೆಯನ್ನು ಮೊಸಳೆ ತುಂಬಾ ವಿರಳವಾಗಿ (ಅಪರೂಪವಾಗಿ) ತ್ಯಜಿಸುವುದೆಂಬ ಸಂಗತಿಯನ್ನು ಕೆನ್ ತಿಳಿದಿದ್ದ. ಇಂತಹ ನೀರಿನ ರಹಸ್ಯ ತಾಣದಲ್ಲಿ ಮೊಸಳೆಗಳು ವರ್ಷವೊಂದಕ್ಕೆ ೪೦೦ ಜನರನ್ನು ಕೊಂದುತಿನ್ನುತ್ತಿದ್ದವು.

ಕೆನ್ ತನ್ನ ಕೈಯಿಂದ ನೀರಿನ ಒಳಗಡೆ ಶೋಧಿಸಿದ. ನೀರಿನೊಳಗಡೆ ತನ್ನ ಕೈಗೆ ತಗುಲಿದ್ದು ಮೊಸಳೆಯ ಮೂತಿಯೆಂದು ಮನವರಿಕೆಯಾಗುತ್ತಿದ್ದಂತೆ ಆತನ ಬೆನ್ನೆಲುಬೊಮ್ಮೆ ಚಳಿಯಿಂದ ನಡುಗಿಹೋಯಿತು. ಸ್ಯಾಂಡಿಯ ಮಣಿಕಟ್ಟನ್ನು ಹಿಡಿದಿರುವ ಅದರ ಭಯಂಕರ ಹಲ್ಲುಗಳ ಸಾಲನ್ನು ಕೆನ್ ಒಮ್ಮೆ ಮುಟ್ಟಿದ. ಓ, ದೇವರೇ, ಅದಿನ್ನೂ ಸ್ಯಾಂಡಿಯನ್ನು ಹಿಡಿದುಕೊಂಡಿದೆ ಎಂದು ಉದ್ಗರಿಸಿದ.

ಹತಾಶನಾಗಿ ಆತ ಮೊಸಳೆಯ ದವಡೆಯನ್ನು ಇಣುಕಿ ನೋಡಲು ಯತ್ನಿಸಿದ. ಆದರೆ ಅದು ಅವಳ ಕೈಯೊಂದಿಗೆ ಬೆಸೆದುಕೊಂಡಿತ್ತು. ಯಾವುದೇ ಮುನ್ಸೂಚನೆಯಿಲ್ಲದೆ ಮೊಸಳೆ ಆವೇಶದಿಂದ ಸ್ಯಾಂಡಿಯನ್ನು ಎಳೆಯುತ್ತಾ, ನೀರನ್ನು ಸಿಡಿಸುತ್ತಾ ದೊಡ್ಡ ಶಬ್ದ ಮಾಡಿತು. ಕೆನ್ ಅವಳ ಸೊಂಟವನ್ನು ಗಟ್ಟಿಯಾಗಿ ಹಿಡಿದುಕೊಂಡ.

"ಇವಳನ್ನು ಬಿಡಿಸಲೆಂದು ಎಳೆದರೆ ಮೊಸಳೆ ಇವಳ ತೋಳನ್ನು ಕತ್ತರಿಸಿಬಿಡುತ್ತದೆ." ಎಂದು ಯೋಚಿಸಿದ ಕೆನ್ ಮನಸ್ಸಿಲ್ಲದೇ ಅವಳನ್ನು ಬಿಟ್ಟುಬಿಟ್ಟ. ನಸುಗೆಂಪುಬಣ್ಣದ ತಲೆಗೂದಲ ಅವಳು ನೀರಿನ ಸುಳಿಗೆ ಸಿಕ್ಕಿದ್ದನ್ನು. ಅವಳ ಬಿಳಿಚಿಕೊಂಡ ಮುಖವನ್ನು ದೈತ್ಯ ಮೊಸಳೆ ಆಲಿಂಗಿಸಿದ್ದನ್ನು, ನೋಡುತ್ತಾ ನಿಂತ. ಆ ದೈತ್ಯ ಪ್ರಾಣಿಯ ಅಪರಿಮಿತ ಶಕ್ತಿಯ ವಿರುದ್ಧ ಹೋರಾಡುತ್ತಾ, ಅಸಹಾಯಕನಾಗಿ ಅವಳ ಸೂಕ್ಷ್ಮಶರೀರದ ಸುತ್ತ ಅಡ್ಡಾಡಿದ. ಆ ರಾಕ್ಷಸ ಮೊಸಳೆಯೊಡನೆ ಬರಿಗೈಯಿಂದ ಹೋರಾಡಲು ಹೇಗೆ ಸಾಧ್ಯ?"

ಇದ್ದಕ್ಕಿದ್ದಂತೆ ಆ ದುಷ್ಟ ಪ್ರಾಣಿ ನುಲಿಯುತ್ತಾ ಸ್ಯಾಂಡಿಯ ಮುಂಗೈಯನ್ನು ಕೊಂಬೆಯಂತೆ ಮುರಿದುಹಾಕಿತು. ಅವಳ ಶರೀರವನ್ನು ಸೀಳುತ್ತಿದ್ದ ಆ ಬಲಿಷ್ಠ ಪ್ರಾಣಿಯ ಮೇಲೆ ಅವಳಿಗೆ ಬಂದ ಕೋಪ ಅವಳ ಭಯವನ್ನು, ನೋವನ್ನು ಅಲಕ್ಷಿಸಿದ್ದಲ್ಲದೆ ಅವಳು ಬದುಕಲೇಬೇಕೆಂಬ ನಿಲುವನ್ನು ತಳೆಯುವಂತೆ ಮಾಡಿತು. "ಇದು

ನನ್ನ ಕೈಯನ್ನು ಪಡೆದೀತು! ಆದರೆ ನನ್ನ ಜೀವವನ್ನಲ್ಲ" ಎಂದು ನಿರ್ಧರಿಸಿದಳು. ಹೀಗೆ ಸ್ಯಾಂಡಿ ಚುರುಕಾಗಿ ಯೋಚಿಸುತ್ತಿರುವಾಗ ಅವಳ ಬುದ್ಧಿಗೆ ಹಿಂದೆ ಯಾವುದೋ ಅಪಾಯಕರ ಸನ್ನಿವೇಶದಿಂದ ಪಾರಾದ ಸಂಗತಿ ನೆನಪಿಗೆ ಬಂತು, ಒಮ್ಮೆ ಅವಳು ಶಾಂತಿ ಸೇನಾ ಪಡೆಯಲ್ಲಿ ಕೆಲಸ ಮಾಡುತ್ತಿದ್ದಾಗ, ತೋಟದಲ್ಲಿ ಜೇನ್ನೊಣವೊಂದು ಅವಳ ಮೇಲೆ ಎರಗಿತ್ತು. ಆಗ ಅವಳು ಕಂದಕ ಒಂದರಲ್ಲಿ ಜಿಗಿದು ತನ್ನ ತಲೆಯ ಮೇಲೆ 'ಜಾಕೆಟ್' ಹೊದೆದುಕೊಳ್ಳುವುದರ ಮೂಲಕ ಕೂದಲಂತರದಲ್ಲಿ ಅಪಾಯದಿಂದ ಪಾರಾಗಿದ್ದಳು. ಅದರ ಅನುಭವದಿಂದ ಈಗ ಶಾಂತವಾಗಿ ಎದುರಿಸಲು ಸಿದ್ಧಳಾದಳು "ಆ ಮೊಸಳೆ ಬಗ್ಗೆ ತನಗೇನುಗೊತ್ತು?" ಎಂದು ಯೋಚಿಸಿದಳು. "ಕ್ರೊಕೊಡೈಲ್ ದಂಡಿ" ಎಂಬ ಸಿನಿಮಾವೊಂದು ಆಕೆ ನೆನಪಿಗೆ ಬಂತು. ಮೊಸಳೆಗಳು ತಮ್ಮ ಬೇಟೆಯನ್ನು ಮರಣಸುಳಿಯಲ್ಲಿ ಮುಳುಗಿಸುವಾಗ ಆ ಚಿತ್ರದ ನಾಯಕ ಮಿಕ್‌ದಂಡಿ ಹೇಳುತ್ತಾನೆ. ಇದು ನನ್ನನ್ನು ಎಳೆಯುತ್ತಿರುವಂತೆ ತೋರುವುದಿಲ್ಲ" ಎಂದು. ಸ್ಯಾಂಡಿ ಈಗ ಮನಗಂಡಳು. "ಇದು ತನ್ನನ್ನು ಮುಳುಗಿಸಲು ಯತ್ನಿಸುತ್ತಿದೆ" ಎಂದು.

ಇದ್ದಕ್ಕಿದ್ದಂತೆ ನೀರಿನ ಸುಳಿ ನಿಂತಿತು. ಮೊಸಳೆ ನೀರಿನೊಳಗೆ ಅವಳನ್ನು ಹಿಡಿದುಕೊಂಡು ತನ್ನ ಚಲನೆಯನ್ನು ನಿಲ್ಲಿಸಿತು. ಸ್ಯಾಂಡಿ ತನ್ನ ಕಾಲುಗಳನ್ನು ತಳಕ್ಕೆ ಊರುತ್ತಾ ನೀರಿನ ಮೇಲ್ಮುಖಕ್ಕೆ ಜಿಗಿಯಲು ಯತ್ನಿಸಿದಳು. ಅವಳ ತಲೆ ಕಾಣಿಸಿಕೊಂಡು ಅವಳು ಶ್ವಾಸವನ್ನೆಳೆದುಕೊಳ್ಳುತ್ತಿದ್ದಂತೆ ಕೆನ್ ಅವಳಿಗೆ ಧೈರ್ಯವನ್ನು ಹೇಳಿದ.

ಆ ದೈತ್ಯಪ್ರಾಣಿ ಎಡಗಡೆ ತಿರುಗುತ್ತಾ ಅವಳನ್ನು ಅಸ್ತವ್ಯಸ್ತಗೊಳಿಸಿ ಅಸ್ವಸ್ಥಳನ್ನಾಗಿಸಿತು. ಆ ಕೂಡಲೆ ಆಕೆ ಮೊಸಳೆಯ ಮೂಗಿನ ಮೇಲೆ ಗುದ್ದಿದರೆ ಅದು ಬಿಟ್ಟುಬಿಡುತ್ತದೆಯೆಂದು ಹಿಂದೆ ಯಾರೋ ಹೇಳಿದ್ದನ್ನು ಸ್ಮರಿಸಿಕೊಂಡಳು. ಅಂತೆಯೇ ಅವಳು ತನ್ನ ಮತ್ತೊಂದು ಕೈಯಿಂದ ಮೊಸಳೆಯ ಮೂತಿಯ ಮೇಲೆ ಏಟನ್ನು ಸುರಿಮಳೆಗೈದಳು.

ಕೆನ್ ನೀರಿನ ತಳವನ್ನು ಶೋಧಿಸುತ್ತಾ ಮೊಸಳೆಯ ಅಸ್ಥಿಮಯ ಕಣ್ಣಿನಗುಳಿಗಳತ್ತ ಹೋದ. ತನ್ನ ಹೆಬ್ಬೆರಳುಗಳಿಂದ ಮೊಸಳೆಯನ್ನು ತಿವಿಯತೊಡಗಿದ. ಆದರೆ ಅದರ ಸಹಜಚರ್ಮದ ಮೂರು ಪಟ್ಟಿನ ಅಭೇದ್ಯ ಚರ್ಮದ ವಿರುದ್ಧ ಅವನ ಬೆರಳುಗಳು ಹೋರಾಡಿ, ಬಾಗಿ, ಸೋತು ಹೋದವು. ಅನಂತರ ಅವನು ಅದನ್ನು ಶಪಿಸುತ್ತಾ ತನ್ನ ಎರಡೂ ಕೈಗಳಿಂದ ಅದರ ಕೊರಳನ್ನು ತರಚಿದ. ಆದರೆ ಅದು ಸ್ವಲ್ಪವೂ ಹಿಂಜರಿಯಲಿಲ್ಲ

ಈಗ ಮೊಸಳೆ ನದಿ ದಡದಿಂದ ಏಳು ಮೀಟರಷ್ಟು ದೂರದ ನದೀಪ್ರವಾಹಕ್ಕೆ ಅವರನ್ನು ಎಳೆದಿತ್ತು. ಸ್ಯಾಂಡಿ ಆಗಲೇ ತನ್ನ ಕಿರುಬೆರಳ ಮೇಲೆ ನಿಂತರೆ ಅವಳ ಮುಖ ಮಾತ್ರ ಕಾಣುತ್ತಿತ್ತು.

ಸ್ಯಾಂಡಿಯನ್ನು ಹಿಡಿದೆಳೆದರೆ ಅವಳ ಕೈ ಕತ್ತರಿಸುವುದೆಂದು ಹೆದರಿದ್ದ ಆತ ಮೊಸಳೆಯ ಅಲೆಯನ್ನು ಹಿಡಿದು ಸಾಧ್ಯವಾದಷ್ಟು ತನ್ನ ಶಕ್ತಿಯನ್ನು ಉಪಯೋಗಿಸಿ ಅದನ್ನು ದಡದ ಕಡೆಗೆ ಎಳೆಯತೊಡಗಿದ. ಸ್ಯಾಂಡಿಯು ತನ್ನ ನೋವನ್ನೂ ಕಡೆಗಣಿಸಿ ಅವನಿಗೆ ಸಹಾಯ ಮಾಡಿದಳು.

ಅವಳ ಕಣ್ಣುಗಳಲ್ಲಿ ಬರಿಯ ಪ್ರತಿಭಟನೆಯಲ್ಲದೆ ಬೇರೇನೂ ಕಾಣಿಸಲಿಲ್ಲ. "ನಾವಿದನ್ನು ಸಾಯಿಸುತ್ತಿದ್ದೇವೆ" ಎಂದು ಗಟ್ಟಿಯಾಗಿ ಚೀರಿದಳು.

ಕೆನ್ ತನ್ನ ಬಲಗೈಯ ತೀಕ್ಷ್ಣ ಇರಿತದಿಂದ ಅದನ್ನು ತಿವಿದ. ಆದರೆ ಅದು ನೀರಿಗೆ ಹೊಡೆದಂತಿರುತ್ತಿತ್ತು. ಆಗಲೇ ಸ್ಯಾಂಡಿಯ ಮುಖ ಬಿಳಿಚಿಕೊಳ್ಳಲಾರಂಭಿಸಿತ್ತು. ಕೈಯ ನೋವಿನಿಂದ ಕಂಗೆಟ್ಟಿದ್ದಳು. ಆದರೆ ಅವಳು ಮೊಸಳೆಯಿಂದ ಬಿಡಿಸಿಕೊಳ್ಳುವ ವ್ಯರ್ಥಸಿಲುವಿನಲ್ಲಿ ಅವುಡು ಗಚ್ಚಿದ್ದನ್ನು ಕೇನ್ ಗಮನಿಸಿದ್ದ. ಅವಳು ಅವನನ್ನು ನಂಬಿದ್ದಳು. ಹಾಗಾಗಿ ಕೇನ್ ಅವಳನ್ನು ಸಾಯಲು ಬಿಡಬಾರದೆಂದು ನಿರ್ಧರಿಸಿದ್ದ.

ತಮ್ಮ ಪ್ರಯತ್ನದೊಡನೆ ಏದುಸಿರು ಬಿಡುತ್ತಾ ಕ್ಷಣದಿಂದ ಕ್ಷಣಕ್ಕೆ ಅವರು ನದಿಯ ದಡದತ್ತ ಚಲಿಸಿದರು. ಸೊಂಟ ಪರ್ಯಂತದ ನೀರಿಗೆ ಅವರು ತಲುಪಿದಾಗ ನದಿಯ ದಡ ಅವರಿಗೆ ತೀರಾ ಸಮೀಪವಾಗಿತ್ತು. ಕೆನ್ ತನ್ನ ಹಿಂದೆ ನೋಡಿಕೊಂಡ. ಕೇವಲ ಎರಡು ಮೀಟರ್ ಅಷ್ಟು ದೂರವಿತ್ತು. ದಡ ತಲುಪಿದರು ಅಷ್ಟು ವಷ್ಟರಲ್ಲಿ ಮೊಸಳೆ ಕೆನ್‌ನನ್ನು ಒಂದೆಡೆ ಬೀಳಿಸುತ್ತಾ ಮತ್ತೊಂದು ಮರಣಾಂತಿಕ ಸುಳಿಯಲ್ಲಿ ಅವನನ್ನು ಕೆಡವಿತ್ತು. ಸ್ಯಾಂಡಿ ನೀರಿನ ತಳಕ್ಕೆ ಹೋಗುತ್ತಿದ್ದಂತೆ ಮರಳ ರಾಶಿಗೆ ಹಲ್ಲನ್ನೂರಿದಳು. ಆ ಪ್ರಾಣಿಯೊಡನೆ ತಾನು ಗಿರಕಿಹೊಡೆಯುತ್ತೇನೆ. ಅದು ತನ್ನ ಗಿರಕಿಯನ್ನು ನಿಲ್ಲಿಸಿದಾಗ ತಾನು ಸಾಯುವುದಿಲ್ಲ ಎಂದು ಯೋಚಿಸಿದಳು ಸ್ಯಾಂಡಿ. ಆಕೆಗೆ ಮೊಸಳೆಯ ಹೆದರಿಕೆಗಿಂತ ತಾನೆಲ್ಲಿ ಮುಳುಗಿಹೋಗುತ್ತೇನೋ ಎಂಬ ಭಯವೇ ಹೆಚ್ಚಾಯಿತು. ನೀರಿನ ತಳದಲ್ಲಿ ಡೋಲಿಹೊಡೆಯುತ್ತಿರುವ ಆಕೆ ದೊಡ್ಡ ದೊಡ್ಡ ಬಂಡೆಗಳಿಂದ ತನ್ನ ತಲೆಯನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಅಪಾಯಕ್ಕೊಳಗಾಗದ ತನ್ನ ಬಲಗೈಯಿಂದ ತುಂಬಾ ಯತ್ನಿಸಿದಳು. ಒಂದು ........ ಎರಡು ಸ್ಯಾಂಡಿ ಎಣಿಕೆಯನ್ನಾರಂಭಿಸಿದಳು. ಮೂರು, ನಾಲ್ಕು....ಅಷ್ಟರಲ್ಲಿ ಆಕೆ ಮೇಲೆ ಬಂದಳು. ಐದು, ಆರು, ಏಳು—ಎಣಿಕೆ ನಿಂತು ಹೋಯಿತು.

ಕೆನ್ ಅವಳನ್ನು ಎಳೆದ. ನದಿಯ ದಂಡೆಯತ್ತ ನೋಡಿದ. ಅವನ ಎದೆ ಭಾಗ ಮುಳುಗಿಹೋಗಿತ್ತು. ಅವರು ಎದೆ ಮಟ್ಟದ ನೀರಿನಲ್ಲಿದ್ದರು. ಮೊಸಳೆಗೆ ಅವರನ್ನು ನೀರಿನ ಮಧ್ಯದ ಪ್ರವಾಹಕ್ಕೆ ಜಾರಿಸಲು ತುಂಬಾ ಸುಲಭವಾಗಿತ್ತು. ಕೆನ್ ಮತ್ತು ಸ್ಯಾಂಡಿ ತಮ್ಮ ಇದ್ದ ಶಕ್ತಿಯನ್ನೆಲ್ಲಾ ಉಪಯೋಗಿಸಿ ಮೊಸಳೆಯನ್ನು ನದಿಯ ದಡದತ್ತ ಎಳೆದರು. ದಡಕ್ಕೆ ಸುಮಾರು ಎರಡು ಮೀಟರಷ್ಟು ದೂರವಿರುವಾಗ ಮೊಸಳೆ ಮತ್ತೆ ಅವರನ್ನು ನೀರಿಗೆ ಎಳೆಯಿತು.

ಈ ಸಮಯ ಮೊಸಳೆ ಅವರನ್ನು ಕೆಳಗೆಳೆಯುವುದಕ್ಕೆ ಮೊದಲೇ ಸ್ಯಾಂಡಿ ಉಸಿರನ್ನು ಬಿಗಿಹಿಡಿದಳು. ಮತ್ತೆ ಎಣಿಸುವುದರಲ್ಲಿ ಮನಸ್ಸನ್ನು ಕೇಂದ್ರೀಕರಿಸಿದಳು. ಎರಡು .... ಐದು .... ಎಂಟು .... ಹತ್ತನ್ನು ಎಣಿಸುವಷ್ಟರಲ್ಲಿ ಮೊಸಳೆ ಸ್ತಬ್ಧವಾಯಿತು.

ಶ್ವಾಸದ ಒತ್ತಡದಿಂದ ನದಿಯ ತಳದಲ್ಲಿ ಅವಳು ಮುಗ್ಗರಿಸಿದಳು. ಅಪಾಯವೇನೂ ಆಗಲಿಲ್ಲ. ಆ ಮಬ್ಬು ನೀರಿನಲ್ಲಿ ಎಲ್ಲಾ

ಕಡೆಗೂ ಕೈಯಿಂದ ಬಡಿದಳು. ಅಸಹಾಯಕಳಾದ ಆಕೆ–ನೀರಿನ ತಳದಿಂದ ಏನನ್ನೂ ಹೇಳಲಾರದವಳಾಗಿದ್ದಳು. ನೀರ್ಗುಳ್ಳೆಗಳ ಸಾಲೊಂದು ಅವಳ ಮುಖದ ಮೇಲೆ ಹಾದುಹೋಯಿತು. ಆ ಅಸ್ಪಷ್ಟ ಮಿಣುಕಿನೆಡೆ ಚಲಿಸಿದಳು. ಅದು ಕೆನ್‌ನ ಮುಖದ ಪ್ರತಿಬಿಂಬವಾಗಿತ್ತು. ಅವಳು ಆ ಪ್ರತಿಬಿಂಬದತ್ತ ಚಲಿಸತೊಡಗಿದಳು. ಆದರೆ ಮೊಸಳೆ ಅವಳನ್ನು ಆಳವಾದ ನೀರಿನಲ್ಲಿ ಹಿಡಿದುಕೊಂಡಿತ್ತು. ತನ್ನ ಶ್ವಾಸವನ್ನು ಇಷ್ಟು ಹೊತ್ತು ಹಿಡಿದುಕೊಳ್ಳಲು ಸಾಧ್ಯವೆಂದು ಆಕೆ–ತಿಳಿದಿರಲಿಲ್ಲವಾಗಿತ್ತು. ಅಡಗತ್ತರಿಯಲ್ಲಿ ಸಿಕ್ಕಂತಿದ್ದ ಅವಳು ತನ್ನ ಬಲಗೈಯಿಂದ ಕೆನ್‌ನ ಸೊಂಟವನ್ನು ಹಿಡಿದುಕೊಳ್ಳುತ್ತಾ ಅವನೆಡೆ ಜಿಗಿದಳು. ಅವನ ಸೊಂಟದ ಮೇಲ್ಭಾಗವನ್ನು ಆಲಂಗಿಸುತ್ತಾ, ಆಮೇಲೆ ಅವನ ಭುಜವನ್ನು ಹಿಡಿದುಕೊಂಡು. ಕೂಡಲೆ ಕೆನ್ ಅವಳನ್ನು ತನ್ನೆಡೆಗೆ ಎಳೆದ. ಅವಳ ಮುಖ ನೀರಿನ ಮೇಲ್ಭಾಗದಲ್ಲಿ ಕಾಣಿಸಿಕೊಂಡಿತು. ಇನ್ನು ಸ್ಯಾಂಡಿ ನೀರಿನ ತಳಕ್ಕೆ ಹೋಗಲಾರಳೆಂದು ಕೆನ್ ಗ್ರಹಿಸಿದ. ಒಮ್ಮೆಯೂ ಕೂಡಾ ಮೊಸಳೆ ನೀರಿನಿಂದ ಮೇಲಕ್ಕೆ ಬರಲಿಲ್ಲ. ತನ್ನ ಬಲಿಪಶು ಮುಳುಗುವವರೆಗೆ ಅದು ನೀರಿನಲ್ಲಿ ಮುಳುಗಿರಬೇಕಿತ್ತು. ಆ ಕ್ರೂರ ಪಶುವಿನ ಮಿದುಳು ತನಗೆ ವಶವಾಗುವುದಕ್ಕೆ ಬೇರೆ ಇನ್ನೇನೂ ಇಲ್ಲವೆಂದು ತಿಳಿದಿತ್ತು. ಡೈನಾಸಾರ್‌ದಂತಹ ದೈತ್ಯ ಪ್ರಾಣಿಯ ಗುಂಪಿಗೆ ಸೇರುವ ಮೊಸಳೆಯ ಆಕ್ರಮಣದಿಂದ ಬಿಡುಗಡೆ ಹೊಂದುವುದು ತುಂಬಾ ಕಷ್ಟದ ಸಂಗತಿಯಾಗಿತ್ತು.

ಮೊಸಳೆ ತನ್ನ ಉರುಳುವಿಕೆಯ ಸರಣಿಯನ್ನು ಮುಂದುವರಿಸಿತು. ಆ ತಿರುವಿನ ಸುತ್ತ ಆಳವಾದ ನೀರಿನ ಪ್ರವಾಹದಲ್ಲಿ ಸಿಂಬಿಸುತ್ತಿದಂತೆ ಸುತ್ತಿಹೋಗುತ್ತಿರುವ ಅವನಿಗೆ ಬೇರೆ ಯಾವುದೇ ಪ್ರತಿರೋಧನವೂ ಇರಲಿಲ್ಲವಾಗಿತ್ತು.

ಈಗ ಅವರು ಮೊಸಳೆ ಸಹಿತ ನೀರು ಕಡಿಮೆ ಇದ್ದ ಜಾಗವನ್ನು ತಲುಪಿದ್ದರು. ಕೆನ್ ಈಗ ತೊಡೆಗಂಟ ನೀರಿನಲ್ಲಿ ಇದ್ದ. ನೀರಿನ ಪ್ರವಾಹದ ವಿರುದ್ಧ ಮೊಸಳೆಯ ತಲೆಯೊಡನೆ ಆತ ಕುಸ್ತಿ ಮಾಡುತ್ತಾ ಬಿಗಿಯಾಗಿ ನಿಂತಿದ್ದ. ಅವನು ನಿಂತ ಜಾಗ ನೀರುಮಾಪಕ ಕಂಭಕ್ಕೆ ತೀರಾ ಹತ್ತಿರವಾಗಿತ್ತು. ಮೊಸಳೆ ತನ್ನ ಶಕ್ತಿಯನ್ನೆಲ್ಲಾ ಉಪಯೋಗಿಸಿ ಸ್ಯಾಂಡಿಯನ್ನು ತಿರುಗಿಸಿತು. ಆದರ ರಭಸಕ್ಕೆ ನೀರುಮಾಪಕ ಕಂಬ ಎರಡು ತುಂಡಾಯಿತು. ಮುರಿದ ಒಂದು ತುಂಡು ಅವಳ ಎಡಭುಜದ ಮೂಲಕ–ಹಾದು ಪಕ್ಕೆಲುಬನ್ನು ಘಾಸಿಗೊಳಿಸಿತು. ಕೂದಲೆಳೆ ಅಂತರದಲ್ಲಿ ಎದೆಗೆ ತಾಗುವುದು ತಪ್ಪಿತು. ಇರಿತದ ನೋವು ಕಾಣಿಸಿಕೊಂಡಿತು ಅವಳಿಗೆ. ತಾನು ನಿಶ್ಚೇತನಳಾದರೆ ಸಾಯುವುದು ಖಚಿತವೆಂದು ಯೋಚಿಸಿದ ಆಕೆ ಜಾಗರೂಕಳಾಗಿ, ಉತ್ಸಾಹದಿಂದ ಮೊಸಳೆಯೊಡನೆ ಹೋರಾಡ ತೊಡಗಿದಳು.

ಸ್ಯಾಂಡಿಯ ಮೇಲೆ ಸ್ವಾಮ್ಯ ಪಡೆದನೋ ಎಂಬಂತೆ ಕೆನ್ ಅವಳ ಸೊಂಟವನ್ನು ಹಿಡಿದು ನೀರಿನ ದಡಕ್ಕೆ ಎಳೆದ. ಅವಳ ಕೈಯ ಯೋಚನೆಯನ್ನು ಬಿಟ್ಟು ಅವಳ ಜೀವ ಉಳಿಸುವುದರ ಸಲುವಾಗಿ ಆ ದುಷ್ಟ ಮೊಸಳೆಯೊಂದಿಗೆ ಕೆನ್ ದಾರುಣ ಹೋರಾಟದಲ್ಲಿ ತೊಡಗಿದ. ಮಣ್ಣಿನಲ್ಲಿ ಹೂತು ಹೋಗಿದ್ದ ಹಿಮ್ಮಡಿ ಎಳೆದುಕೊಂಡು ಆತ

ರಾಕ್ಷಸ ಪ್ರಾಣಿಯ ವಿರುದ್ಧ ಸೆಣಸುವಾಗ ತುಂಬಾ ಪ್ರಯಾಸಗೊಂಡ. ತನ್ನ ಬಲಿಷ್ಠ ಬಾಲದಿಂದ ಜೋರಾಗಿ ಹೊಡೆಯುತ್ತಾ ಕ್ಷೌರಕತ್ತಿಯಂತೆ ಹರಿತವಾದ ತನ್ನ ಉಗುರುಗಳಿಂದ ಕೆನ್‌ನ ಕಾಲುಗಳನ್ನು ಇರಿಯುತ್ತಾ ಹೋರಾಡುತ್ತಿರುವ ಮೊಸಳೆಯಾಗಲೀ, ಧೈರ್ಯದಿಂದ ಸೆಣಸುತ್ತಿರುವ ಕೆನ್ ಆಗಲೀ ಯಾರೂ ಸೋಲುವಂತೆ ಕಾಣಲಿಲ್ಲ. ಸ್ಯಾಂಡಿ ಉಕ್ಕಿನಂತೆ ಬಿಗಿಯಾಗಿ ನಿಂತಳು. ದಡದತ್ತ ತನ್ನ ಕಾಲುಗಳನ್ನು ಸರಿಸುತ್ತಾ ಇದ್ದ ಶಕ್ತಿಯನ್ನೆಲ್ಲಾ ಉಪಯೋಗಿಸಿ ಮೊಸಳೆಯನ್ನು ಜೋರಾಗಿ ಎಳೆದಳು. ಮಣ್ಣಿನಲ್ಲಿ ಹೂತುಹೋದ ಕಾಲುಗಳಿಂದ ಒಮ್ಮೆಲೆ ಆಕಾಶಬಾಣದಂತೆ ದಡದತ್ತ ಜಿಗಿದಳು. ನೀರಿನಿಂದ ಹೊರಬಂದ ಆಕೆ ಭೂಮಿಯ ಮೇಲೆ ಅಸ್ತವ್ಯಸ್ತ ಬಿದ್ದಳು. ಕೆನ್ ಅವಳ ಕಡೆ ನೋಡಿದ. ಸ್ಯಾಂಡಿಯ ಎಡಗೈ ಜಜ್ಜಿಹೋಗಿ ಕೈಯ ಮೂಳೆ, ಮಾಂಸಖಂಡ, ಸ್ವಲ್ಪ ಚರ್ಮ ಮತ್ತು ಸ್ನಾಯುವಿನ ಸ್ವಲ್ಪ ಭಾಗ ಮಾತ್ರ ನೇತಾಡುತ್ತಿತ್ತು. ಮೊಸಳೆಯ ರೌದ್ರತೆ ಅವಳ ಕೈಯ ಮಣಿಕಟ್ಟನ್ನು ಜಜ್ಜಿತ್ತು ಮತ್ತು ತೋಳಿನ ಮೇಲ್ಭಾಗದ ಮೂಳೆಯನ್ನು ಮುರಿದಿತ್ತು. ಅದೀಗ ಕೈಯ ಸಾಮಾನ್ಯ ಗಾತ್ರದ ಮೂರು ಪಟ್ಟು ಊದಿತ್ತು.

ಮೊಸಳೆ ತನ್ನ ದೊಡ್ಡ ತಲೆಯನ್ನು ಹಿಂದೆ-ಮುಂದೆ ತೂಗುತ್ತಾ ನೀರ ಹೊರಗೆ ಬಂತು. ತನ್ನ ದವಡೆಯನ್ನು ಅಗಲವಾಗಿ ತೆರೆಯಿತು ಮತ್ತು ಅರೆಬರೆ ತಿಂದಿದ್ದ ಸ್ಯಾಂಡಿಯ ಮುಂಗೈಯನ್ನು ನುಂಗಿ ಹಾಕಿತು. ಆಮೇಲೆ ಸ್ಯಾಂಡಿಯನ್ನು ದುರುಗುಟ್ಟಿ ನೋಡಿತು. ಹಾಗೆಯೇ ಸದ್ದಿಲ್ಲದೆ ನೀರಿಗೆ ಜಾರಿಕೊಂಡಿತು.

ಅವರೀಗ ನೀರಿನ ಅಂಚಿನಿಂದ ಕೇವಲ ೩೦ ಸೆಂ. ಮೀ. ಅಂತರದಲ್ಲಿದ್ದರು. ಆದರೆ ಕೆನ್ ಸ್ಯಾಂಡಿಯ ಕಡೆ ಚಲಿಸುವುದಕ್ಕೆ ಮೊದಲು ಅವಳ ಕೈಯಿಂದ ಹರಿಯುತ್ತಿರುವ ರಕ್ತವನ್ನು ತಡೆಯುವುದಕ್ಕೆ ಯಾವುದಾದರೂ ಕ್ರಮಕೈಗೊಳ್ಳಬೇಕಿತ್ತು. ಇಲ್ಲದಿದ್ದರೆ ಅವಳು ಸಾಯುತ್ತಿದ್ದಳು. ತನ್ನ ಟೀ ಷರ್ಟನ್ನೇ ಅವಳ ಕೈಯ ಸುತ್ತ ಬಿಗಿಯಾಗಿ ಕಟ್ಟಿದ.

ಇಬ್ಬರೂ ಒಟ್ಟಿಗೆ ದಡಕ್ಕೆ ಓಡಿದರು. ಸ್ಯಾಂಡಿಗೆ ಏನೋ ಭಾರ ಕಳೆದುಕೊಂಡಂತೆ ಏನಿಸಿತು. "ಅದು ಇನ್ನು ತನ್ನನ್ನು ಪಡೆಯಲಾರದೆಂದು" ಅಂದುಕೊಂಡಳು.

ಏನೇ ಆದರೂ ಸ್ಯಾಂಡಿಯ ಆರೋಗ್ಯದ ಬಗ್ಗೆ ಆತಂಕವಿತ್ತು. ಆಕೆ ತುಂಬಾ ರಕ್ತ ಕಳೆದುಕೊಂಡಿದ್ದಳು. ಆ ಸಂಜೆ ಕೆನ್ ಸ್ಯಾಂಡಿಯನ್ನು ಯೋಗ್ಯವಾದ ಚಿಕಿತ್ಸಾ-ಲಯಕ್ಕೆ ಕರೆದುಕೊಂಡು ಹೋದ. ಅಲ್ಲಿ ಸ್ಯಾಂಡಿಗೆ ಆ್ಯಂಟಿಬಯಾಟಿಕ್‌ನ್ನು ನೀಡಿ ಒಂದು ತಾಸಿನ ಚಿಕಿತ್ಸೆ ನಂತರ ಸ್ಯಾಂಡಿಯನ್ನು ನಾಲ್ಕು ಚಕ್ರದ ಗಾಡಿಯ ಮೇಲೆ ಹೊರಗೆ ತರಲಾಯಿತು. ಕೂಡಲೆ ಕೆನ್ ಆ ಅಡವಿಯ ಒರಟು ರಸ್ತೆಯಲ್ಲಿ ಪ್ರಯಾಣ ಹೊರಟ.

ಅವರು ಮೂರುಗಂಟೆ ತಡವಾಗಿ ಆಸ್ಪತ್ರೆಯೊಂದಕ್ಕೆ ಬಂದು ತಲುಪಿದಾಗ ಪರಿಣತ ಡಚ್ ಡಾಕ್ಟರೊಬ್ಬ ಜಜ್ಜಿ ನೇತಾಡುತ್ತಿದ್ದ ಅವಳ ಕೈಯನ್ನು ಕತ್ತರಿಸಿ ಚಿಕಿತ್ಸೆ ನೀಡಿದ. ಮರುದಿನ ಅವರು ನುರಿತ ವೈದ್ಯರಿಂದ ಚಿಕಿತ್ಸೆ ಪಡೆಯುವ ಸಲುವಾಗಿ

ನೈರೋಬಿಗೆ ಹೊರಟರು. ಅಲ್ಲಿ ಡಾಕ್ಟರುಗಳು ಸ್ಯಾಂಡಿಗೆ ವಿಶ್ರಾಂತಿ ಪಡೆಯಲು ಸಲಹೆ ನೀಡುವುದರೊಂದಿಗೆ ಅವಳ ಶಕ್ತಿ ವರ್ಧನೆಗೆ ರಕ್ತದ ಚುಚ್ಚುಮದ್ದನ್ನು ನೀಡಿದರು. ಅವಳು ಯುನೈಟೆಡ್ ಸ್ಟೇಟ್‌ಗೆ ಹಿಂತಿರುಗುವುದಕ್ಕೆ ಮೊದಲು ಅವಳಿಗೆ ಶಸ್ತ್ರ ಚಿಕಿತ್ಸೆಯ ಅವಶ್ಯಕತೆಯಿದೆಯೆಂದು ತಿಳಿಸಿದರು. ಕೆನ್ ಅವಳದೇ ರಕ್ತದ ಗುಂಪನ್ನು ಹೊಂದಿದ್ದರಿಂದ ಅವಳಿಗೆ ರಕ್ತ ನೀಡಿದ. "ನಾವು ರಕ್ತಸಹೋದರರೆಂದು" ಸ್ಯಾಂಡಿ ಈಗ ಹೇಳುತ್ತಾಳೆ.

ಇದಾದ ಒಂದು ವಾರದ ನಂತರ ಕೆನ್ ಮತ್ತು ಸ್ಯಾಂಡಿ ನೈರೋಬಿಯಲ್ಲಿ ಆಸ್ಪತ್ರೆಯನ್ನು ಬಿಟ್ಟು ಬೇಟೆಯಾಡಿದ ಪ್ರಾಣಿಗಳನ್ನು ಅಡುಗೆಮಾಡಿಕೊಡುವ ಕಾರ್ನಿವೋರ್ ಎಂಬ ರೆಸ್ಟುರಾಕ್ಕೆ ಹೋದರು. ಸ್ಯಾಂಡಿರೋಸಿ ಅಲ್ಲಿ ಒಮ್ಮೆ ಕ್ರೂರವಾಗಿ ನಕ್ಕು ಮೊಸಳೆಗೆ ಆರ್ಡರ್ ಮಾಡಿದಳು.

[ಸ್ಯಾಂಡಿಯ ಅಂಗನ್ಯೂನತೆಯನ್ನು ಸರಿಪಡಿಸಲು ಅವಳ ಬೆನ್ನಿನಿಂದ ಮಾಂಸವನ್ನು, ತೊಡೆಯಿಂದ ಚರ್ಮವನ್ನು ತೆಗೆದು ಕಸಿಮಾಡಲಾಗಿದೆ.

ಸ್ಯಾಂಡಿ ಈಗ ಕೃತಕ ಕೈಯನ್ನು ಹೊಂದಿದ್ದಾಳೆ. "ಕೆನ್ ನನ್ನನ್ನು ಬದುಕಿಸುವುದಕ್ಕೋಸ್ಕರ ಅಪಾಯಕಾರಿ ಕೆಲಸಕ್ಕೆ ಕೈಹಾಕಿದ ಅವನು ನನಗೆ ಹಿರಿಯಣ್ಣನಿದ್ದಂತೆ." ಎಂದು ಸ್ಯಾಂಡಿ ಹೇಳುತ್ತಾಳೆ. "ಅವಳು ನನ್ನನ್ನು ಬಿಟ್ಟುಬಿಡುವುದಕ್ಕೆ ನಿರಾಕರಸಿದ್ದರಿಂದ ಅವಳನ್ನು ಬದುಕಿದ್ದಾಳೆ" ಎಂದು ಕೆನ್ ಹೇಳುತ್ತಾನೆ.]



ಹೆಚ್ಚು ನೋಡುವುದು, ಹೆಚ್ಚು ಅನುಭವಿಸುವುದು ಮತ್ತು ಹೆಚ್ಚು ಓದುವುದು
—ಇವು ಜ್ಞಾನಾರ್ಜನೆಯ ಮೂರು ಮೆಟ್ಟಿಲುಗಳು.

—ಕ್ಯಾಥರೆಲ್

# ಕೇಶಪುರಾಣ

ಯೋಗಾಚಾರ್ಯ ಕೆ. ಕೇಶವಮೂರ್ತಿ

(ಕೇಶಸೌಂದರ್ಯದ ಸರ್ವಾಂಗೀಣ ವಿವೇಚನೆ ಹಾಗೂ ಕೇಶಸ್ವಾಸ್ಥ್ಯದ ಉಪಾಯಗಳ ನಿರೂಪಣೆ.)

"...ಹಿಮ್ಮಡಿಗೊಗುವ ಕುಂತಳವಬಲೆ ಕಾಪಿಸಿ ನೆನೆದಳಚ್ಯುತನ"

—ಮಹಾಭಾರತ ಅರಣ್ಯಪರ್ವ

ಹಿಂಗಾಲುಗಳವರೆಗೆ ಇಳಿಬಿದ್ದ ಜಡೆಯುಳ್ಳ ದ್ರೌಪದಿಯು ಶ್ರೀಕೃಷ್ಣನನ್ನು ನೆನೆದಳು.

"...ನೋಡಿಮ ನಿನ್ನೀ ಕೇಶಪಾಶಂ ಕುರುಪತಿಗಾಯ್ತಲ್ತೆ ಕೀನಾಶಪಾಶಂ"

—ರನ್ನನ ಸಾಹಸಭೀಮ ವಿಜಯ

ದ್ರೌಪದಿ, ಈ ನಿನ್ನ ಕೂದಲಿನ ಪಾಶವು ದುರ್ಯೋಧನನಿಗೆ ಯಮಪಾಶವಾಯಿತಲ್ಲವೇ ?

ಈ ರೀತಿ ಸ್ತ್ರೀಯರ ತಲೆಗೂದಲನ್ನು ವರ್ಣಿಸಿರುವ ಉಕ್ತಿಗಳನ್ನು ಕಾವ್ಯ ಮತ್ತು ಪುರಾಣಗಳಿಂದ ಆಯುತ್ತಾ ಹೋದರೆ ಅದೇ ಒಂದು ಗ್ರಂಥವಾಗುತ್ತದೆ. ತಲೆಗೂದಲಿಗೆ ಪ್ರಾಚೀನ ಕಾಲದಿಂದಲೂ ಒಂದು ವಿಶೇಷ ಮಾನ್ಯತೆ ಸಂದಿದೆ. ಅದು ಸ್ತ್ರೀಯರ ಮುಖ ಸೌಂದರ್ಯವನ್ನು ಹೆಚ್ಚಿಸುವುದೇ ಇದಕ್ಕೆ ಕಾರಣ. ಸ್ತ್ರೀ ಎಷ್ಟೇ ರೂಪವತಿ ಆಗಿದ್ದರೂ ಉದ್ದವಾದ ಜಡೆ, ದಟ್ಟವಾದ ಕೂದಲಿಲ್ಲದಿದ್ದರೆ ಅದೊಂದು ಮಹಾ ಕೊರತೆಯೇ. ಕೊರತೆಯೇನು ಬಂತು? ಆಕೆಯನ್ನು ರೂಪಸಿಯೆಂದು ನಮ್ಮ ಕವಿಗಳು ಪರಿಗಣಿಸಿಯೇ ಇಲ್ಲ! ನಾಗವೇಣಿ, ಫಣಿವೇಣಿ, ನೀಲವೇಣಿ ಎಂದು ಸ್ತ್ರೀಯರ ಜಡೆಯನ್ನು ಕವಿಗಳು ವರ್ಣಿಸಿರುವುದನ್ನು ನೋಡಿದರೆ ಕೇಶಸೌಂದರ್ಯದ ಮಹತ್ವ ಎಷ್ಟೆಂಬುದು ಸುವೇದ್ಯ. ಈ ಸೌಂದರ್ಯವನ್ನು ಮೊಟಕುಗೊಳಿಸುವುದೇ ಪೂರ್ವದಲ್ಲಿ ಒಂದು ಶಿಕ್ಷೆಯಾಗಿದ್ದಿತು. "ದಾಸೀ ದಂಡಸ್ತು ಮುಂಡನಮ್ !" ಅಂದರೆ ಸೇವಕಿಯೇನಾದರೂ ತಪ್ಪು ಮಾಡಿದರೆ ಅವಳ ತಲೆಯನ್ನು ಬೋಳಿಸುವುದೇ ಅವಳಿಗೆ ವಿಧಿಸುತ್ತಿದ್ದ ಶಿಕ್ಷೆ. ಹಾಗೆಯೇ ಪುರುಷರು ತಪ್ಪು ಮಾಡಿದರೆ ತಲೆ ಬೋಳಿಸಿ ಕತ್ತೆಯ ಮೇಲೆ ಮೆರವಣಿಗೆ ಮಾಡುತ್ತಿದ್ದರಂತೆ. ಹಾಗೆ ಒಬ್ಬಾತನನ್ನು ಮೆರವಣಿಗೆ ಮಾಡುತಿ

ದ್ದಾಗ "ಕಡೆಯ ಬೀದಿಗೆ ಹೋಗಲೇ ಇಲ್ಲವಲ್ಲಾ" ಎಂದನಂತೆ. ಆ ಮಾತು ಹಾಗಿರಲಿ. ಇದಕ್ಕಿಂತಲೂ ಉಗ್ರಶಿಕ್ಷೆ ಮತ್ತೊಂದಿಲ್ಲವೆಂಬುದು ಸುವೇದ್ಯ.

ಪತಿಯ ಮರಣಾನಂತರ ಸತಿಯ ತಲೆಗೂದಲನ್ನು ತೆಗೆಸಬೇಕೆಂಬ ಒಂದು ಸಂಪ್ರದಾಯವು ಬಂದದ್ದೂ ಸಹ ಆಕೆಯ ಸೌಂದರ್ಯವನ್ನು ಕುಂಠಿತಗೊಳಿಸಬೇಕೆಂಬ ಉದ್ದೇಶದಿಂದಲೇ. ಒಟ್ಟಿನಲ್ಲಿ ಸ್ತ್ರೀಯರ ಸೌಂದರ್ಯದ ಸ್ರೋತವೆಂದರೆ ಕೇಶರಾಶಿಯೇ. ಇಂತಹ ಕೂದಲು ಕೇವಲ ಉದ್ದವಾಗಿದ್ದರೆ ಮಾತ್ರ ಸಾಲದು. ಅದು ಕಪ್ಪಾಗಿಯೂ ಇರಬೇಕು ಮತ್ತು ದಟ್ಟವಾಗಿಯೂ ಇರಬೇಕು. ಆದ್ದರಿಂದಲೇ ಸ್ತ್ರೀಯರನ್ನು 'ಭೃಂಗಕುಂತಳೆ' ಎಂದು ಕರೆದಿರುವುದು. ಇನ್ನು ಆ ಕೂದಲು ಗುಂಗುರಾದರಂತೂ ಅವರನ್ನು ಹಿಡಿದು ನಿಲ್ಲಿಸುವವರಾರು? ಮುಂಗುರುಳುಗಳು ಹಣೆಯ ಮೇಲೆ ಹಾಗೂ ಕೆನ್ನೆಗಳ ಮೇಲೆ ಸ್ವಲ್ಪ ಇಳಿದಿದ್ದರೆ ಆ ಮುಖಭಾವವೇ ಬದಲಾವಣೆಯಾಗುತ್ತದೆ. ಆಗ ಆಕೆ ದೇವಲೋಕದ ಅಪ್ಸರೆಯಂತೆ ಕಾಣುತ್ತಾಳೆ. ಆಕೆಯನ್ನು ನೋಡಿದಾಗ ಎಂತಹ ಸಂಯಮಿಗಳಾದರೂ ಕ್ಷಣಕಾಲ ಚಿತ್ತಚಲ್ಲಟವಾಗುತ್ತದೆ.

ಕೇವಲ ಮನುಷ್ಯರಿಗಷ್ಟೇ ಅಲ್ಲ. ಸ್ತ್ರೀ-ದೇವತೆಯರ ಸೌಂದರ್ಯವನ್ನು ವರ್ಣಿಸುವಾಗಲೂ ಸಹ ಕೇಶರಾಶಿಯ ವರ್ಣನೆಯಿದೆ. ಉದಾಹರಣಾರ್ಥವಾಗಿ ಶ್ರೀ ಲಲಿತಾ ಸಹಸ್ರನಾಮದಲ್ಲಿ "ಬರ್ಬರಾಳಕಾಯೈ ನಮಃ" ಎಂಬ ನಾಮವೊಂದಿದೆ. ಇದರ ಅರ್ಥ ಲಲಿತಾ ತ್ರಿಪುರಸುಂದರಿಯು ಗುಂಗುರು ಕೂದಲನ್ನು ಹೊಂದಿದ್ದಾಳೆ.

ಪೂರ್ವೋಕ್ತ ಕೇಶಸೌಂದರ್ಯವು ಕಾವ್ಯದ ಮಾತಾಯಿತು. ಇಂದು ನಮ್ಮ ಕವಿಗಳೇನಾದರೂ ಕಾವ್ಯ ಬರೆದು ಅದರಲ್ಲಿ ಸ್ತ್ರೀಯರ ಕೇಶಸೌಂದರ್ಯವನ್ನು ವರ್ಣಿಸಲು ಹೊರಟರೆ ಮೋಟುವೇಣಿ, ಚೋಟುವೇಣಿ, ಗೇಣು ಜಡೆಯವಳೇ, ಅಖುಲಾಂಗೂಲವೇಣಿ (ಇಲಿ ಬಾಲದ ಜಡೆ) ಎಂದು ಮುಂತಾಗಿ ವರ್ಣಿಸಬೇಕಾಗುತ್ತದೆ—

> [ನಾವು ಅಷ್ಟಾದಶ ಪುರಾಣಗಳನ್ನು ಕೇಳಿದ್ದೇವೆ. ಆದರೆ ಈ 'ಕೇಶಪುರಾಣ'ದ ಹೆಸರು ಎಲ್ಲೂ ಇಲ್ಲವಲ್ಲಾ ಎಂದು ಅನುಮಾನಿಸಬೇಡಿ. ಸೋದರಿಯರೆ, ಇದು ತಮಗಾಗಿ ರಚಿಸಿದ ಹತ್ತೊಂಬತ್ತನೆಯ ಪುರಾಣ.]

—ಇದಕ್ಕೆ ಕಾರಣ ಇಂದು ನೀಳವೇಣಿಯರು ವಿರಳರಾಗುತ್ತಿರುವುದು. ಹಾಗೆಂದ ಮಾತ್ರಕ್ಕೇ ಸ್ತ್ರೀಯರಿಗೆ ಕೇಶಸೌಂದರ್ಯದ ಮೇಲೆ ಅಭಿಮಾನವಿಲ್ಲವೆಂದಲ್ಲ. ಹಿಂದಿಗಿಂತಲೂ ಇಂದು ಕೇಶಸ್ವಾಸ್ಥ್ಯದ ಬಗ್ಗೆ ನಮ್ಮ ಸ್ತ್ರೀಯರು ಹೆಚ್ಚು ಗಮನ ಕೊಡಲಾರಂಭಿಸಿದ್ದಾರೆ. ಆದರೆ ಅವರು ಬಳಸುವ ಸಾಮಗ್ರಿಗಳು, ಕೇಶಶೃಂಗಾರ ಸಾಧನಗಳು ಅದಕ್ಕೆ ಪೂರಕವಾಗುವ ಬದಲು ಮಾರಕಗಳಾಗಿವೆ.

ಈ ತಲೆಗೂದಲಿನ ಸೊಬಗಿನ ಮೋಹ ಕೇವಲ ಲಲನಾಮಣಿಗಳಿಗಷ್ಟೇ ಸೀಮಿತವಲ್ಲ. ಪುರುಷರೂ ಸಹ ತಮ್ಮ ಕೂದಲು ಒತ್ತೊತ್ತಾಗಿ, ಗುಂಗುರಾಗಿ, ಕಪ್ಪಾಗಿರಬೇಕೆಂದು ಬಯಸುತ್ತಾರೆ. ಕೇವಲ ಬಯಸಿದ ಮಾತ್ರಕ್ಕೇ ಇದು ಲಭ್ಯವಾಗುವುದಿಲ್ಲ. ಕೂದಲಿನ ಬೆಳವಣಿಗೆ ಅನುವಂಶೀಯತೆ

ಯನ್ನ ಹಲಂಬಿಸುತ್ತದೆ. ಕೂದಲು ಉದುರಿ ಹೋಗುವುದು, ಹಟ್ಟುದಲೆಯಾಗುವುದು, ಬಾಲನೆರೆ ಇದಕ್ಕೆಲ್ಲಾ ಅನುವಂಶೀಯತೆಯೇ ಕಾರಣ. ಆದಾಗ್ಯೂ ಅವರು ನಿಗಾವಹಿಸಿದಲ್ಲಿ ಇದನ್ನು ಸ್ವಲ್ಪ ತಡೆಯಬಹುದು. ಇಂದು ನೀಳವೇಣಿಯರು ವಿರಳರಾಗುತ್ತಿರುವುದಕ್ಕೆ ಕೂದಲಿನ ವ್ಯಾಧಿಯೂ ಕಾರಣವಾಗಿದೆ. ಕೂದಲಿಗೆ ಸಂಬಂಧಿಸಿದ ವ್ಯಾಧಿಗಳೂ ಹಲವಾರು.

೧. ಕೇಶಪತನ (ಕೂದಲು ಬುಡಸಹಿತ ಉದುರುವುದು.)
೨. ಇಂದ್ರಲುಪ್ತ (ತಲೆಯಲ್ಲೆಲ್ಲಾ ಒಂದೇ ಸಮನಾಗಿ ಉದುರದೆ ಅಲ್ಲಲ್ಲಿ ಪಟ್ಟು ಬಿದ್ದಂತೆ ದುಂಡುದುಂಡಾಗಿ ಉದುರಿರುವುದು.)
೩. ಕೂದಲು ಸೀಳುಸೀಳಾಗಿರುವುದು.
೪. ಕೂದಲು ಸದಾ ಒಣಗಿದಂತಿರುವುದು.
೫. ಕೂದಲು ತುಂಡುತುಂಡಾಗಿರುವುದು.
೬. ಕೂದಲು ಕಾಂತಿಹೀನವಾಗಿರುವುದು.
೭. ಬಾಲನೆರೆ (ಚಿಕ್ಕ ವಯಸ್ಸಿನಲ್ಲೇ ಕೂದಲು ಬೂದು ಅಥವಾ ಬೆಳ್ಳಗಾಗುವುದು).
೮. ಕೂದಲು ವಿವರ್ಣಗೊಳ್ಳುವುದು. (ಹಳದಿ, ಕೆಂಪು, ಹಸಿರು ಮುಂತಾದ ವಿವಿಧ ಬಣ್ಣಗಳಿಗೆ ತಿರುಗುವುದು.)
೯. ತಲೆತುರಿಕೆ ತಲೆಯಲ್ಲಿ ಕೆರೆತ ಹಾಗೂ ಗಂಟುಗಳಾಗುವುದು.)
೧೦. ತಲೆಯಲ್ಲಿ ಹೊಟ್ಟು ತುಂಬಿಕೊಂಡು ಉದುರುವುದು.

ಇವಿಷ್ಟೂ ಕೂದಲಿಗೆ ಸಂಬಂಧಿಸಿದ ವ್ಯಾಧಿಗಳು.

## ಕೇಶವ್ಯಾಧಿಗಳಿಗೆ ಕಾರಣ

### ೧) ದೈಹಿಕ ವ್ಯಾಧಿಗಳು

ಶಾರೀರಕ ಆರೋಗ್ಯಕ್ಕೂ ಮತ್ತು ಕೂದಲಿನ ಆರೋಗ್ಯಕ್ಕೂ ಪರಸ್ಪರ ಸಂಬಂಧವಿದೆ. ನಮ್ಮ ಚರ್ಮದ ಎರಡು ಪದರಗಳಿಗೆ ಹೊರಚರ್ಮ ಒಳಚರ್ಮ ಎಂದು ಹೆಸರು. ಹೊರಚರ್ಮದ ಮೇಲೆ ಬೆಳೆಯುವುದೇ ಕೂದಲು. ವ್ಯಕ್ತಿಯ ಆರೋಗ್ಯವು ಕೆಟ್ಟಾಗ ಕೂದಲು ನಿಶ್ಶಕ್ತವಾಗಿ ಉದುರಲು ಆರಂಭಿಸುತ್ತದೆ. ದೀರ್ಘಕಾಲದ ವ್ಯಾಧಿಗಳಿಂದ ಕೂದಲಿನ ಬುಡದಲ್ಲಿ ರಕ್ತಪರಿಚಲನೆ ಸರಿಯಾಗಿ ನಡೆಯುವುದಿಲ್ಲ. ಕೂದಲು ತನ್ನ ಬೆಳವಣಿಗೆಗೆ ಬೇಕಾದ ಪೋಷಕಾಂಶಗಳನ್ನು ರಕ್ತದಿಂದಲೇ ಪಡೆಯಬೇಕು. ಯಾವಾಗ ರಕ್ತಪರಿಚಲನೆಯೇ ಸರಿಯಾಗಿ ನಡೆಯುವುದಿಲ್ಲವೋ ಆಗ ಪೋಷಕಾಂಶಗಳ ಕೊರತೆಯಿಂದಾಗಿ ಕೂದಲು ಉದುರಲು ಪ್ರಾರಂಭಿಸುತ್ತದೆ.

ವಿಷಮಶೀತಜ್ವರ (ಟೈಫಾಯಿಡ್)ದಿಂದ ಎದ್ದ ಮೇಲೆ ತಲೆಕೂದಲೆಲ್ಲಾ ಉದುರಿ ತಲೆಬೋಳಾಗುವ ಪ್ರಸಂಗ ಅಪರೂಪವೇನಲ್ಲ. ಇದೊಂದೇ ಅಲ್ಲದೆ ಗುಹ್ಯರೋಗಗಳು, ರಜಸ್ವಲಾದೋಷಗಳು (ಮುಟ್ಟಿನ

ತೊಂದರೆ), ಕ್ಷಯ, ರಕ್ತಹೀನತೆ (ಅನಿಮಿಯಾ), ಮಲಬದ್ಧತೆ ಮತ್ತು ಅಜೀರ್ಣ ವ್ಯಾಧಿಗಳೂ ಸಹ ಕೂದಲುದುರುವಿಕೆಗೆ ತಮ್ಮ ಕಾಣಿಕೆ ಸಲ್ಲಿಸುತ್ತವೆ.

### ೨) ಮಾನಸಿಕ ವ್ಯಾಧಿಗಳು

ದೇಹ ಮತ್ತು ಮನಸ್ಸುಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಯಾವುದೊಂದು ಮುಖ ಸವಕಲಾದರೂ ನಾಣ್ಯವು ಹೇಗೆ ಚಲಾವಣೆಗೆ ಬರುವುದಿಲ್ಲವೋ ಅಂತೆಯೇ ಮೈಮನಸ್ಸುಗಳ ಆರೋಗ್ಯವೂ ಸಹ ಚಿಂತೆ, ಮನೋವ್ಯಾಕುಲತೆ, ಮಾನಸಿಕ ಆಘಾತ, ಭಯ—ಇವುಗಳಿಂದ ನರಗಳು ದುರ್ಬಲಗೊಂಡು ವಾತಪ್ರಕೋಪವುಂಟಾಗುತ್ತದೆ. ಇದರಿಂದ ಕೂದಲಿಗೆ ಪೋಷಣೆಯಿಲ್ಲದಂತಾಗಿ ಕೂದಲುದುರುವುದು, ಬಣ್ಣದಲ್ಲಿ ವ್ಯತ್ಯಾಸವಾಗುವುದು ಇತ್ಯಾದಿ ವೈಪರೀತ್ಯಗಳುಂಟಾಗುತ್ತದೆ. ತುಂಬಾ ಭಯ ಹಾಗೂ ಚಿಂತೆಗಳಿಂದ ತಲೆಗೂದಲು ಒಂದೇ ರಾತ್ರಿಯಲ್ಲಿ ಉದುರಿಹೋಗಿರುವ ನಿದರ್ಶನಗಳೂ ಉಂಟು.

### ೩) ಪೌಷ್ಟಿಕ ಆಹಾರದ ಕೊರತೆ

ಕೂದಲಿನ ಬೆಳವಣಿಗೆಗೆ ಕೆಲವು ಪೌಷ್ಟಿಕ ಆಹಾರಗಳು ಬೇಕು. ಅಂತಹ ಆಹಾರದ ಕೊರತೆಯಿಂದಲೂ ಸಹ ಕೇಶರೋಗಗಳು ತಲೆದೋರುತ್ತವೆ.

### ೪) ಅನೈತಿಕ ಜೀವನ ಕ್ರಮ

ಶಿಸ್ತು ಮತ್ತು ಸಂಯಮವಿಲ್ಲದ ಜೀವನ ಕ್ರಮ ಹಾಗೂ ದುಷ್ಟಚಟಗಳು ಕೂದಲಿನ ವ್ಯಾಧಿಗೆ ಕಾರಣವಾಗಬಲ್ಲದು.

### ೫) ಅನುವಂಶೀಯತೆ

ವಂಶಪಾರಂಪರ್ಯವಾಗಿ ಬಳುವಳಿಯಾಗಿ ಬರುವ ವ್ಯಾಧಿಗಳ ಗುಂಪಿಗೆ ಕೇಶರೋಗವೂ ಸಹ ಸೇರುತ್ತದೆ.

### ೬) ಶಿರಸ್ತ್ರಾಣದ ಬಳಕೆ

ದ್ವಿಚಕ್ರವಾಹನ ಚಾಲಕರು ಉಪಯೋಗಿಸುವ ಶಿರಸ್ತ್ರಾಣವು ಅಕಸ್ಮಿಕವಾದಾಗ ತಲೆಗೆ ಉಂಟಾಗುವ ಪ್ರಾಣಾಂತಿಕ ಪೆಟ್ಟಿನಿಂದ ರಕ್ಷಣೆ ನೀಡಿದರೂ ನಿಧಾನವಾಗಿ ಅದು ಕೇಶಪತನಕ್ಕೆ ಕಾರಣವಾಗುವುದು ಬೆಳಕಿಗೆ ಬಂದಿದೆ. ಇಂದು ಪುರುಷರಂತೆ ಸ್ತ್ರೀಯರೂ ಸಹ ದ್ವಿಚಕ್ರ ವಾಹನಗಳನ್ನು ಬಳಸುವುದು ಅನಿವಾರ್ಯವಾಗಿದೆ.

ಆದುದರಿಂದ ಅವರೂ ಸಹ ಇದರಿಂದ ಮುಕ್ತರಾಗಿಲ್ಲ.

ತಲೆಯ ಚರ್ಮದಲ್ಲಿರುವ ಒಂದೊಂದು ರೋಮಕೂಪಗಳಿಂದಲೂ ಒಂದೊಂದು ಕೂದಲು ಬೆಳೆಯುತ್ತದೆ. ಈ ಕೂಪದ ಎಡಬಲ ಭಾಗದಲ್ಲಿ ಅದರ ಬುಡದ ಸಮೀಪದಲ್ಲಿ ದಪ್ಪನಾಗಿರುವ ಚೀಲಗಳಿವೆ. ಈ ಚೀಲಗಳಲ್ಲಿ ಮೇದೋ ಗ್ರಂಥಿಗಳಿವೆ. ಇವು ತೈಲದಂತಿರುವ ದ್ರವವಸ್ತುವನ್ನು ಉತ್ಪತ್ತಿಮಾಡಿ ರೋಮಕೂಪಗಳಿಗೆ ಸರಬರಾಜು ಮಾಡುತ್ತವೆ.

ಶಿರಸ್ತ್ರಾಣದೊಳಗೆ ರೆಕ್ಸಿನ್ ಮುಂತಾದ ವಸ್ತುಗಳಿರುತ್ತವೆ. ಶಿರಸ್ತ್ರಾಣವನ್ನು ಧರಿಸಿಕೊಂಡಾಗ ತಲೆಯ ಬೆವರಿನಿಂದಾಗಿ ಈ ವಸ್ತುಗಳು ಕಲುಷಿತಗೊಂಡು ತೈಲಗ್ರಂಥಿಗಳನ್ನು ಮುಚ್ಚುತ್ತವೆ. ಇದರಿಂದ ಕೂದಲು ನೆರೆಯುವುದು, ತಲೆಯಲ್ಲಿ ಸಣ್ಣ ಸಣ್ಣ ಗುಳ್ಳೆಗಳೆದ್ದು ಕೆರೆತ ಮುಂತಾದುವು ತಲೆದೋರುತ್ತವೆ.

೭) ಕೇಶ ಶೃಂಗಾರ ಸಾಧನಗಳು

ಹಿಂದೆ ಹೇಳಿದಷ್ಟೇ ಕಾರಣಗಳಲ್ಲದೆ ಸ್ವಯಂಕೃತಾಪರಾಧವೂ ಸಹ ಕೇಶರೋಗಗಳಿಗೆ ಕಾರಣವಾಗಿದೆ. ಕೇಶಸಂಪತ್ತನ್ನು ವರ್ಧಿಸಬೇಕೆಂಬ ಮಹದಾಸೆಯಿಂದ ಉಪಯೋಗಿಸುವ ಕೇಶವರ್ಧಕ ತೈಲಗಳು, ಪರಿಮಳ ಭರಿತ ದ್ರವ್ಯಗಳು, ಕೂದಲನ್ನು ಕಪ್ಪಾಗಿಸಬೇಕೆಂದು ಉಪಯೋಗಿಸುವ ಹೇರ್ ಡ್ರೈಯಿಂಗ್‌ಗಳು, ಶಾಂಪುಗಳು, ವಿವಿಧ ಸಾಬೂನುಗಳು – ಕೇಶವರ್ಧನೆಗೆ ಪೂರಕವಾಗುವ ಬದಲು ಮಾರಕವಾಗುವ ಸಂಭವವೇ ಹೆಚ್ಚು. ಇಷ್ಟೇ ಅಲ್ಲದೆ ಸೌಂದರ್ಯವತಿಯರಾಗಬೇಕೆಂಬ ಮಹದಾಸೆಯಿಂದ ಬ್ಯೂಟಿಪಾರ್ಲರ್‌ಗಳಿಗೆ ಹೋಗಿ ಬರುವ ಪದ್ಧತಿ ಇತ್ತೀಚೆಗೆ ಆರಂಭವಾಗಿದೆ. ಕೆಲವು ಸೋದರಿಯರು ತಮ್ಮ ತಲೆಗೂದಲಿನ ತುದಿಯನ್ನು ಕತ್ತರಿಸುವ ಅಭ್ಯಾಸವನ್ನು ಒಂದು ಹವ್ಯಾಸವನ್ನಾಗಿಸಿಕೊಂಡಿದ್ದಾರೆ. ಇದರಿಂದ ಕೂದಲು ಬೆಳೆಯುತ್ತದೆಂಬ ಭ್ರಮೆ ಅವರಿಗೆ, ಕೂದಲು ಬೆಳೆಯುವುದರ ಬದಲು ಇರುವುದರಲ್ಲೇ ಸ್ವಲ್ಪ ತುಂಡಾಗುತ್ತದೆಂಬುದು ಅವರ ಗಮನಕ್ಕೆ ಬಂದಂತೆ ಕಾಣುವುದಿಲ್ಲ.

## ಕೇಶಸ್ವಾಸ್ಥ್ಯದ ಉಪಾಯಗಳು

೧) ದೇಹವು ಸ್ಥೂಲವಾದರೆ ಅನೇಕ ರೋಗಗಳಿಗೆ ಈಡಾಗುವುದಲ್ಲದೆ ಕೂದಲು ಉದುರಲೂ ಆರಂಭವಾಗುತ್ತದೆ. ಇಲ್ಲಿ ವಿಪರೀತ ಕೊಬ್ಬಿನ ಅಂಶವೇ ಕೂದಲಿಗೆ ಮಾರಕವಾಗುತ್ತದೆ. ಆದುದರಿಂದ ಪ್ರತಿನಿತ್ಯ ಕನಿಷ್ಠಪಕ್ಷ ಒಂದು ಗಂಟೆಯಾದರೂ ವ್ಯಾಯಾಮ ಮಾಡಿ. ಯೋಗಾಸನ ಪ್ರಾಣಾಯಾಮಗಳು ಶರೀರದ ಕೊಬ್ಬನ್ನು ನಿಯಂತ್ರಿಸುತ್ತವೆ. ಶೀರ್ಷಾಸನವು ಕೂದಲಿನ ಬೆಳವಣಿಗೆಗೆ ತುಂಬಾ ಸಹಕಾರಿ. ಇದು 'ರಾಜಾಸನ'ವೆಂಬ ಕೀರ್ತಿಗೆ ಭಾಜನವಾಗಿದೆ. ಶೀರ್ಷಾಸನದಿಂದ ತಲೆಯಲ್ಲಿ ರಕ್ತಪರಿಚಲನೆಯು ಚೆನ್ನಾಗಿ ನಡೆದು ಕೂದಲಿನ ಎಲ್ಲಾ ವ್ಯಾಧಿಗಳೂ ನಿವಾರಣೆಯಾಗುತ್ತವೆ. ಆದರೆ ಇವುಗಳನ್ನು ಯೋಗತಜ್ಞರ ನೆರವಿನಿಂದಲೇ ಮಾಡಬೇಕು.

ಯಾವುದೋ ರೋಗಗಳಿಗೆ ಗುರಿಯಾಗದಂತೆ ದೇಹದಲ್ಲಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು. ಇದು ಯೋಗಾಭ್ಯಾಸದಿಂದ ಸಾಧ್ಯ. ಸಾಮಾನ್ಯ ರೋಗ ನಿರೋಧಕ ಸೂತ್ರಗಳನ್ನು ಸರಿಯಾಗಿ ಪಾಲಿಸಿ. ಆಧುನಿಕ ವಿಷೌಷಧಿಗಳನ್ನೂ, ವೇದನಾಶಾಮಕಗಳನ್ನೂ, ಚುಚ್ಚುಮದ್ದುಗಳನ್ನು ದೂರವಿಡಬೇಕು. ಅವು ಕೂದಲು ಸೊಬಗಿನ ಆಜನ್ಮ ಶತ್ರುಗಳು.

೨) ಯಾವಾಗಲೂ ಮಾನಸಿಕವಾಗಿ ಸಂತೋಷ ಹೊಂದಿರಬೇಕು. ಸಂತೋಷವೇ ಯೌವನ, ಚಿಂತೆಯೇ ಮುಪ್ಪು. ಸಂತೋಷವೆಂಬುದು ಒಂದು ಮಾನಸಿಕ ಸ್ಥಿತಿ. ತೃಪ್ತಿಯೇ ಸಂತೋಷಕ್ಕೆ ಮೂಲ. ದ್ವೇಷಾಸೂಯೆಗಳನ್ನು ದೂರ ಸರಿಸಿ. ಸದಾಕಾಲ ಚಿಂತೆ, ನಿರಾಸೆ, ಶೋಕ, ಭಯ ಹಾಗೂ ವಿಪರೀತದ ಉತ್ಸಾಹಗಳಿಂದ ದೂರ ಇರುವುದು ಕ್ಷೇಮ. ಮನಸ್ಸನ್ನು ಶಾಂತ ಹಾಗೂ ಹರ್ಷಸ್ಥಿತಿಯಲ್ಲಿಡುವ ಸಾಹಿತ್ಯವನ್ನು ಓದಬೇಕು.

೩) ಕೇಶವರ್ಧನೆಗೂ ಆಹಾರಕ್ಕೂ ಪರಸ್ಪರ ಸಂಬಂಧವಿದೆ. ಕೇಶವರ್ಧನೆಗೆ ಅನುವು ಮಾಡಿಕೊಡುವಂತಹ ಆಹಾರವನ್ನು ಸೇವಿಸಿ. ತೌಡು ತೆಗೆಯದ ಗೋಧಿ, ಜೋಳ, ರಾಗಿ ಪಾಲಿಷ್ ಕಡಿಮೆಯುಳ್ಳ ಅಕ್ಕಿ ತಿನಿಸು, ಸಮೃದ್ಧ ತರಕಾರಿ, ಹಣ್ಣುಹಂಪಲುಗಳು, ಹಾಲು, ತುಪ್ಪ. ಮಜ್ಜಿಗೆ, ಬಟಾಣಿ, ನುಗ್ಗೆ ಸೊಪ್ಪು, ಚಕ್ಕೋತ ಸೊಪ್ಪು–ಇವುಗಳ ಉಪಯೋಗ ಅಪೇಕ್ಷಣೀಯ.

ಕಾಫಿ, ಚಹಾ, ಹುಳಿಯಾದ ಹಣ್ಣುಗಳು, ಅತಿ ಉಪ್ಪು, ಖಾರ, ಮಸಾಲೆಗಳುಳ್ಳ ಆಹಾರ, ಕರಿದ ತಿಂಡಿಗಳು, ಸಕ್ಕರೆ ಇವು ರಕ್ತದ ಆಮ್ಲತೆಯನ್ನು ಹೆಚ್ಚಿಸುವುದರಿಂದ ಇವು ವರ್ಜ್ಯ.

೪) ಜೀವನದಲ್ಲಿ ಶಿಸ್ತು, ಸಂಯಮ ಇರಬೇಕು, ಅತಿ ಸಂಭೋಗ, ಹಗಲು ನಿದ್ರೆ, ಅತಿಶ್ರಮದಾದ ಕೆಲಸಕಾರ್ಯಗಳು, ನಿದ್ದೆಗೆಡುವುದು ಹಾಗೂ ಮಾದಕ ದ್ರವ್ಯಗಳ ಸೇವನೆಯನ್ನು ತ್ಯಾಜ್ಯ ಮಾಡಬೇಕು.

ಕೂದಲುದುರುವುದು ಅನುವಂಶೀಯವಾದರೂ ಮೇಲ್ಕಂಡ ಆರೋಗ್ಯವಿಧಾನಗಳನ್ನು ಶ್ರದ್ಧೆಯಿಂದ ಪಾಲಿಸಿದಲ್ಲಿ ವಂಶಪಾರಂಪರ್ಯತೆಯಿಂದ ಉಂಟಾಗುವ ಹಾನಿಯನ್ನು ತಪ್ಪಿಸಬಹುದು.

೫) ದ್ವಿಚಕ್ರವಾಹಕರು ಶಿರಸ್ತ್ರಾಣವನ್ನು ಧರಿಸುವುದು ಅನಿವಾರ್ಯವಾದಾಗ ಅಂತಹವರು ತಮ್ಮ ಕೂದಲಿನ ಆರೋಗ್ಯವನ್ನು ಕಾಪಾಡಿಕೊಳ್ಳಲು ಹರಳೆಣ್ಣೆಯ ಬದಲು ಎಳ್ಳೆಣ್ಣೆಯನ್ನು ಉಪಯೋಗಿಸಬೇಕು. ವಾರಕ್ಕೊಮ್ಮೆ ಅಥವಾ ಪಕ್ಷಕ್ಕೊಮ್ಮೆ ಎಣ್ಣೆ ಸ್ನಾನ ಮಾಡಬೇಕು. ಶಿರಸ್ತ್ರಾಣದ ಒಳಗೆ ಬಿಳಿಯ ಅಥವಾ ಕೇಸರಿ ಬಣ್ಣದ ಟೋಪಿಯೊಂದನ್ನು ಧರಿಸಿ, ಆ ಟೋಪಿಯನ್ನು ಪ್ರತಿನಿತ್ಯ ಸ್ವಚ್ಛಮಾಡುವುದು ಕ್ಷೇಮ.

೬) ಕೇಶಶೃಂಗಾರ ಸಾಧನಗಳನ್ನು ಖಂಡಿತ ವರ್ಜಿಸಬೇಕು. ಅವುಗಳನ್ನು ಬಳಸುವುದರಿಂದ ಕೇಶಸ್ವಾಸ್ಥ್ಯಕ್ಕೆ ಶಾಶ್ವತ ಹಾನಿಯಾಗುತ್ತದೆ. ಅಲ್ಲದೆ ತಲೆಯ ಚರ್ಮ ಮತ್ತು ಕಣ್ಣಿನ ಆರೋಗ್ಯಕ್ಕೂ ಧಕ್ಕೆಯಾಗುತ್ತದೆ. ತಲೆಗೆ ಶಾಂಪು ಮತ್ತು ಸಾಬೂನುಗಳ ಬದಲು ಸೀಗೆಕಾಯಿ, ಕಡಲೆ ಹಿಟ್ಟು, ಅಂಟವಾಳದಕಾಯಿ, ಸುಗಂಧ ಸ್ನಾನಚೂರ್ಣಗಳನ್ನು ಉಪಯೋಗಿಸುವುದು ಉತ್ತಮ. ಸುಗಂಧಸ್ನಾನಚೂರ್ಣ ಅಂಗಡಿಯಲ್ಲಿ ಸಿಗುವುದಲ್ಲ. ಸ್ವಂತ ತಯಾರಿಸಿಕೊಳ್ಳಬೇಕು. ಅತಿಬಿಸಿನೀರಿನಲ್ಲಿ ಸ್ನಾನ ಮಾಡಕೂಡದು. ಉಗುರುಬೆಚ್ಚಗಿರುವ ನೀರು ಸ್ನಾನಕ್ಕೆ ಉತ್ತಮ. ಎಣ್ಣೆನೀರಿನ ದಿವಸ ನೀರು ಸ್ವಲ್ಪ ಬಿಸಿಯಾಗಿರಲಿ. ಒಗ್ಗಿದರೆ ತಣ್ಣೀರಿನ ಸ್ನಾನ ಸರ್ವಶ್ರೇಷ್ಠ.

## ಕೇಶರೋಗ ಚಿಕಿತ್ಸೆ

### ೧) ಕೇಶಪತನ

ಒಂದು ಕೂದಲಿನ ಸರಾಸರಿ ಆಯುಷ್ಯ ಎರಡು ವರ್ಷ. ಆಯುಷ್ಯ ಮುಗಿದ ಕೂದಲುಗಳು ಉದುರಿ ಆ ಜಾಗದಲ್ಲಿ ಹೊಸ ಕೂದಲುಗಳು ಬೆಳೆಯುತ್ತವೆ. ಆದುದರಿಂದ ಕೂದಲು ಉದುರುವುದೇ ವ್ಯಾಧಿ ಎಂದು ಭಾವಿಸಬಾರದು. ಉದುರಿದ ಜಾಗದಲ್ಲಿ ಹೊಸ ಕೂದಲು ಬೆಳೆಯದೇ ಇದ್ದರೆ ಅದು ವ್ಯಾಧಿಯ ಲಕ್ಷಣ. ಆಗ ಈ ಕೆಳಕಂಡ ಚಿಕಿತ್ಸೆಗಳಲ್ಲಿ ಸೂಕ್ತವೆಂದು ಕಂಡುಬಂದದ್ದನ್ನು ಅಳವಡಿಸಿಕೊಳ್ಳಬಹುದು.

ಅ) ಚಹಾ ಚರಟವನ್ನು ಕಸದ ತೊಟ್ಟಿಗೆ ಚೆಲ್ಲುವ ಬದಲು ಅದರಲ್ಲಿ ನಿತ್ಯ ತಲೆಗೂದಲನ್ನು ಬುಡಸಮೇತ ತೊಳೆಯಬಹುದು. ಇದರಿಂದ ಕೂದಲು ಕಪ್ಪು ಬಣ್ಣಕ್ಕೂ ತಿರುಗುತ್ತದೆ.

ಆ) ಒಂದು ಚಮಚ ಎಳ್ಳೆಣ್ಣೆಯ ಜತೆಗೆ ಒಂದು ಚಮಚ ಜೇನು ಸೇರಿಸಿ ಪ್ರತಿನಿತ್ಯ ಬೆಳಗ್ಗೆ ಬರಿಯ ಹೊಟ್ಟೆಗೆ ಸಾಯಂಕಾಲ ಸೇವಿಸುವುದು.

ಇ) ಮೂರು ಗ್ರಾಂ ಮೆಣಸನ್ನು ಹಾಲಿನಲ್ಲಿ ಅರೆದು ಚೆನ್ನಾಗಿ ತಿಕ್ಕಿ ಒಂದು ಗಂಟೆ ಬಿಟ್ಟು ಸ್ನಾನಮಾಡುವುದು.

ಈ) ಕೊತ್ತುಂಬರಿ ಸೊಪ್ಪನ್ನು ಅರೆದು ನಿತ್ಯ ಲೇಪಿಸುವುದು.

## ೨) ಬಾಲನೆರೆಗೆ ಮತ್ತು ಕೂದಲು ಕಪ್ಪಾಗಲು

ಅ) ಬಿಲ್ವಪತ್ರೆಯ ರಸವನ್ನು ನಿತ್ಯ ತಲೆಗೆ ತಿಕ್ಕಿ ೨-೩ ಗಂಟೆ ಬಿಟ್ಟು ಸ್ನಾನ ಮಾಡುವುದು.

ಆ) ೨೫ ಗ್ರಾಂ ನೆಲ್ಲಿಚೆಟ್ಟನ್ನು (ಒಣಗಿದ ನೆಲ್ಲಿಕಾಯಿ) ೨೫ ಔನ್ಸ್ ನೀರಿಗೆ ಹಾಕಿ ಕುದಿಸಿ ಅದನ್ನು ೧೮ ಔನ್ಸಿಗೆ ಇಳಿಸಿ. ಇದರಿಂದ ನಿತ್ಯ ತಲೆ ತೊಳೆಯುತ್ತಿದ್ದರೆ ಬಾಲನೆರೆ ನಿವಾರಣೆಯಾಗುವುದರ ಜತೆಗೆ ಕೂದಲು ಉದುರುವುದೂ ನಿಂತು ಉದ್ದವಾಗಿ ಬೆಳೆಯುತ್ತದೆ.

## ೩) ತಲೆಯ ಹೊಟ್ಟಿಗೆ

ಅ) ಮೆಂತ್ಯ, ಕಚೋರ ಮತ್ತು ನೆಲ್ಲಿ ಚೆಟ್ಟನ್ನು ಸಮಪ್ರಮಾಣದಲ್ಲಿ ಬೆರಸಿ ನುಣ್ಣಗೆ ಪುಡಿಮಾಡಿ ಹಾಲಿನಲ್ಲಿ ಕಲಸಿ ಹಚ್ಚುತ್ತಿದ್ದರೆ ತಲೆಯ ಹೊಟ್ಟು ನಿವಾರಣೆಯಾಗುತ್ತದೆ.

ಆ) ಒಣಗಿದ ನಿಂಬೆಚೊಟ್ಟ (ಸಿಪ್ಪೆ)ನ್ನು ಚೂರ್ಣ ಮಾಡಿ ಅದನ್ನು ಹೊನಗೊನೆ ಸೊಪ್ಪಿನ ರಸದಲ್ಲಿ ಬೆರಸಿ ಒಂದು ದಿನ ಇಟ್ಟು ಮಾರನೆಯ ದಿನ ತಲೆಗೆ ಹಚ್ಚಿ ಸ್ನಾನ ಮಾಡುವುದು.

## ೪) ಕೂದಲು ಸೊಂಪಾಗಿ ಬೆಳೆಯಲು

ಅ) ಒಂದೆರಡು ಗೇರು ಬೀಜಗಳನ್ನು ಹೋಳು ಹೋಳಾಗಿ ಸೀಳಿ ೧ ಪಾವು ಎಳ್ಳೆಣ್ಣೆಯನ್ನು ಜತೆಯಲ್ಲಿ ಕಾಯಿಸಿ ಶೋಧಿಸಿ ಬೀಜವನ್ನು ತೆಗೆದುಹಾಕಿ ಆ ಎಣ್ಣೆಯನ್ನು ಲೇಪಿಸಿ.

ಆ) ನಿಂಬೆಹಣ್ಣಿನ ರಸವನ್ನು ತಲೆಗೂದಲಿನ ಬುಡಕ್ಕೆ ತಾಗುವಂತೆ ನಯವಾಗಿ ತಿಕ್ಕಿ ೨-೩ ಗಂಟೆ ಬಿಟ್ಟು ಸ್ನಾನಮಾಡಿ ಇದರಿಂದ ತಲೆಯ ಹೊಟ್ಟೂ ಸಹ ನಿವಾರಣೆಯಾಗುತ್ತದೆ.

ಚೌರಿಯನ್ನು ಖಂಡಿತ ಬಳಸಬೇಡಿ. ಇದರಿಂದ ಕೂದಲು ಜಗ್ಗಿದಂತಾಗಿ ಕೂದಲು ಹೆಚ್ಚಾಗಿ ಉದುರುತ್ತದೆ. ಒಂದು ವೇಳೆ ಚೌರಿಯನ್ನು ಬಳಸಲೇಬೇಕಾದಲ್ಲಿ ಉದುರಿದ ನಿಮ್ಮದೇ ತಲೆಗೂದಲುಗಳನ್ನು ಸಂಗ್ರಹಿಸಿ ಅದರಲ್ಲಿ ಮಾಡಿದ ಚೌರಿಯನ್ನು ಮಾತ್ರ ಬಳಸಿ.

ಮೇಲ್ಕಂಡ ಚಿಕಿತ್ಸೆ ಮಾಡಿದಲ್ಲಿ ನಿಮ್ಮ ಕೇಶರೋಗವು ಪರಿಹಾರವಾಗಿ ಅಪಾರ ಕೇಶ ಸಂಪತ್ತು ನಿಮ್ಮದಾಗುತ್ತದೆ.

# ಲೈಪೊಸ್ಕಲ್ಪ್ಚರ್ (ಮೇದೋಶಿಲ್ಪ)

**ಡಾ|| ಸ. ಜ. ನಾಗಲೋಟಿಮಠ**

*ತೋರ ಕಾಯ ಸಪುರ-ಒಡಲನಾಗಲು ದಿಢೀರ್ ವಿಧಾನ ಉಂಟೇ? ಯುಕ್ತಾಹಾರ ವಿಹಾರಗಳ ಸಹಜ ಮಾರ್ಗ ಬಿಟ್ಟ ವ್ಯಕ್ತಿಗೆ ನಿಸರ್ಗ ವಿಧಿಸುವ ಶಿಕ್ಷೆ "ತೋರ ಕಾಯ!"—ಅಸುಂದರ ದೃಶ್ಯ ನೋಡುವವರಿಗೆ, ಅನನುಕೂಲ ಅನುಭವ ಖುದ್ದು ವ್ಯಕ್ತಿಗೆ ಬೊಜ್ಜಿನ ನಿವಾರಣೆ ಹೇಗೆ? ವರ್ಗಾವಣೆ ತಂತ್ರ (ಟ್ರಾನ್ಸ್‌ಫರ್ ಟೆಕ್ನಿಕ್).*

ವೈದ್ಯಕೀಯ ವಿಜ್ಞಾನಕ್ಕೆ ಇದೊಂದು ಹೊಸ ಶಬ್ದ. ಹೊಸ ಕೊಡುಗೆ. ಈ ಶಬ್ದದಲ್ಲಿ ಎರಡು ಪದಗಳಿವೆ. ಒಂದು ಲೈಪೊ, ಎರಡನೆಯದು ಸ್ಕಲ್ಪ್ಚರ್. ಲೈಪೊ ಎಂದರೆ ನೆಣ, ಬೊಜ್ಜು, ಕೊಬ್ಬು ಎಂದು ಅರ್ಥ. ಇನ್ನು ಸ್ಕಲ್ಪ್ಚರ್ ಎಂದರೆ ಮೂರ್ತಿ ನಿರ್ಮಿಸುವ ಕಲೆ. ವಿಷಯಜ್ಞಾನವಿಲ್ಲದವರು ನೆಣದಿಂದ ಮೂರ್ತಿ ಮಾಡುವ ಕಲೆ ಎಂದು ತಪ್ಪಾಗಿ ಅರ್ಥವಿಸಬಹುದು. ಈ ಶಬ್ದದ ಸರಿಯಾದ ವಿವರಣೆ ಎಂದರೆ ದೇಹದಲ್ಲಿಯ ನೆಣವನ್ನು ಹೆಚ್ಚು ಕಡಿಮೆಗೊಳಿಸಿ ದೇಹಕ್ಕೆ ಒಂದು ಮಾಟ ತರುವುದು, ಒಂದು ಅಂದ ಕೊಡುವುದು—ಮೇದೊಶಿಲ್ಪ. ದೇಹದ ನಗ್ನ ಸೌಂದರ್ಯವನ್ನು ಬಹುವಾಗಿ ಮೆಚ್ಚುವ ಪಾಶ್ಚಾತ್ಯರಲ್ಲಿ ಇಂಥ ಒಂದು ಕಲೆ ಅವಶ್ಯವಾಗಿತ್ತು. ಅದಕ್ಕಾಗಿ ಹಲವಾರು ಪ್ರಯತ್ನಗಳು ಸತತವಾಗಿ ನಡೆದಿದ್ದುವು. ದೇಹದ ಅಂದವನ್ನು ಸರಿಪಡಿಸುವ ತಂತ್ರಗಳಲ್ಲಿ ಸುಶ್ರುತ (ಕ್ರಿ.ಶ. ಸುಮಾರು ೪ನೆಯ ಶತಮಾನ) ವರ್ಣಿಸಿರುವ ನಾಸಿಕ ರಚನೆ ಜಗತ್ತಿನಲ್ಲಿಯೇ ಮೊತ್ತಮೊದಲನೆಯದೆಂದು ಪ್ರಖ್ಯಾತಿ ಪಡೆದಿದೆ. ಆತನ ತರುವಾಯ ಭಾರತದಲ್ಲಿ ಅಂಥ ಪ್ರಯೋಗಗಳಾಗಲೀ ಸಾಹಸಗಳಾಗಲೀ ನಡೆಯಲಿಲ್ಲ. ಆದರೆ ಪಾಶ್ಚಾತ್ಯ ವೈದ್ಯವಿಜ್ಞಾನ ಮುಂದುವರಿಯಿತು. ಹೊಸಹೊಸ ಪ್ರಯತ್ನಗಳು ನಡೆದುವು. ಹೊಸ ಸಾಹಸಗಳು ತಲೆ ಎತ್ತಿದುವು. ಇವುಗಳ ಫಲವಾಗಿ "ಪ್ಲಾಸ್ಟಿಕ್ ಸರ್ಜರಿ" (ಸುರೂಪಿಕ ಶಸ್ತ್ರಚಿಕಿತ್ಸೆ) ಉದಯವಾಯಿತು. ಅದು ಅಷ್ಟಕ್ಕೆ ನಿಲ್ಲಲಿಲ್ಲ. ಅದರ ತಜ್ಞರು ಮುಂದುವರಿದರು. ಆವಿಷ್ಕಾರಗಳನ್ನು ಮಾಡಿದರು. ಮಾಡುತ್ತ ಹೋದರು. ಇವೆಲ್ಲ ಪ್ರಯತ್ನಗಳ ಫಲವಾಗಿ ಸುಮಾರು ಹತ್ತು ವರ್ಷಗಳ ಕೆಳಗೆ (೧೯೮೦ರ ದಶಕ) ಇನ್ನೊಂದು ಹೊಸ ವಿಧಾನ ಜನ್ಮ ತಾಳಿತು. ಅದೇ ಮೇದೋಶಿಲ್ಪ.

ಇಟಲಿ ದೇಶದಲ್ಲಿ ಎ. ಫಿಶರ್ ಮತ್ತು ಜಿ. ಫಿಶರ್ ಎಂಬ ಹೆಸರಿನ ತಂದೆ ಮಕ್ಕಳು ಸುರೂಪಿಕ ಶಸ್ತ್ರಕ್ರಿಯೆಯಲ್ಲಿ ಹೆಚ್ಚಿನ ಪರಿಣತಿ ಪಡೆದು ಸುಪ್ರಸಿದ್ಧರಾಗಿದ್ದರು. ಇದರ ಲಾಭ ಪಡೆಯಲು ಅನೇಕ ಸ್ತ್ರೀಯರು ಅವರ ಆಸ್ಪತ್ರೆಗೆ ಬಂದು ದಾಖಲಾಗುತ್ತಿದ್ದರು. ಇಲ್ಲಿ ಬರುವವರ ಒಂದು ಮುಖ್ಯ ತೊಂದರೆಯೆಂದರೆ ದೇಹದಲ್ಲಿ ಅಸಹ್ಯವಾಗಿ ಶೇಖರಗೊಂಡಿದ್ದ ನೆಣ. ಮಹಿಳೆ ತರುಣಿ ಆಗಿದ್ದಾಗ ಆಕೆಯ ಮೈಮಾಟ ಆಕರ್ಷಕವಾಗಿರುತ್ತದೆ. ಬರಬರುತ್ತ ತಾರುಣ್ಯ ದೂರ ಸರಿದಂತೆ ಬೇಡವಾದ ಸ್ಥಳಗಳಲ್ಲಿ ನೆಣ ವಿಪರೀತ ಪ್ರಮಾಣದಲ್ಲಿ ಶೇಖರಗೊಳ್ಳತೊಡಗುವುದು. ಹೊಟ್ಟೆಯು ನೆಣ ಹೆಚ್ಚಿ, ಪರಡೆಯಂತೆ ಜೋಲಾಡತೊಡಗುವದು. ಆಕೆಯ ಅಂಗ ಸೌಷ್ಠವವನ್ನು ಭಂಗ ಮಾಡುವುದು. ಕೈ ಹಾಗೂ ರಟ್ಟೆಗಳಲ್ಲಿ ನೆಣ ಶೇಖರಗೊಂಡು ಜೋಲಾಡತೊಡಗುವದು. ಗದ್ದದ ಕೆಳಗೆ ಶೇಖರಗೊಂಡು ಜೋಡು ಗದ್ದವನ್ನು ಸೃಷ್ಟಿಸುವುದು. ಹೀಗೆ ಹಲವಾರು ರೀತಿಯಲ್ಲಿ ಅವರ ಮೈಮಾಟವನ್ನು ಅಂದಗೆಡಿಸುತ್ತಿತ್ತು. ಇಂಥ ನೆಣ ಅಲ್ಲಿಂದ ಮಾಯವಾದರೆ ಅವರು ತಮ್ಮ ಆಕಾರವನ್ನು ಕಾಯ್ದುಕೊಳ್ಳಲು ಅನುಕೂಲವಾಗುತ್ತಿತ್ತು. ದೇಹದ ನೆಣವನ್ನು ಕರಗಿಸಲು ಉಪವಾಸ ಮಾಡಿದರೆ ಹೊಟ್ಟೆಯನ್ನು ಆವರಿಸಿದ್ದ ಅನಾವಶ್ಯಕ ನೆಣ ಅಲ್ಲಿಯೇ ಉಳಿದು ಮುಖದ ನೆಣ ಕರಗಿ ಅವರು ಇನ್ನೂ ಅಂದಗೇಡಿಗಳಾಗುತ್ತಿದ್ದರು. ಈ ಅನಾವಶ್ಯಕ ಹಾಗೂ ಅಂದಗೆಡಿಸುವ ನೆಣವನ್ನು ಶಸ್ತ್ರಕ್ರಿಯೆಯಿಂದ ಕೊಯ್ದು ತೆಗೆಯುತ್ತಿದ್ದರು. ಜೋಲು ಬಿದ್ದ ಚರ್ಮವನ್ನು ಕತ್ತರಿಸಿ ಸೂಕ್ಷ್ಮವಾಗಿ ಹೊಲಿದು ಅದು ಕಾಣದಂತೆ ಮಾಡುತ್ತಿದ್ದರು. ಇಂಥ ಸುರೂಪಿಕ ಶಸ್ತ್ರಕ್ರಿಯೆಗಳಿಗೆ ಫಿಶರ್ ತಂದೆ–ಮಗ ಎತ್ತಿದ ಕೈ ಆಗಿದ್ದರು. ಆದರೆ ಕೆಲವೊಂದು ಸಲ ದುರ್ದೈವದಿಂದ ಶಸ್ತ್ರ ಕ್ರಿಯೆಯಲ್ಲಿ ಹೆಚ್ಚು ಕಡಿಮೆ ಆಗಿ ಕುರೂಪಿ ಕಲೆಗಳು ಚರ್ಮದಲ್ಲಿ ತೋರುತ್ತಿದ್ದುವು. ಮೊದಲಿನ ರೂಪವನ್ನು ಇನ್ನೂ ವಿರೂಪಗೊಳಿಸಿದಂತಾಗುತ್ತಿತ್ತು.

ಇದರ ಬಗ್ಗೆ ಫಿಶರ್ ತಂದೆ–ಮಗ ಆಳವಾಗಿ ಆಲೋಚಿಸಿ ಚರ್ಮವನ್ನು ಸೀಳದೇ ಬೇಡವಾದ ನೆಣವನ್ನು ತೆಗೆಯುವ ವಿಧಾನ ಪ್ರಾರಂಭಿಸಿದರು. ಈ ವಿಧಾನಕ್ಕೆಂದು ಅವರು ಒಂದು ಹೊಸ ಸಲಕರಣೆಯನ್ನು ತಯಾರಿಸಿಕೊಂಡರು. ಈ ಸಲಕರಣೆ ತ್ರಿಶೂಲದಂತೆ ಕಾಣುತ್ತದೆ. ಶೂಲಗಳ ಬದಲಾಗಿ ಅತಿ ಮೊನಚಾದ ಕೊಳವೆಗಳನ್ನು ಈ ಅಸ್ತ್ರದಲ್ಲಿ ಜೋಡಿಸಿದ್ದರು. ಅಸ್ತ್ರವನ್ನು ದೇಹದಲ್ಲಿ ನೆಣ ಹೆಚ್ಚಾದ ಭಾಗಕ್ಕೆ ಸಾವಧಾನವಾಗಿ ಚುಚ್ಚಬೇಕು. ಅಸ್ತ್ರ ದೇಹ ಸೇರುವಾಗ ಅದರ ಮೊನಚಾದ ಕೊಳವೆಗಳು ನೆಣವನ್ನು ಕತ್ತರಿಸುತ್ತ ಹೋಗುವುವು. ಪೂರ್ಣವಾಗಿ ಕೊಳವೆಗಳು ದೇಹದಲ್ಲಿ ಸೇರಿ ಮರಳಿ ಹೊರ ತಗೆದಾಗ ಎಲ್ಲ ಕೊಳವೆಗಳಲ್ಲಿ ನೆಣವು ಹುರಿಯ ಆಕಾರದಲ್ಲಿ ಹೊರಬಂದಿರುತ್ತದೆ. ಒಂದು ಸಲ ಈ ಸಾಧನವನ್ನು ಚುಚ್ಚಿ ತೆಗೆದರೆ ನೂರಾರು ಗ್ರಾಮ್ ನೆಣವನ್ನು ತೆಗೆಯಬಹುದಿತ್ತು. ಪದೇಪದೇ ಈ ತಂತ್ರ ಪ್ರಯೋಗಿಸಿ ಚರ್ಮವನ್ನು ಕೊಯ್ಯದೇ ನೆಣವನ್ನು ತಗೆಯ ತೊಡಗಿದರು. ಬೇಡವಾದ ನೆಣ ಕಡಿಮೆಯಾಯಿತು. ಸುಂದರ

ಚರ್ಮದಲ್ಲಿ ಗಾಯಗಳೂ ಮೂಡಲಿಲ್ಲ. ಈ ನೂತನ ತಂತ್ರದ ಖ್ಯಾತಿ ಸುತ್ತಲಿನ ದೇಶಗಳಿಗೆ ಹಬ್ಬಿತು. ವಿವಿಧ ದೇಶಗಳ ಸುಂದರಿಯರು ಈ ವೈದ್ಯರ ಬಾಗಿಲಿಗೆ ಬಂದು ಸಾಲುಗಟ್ಟಿದರು. ತಂದೆ ಮಕ್ಕಳು ನಿಪುಣತೆಯಿಂದ ತಂತ್ರ ಬಳಸಿ ಬಲುದೊಡ್ಡ ಹೆಸರು ಮಾಡಿದರು. ಈ ಪ್ರಯತ್ನವನ್ನು ಅವರು ಪ್ರಪ್ರಥಮವಾಗಿ ೧೯೭೪ರಲ್ಲಿ ಓರ್ವ ಸ್ತ್ರೀಯ ಮೇಲೆ ಪ್ರಯೋಗಿಸಿದ್ದರು. ಒಂದು ವರ್ಷದಲ್ಲಿ ಅಂದರೆ ೧೯೭೫ರಲ್ಲಿ ಸುಂದರಿಯರಲ್ಲಿ ಈ ವಿಧಾನ ಪ್ರಚಾರಗೊಂಡಿತು. ತಾವು ಮಾಡುತ್ತಿರುವ ವಿಧಾನ ಹೊಸದು. ಇದರಿಂದ ಉಳಿದವರಿಗೂ ಲಾಭ ಸಿಗಲಿ, ಶಸ್ತ್ರಕ್ರಿಯೆಗಳಲ್ಲಿ ಇದು ಬಳಕೆಯಾಗಲಿ ಎಂದು ಫಿಶರ್ ತಂದೆ ಮಕ್ಕಳು ತಮ್ಮ ತಂತ್ರವನ್ನು ಶಸ್ತ್ರಕ್ರಿಯೆಗಳ ಜಾಗತಿಕ ಸಮ್ಮೇಳನದಲ್ಲಿ ನಿವೇದಿಸಿದರು. ಹೊಸ ತಂತ್ರವನ್ನು ಉಳಿದ ತಜ್ಞರು ಹಳಿದರು. ತಂದೆ ಮಕ್ಕಳನ್ನು ಹೀಯಾಳಿಸಿದರು. ಯಾರೊಬ್ಬರೂ ಈ ತಂತ್ರ, ಈ ಪ್ರಯತ್ನವನ್ನು ಬೆಂಬಲಿಸಲಿಲ್ಲ. ಖಿನ್ನರಾಗಿ ಇಟಲಿಗೆ ಮರಳಿದರು. ಆಸ್ಪತ್ರೆಗೆ ಬರುವುದೇ ತಡ ಸ್ತ್ರೀಯರು ಸಾಲಾಗಿ ನಿಂತು ತಮ್ಮ ಮೇಲೆ ಆ ಚಿಕಿತ್ಸೆ ಜರುಗಲೆಂದು ಪ್ರಾರ್ಥಿಸಿದರು. ತಂದೆ ಮಕ್ಕಳು ತಮ್ಮ ಕಲೆಯನ್ನು ಸುಧಾರಿಸುತ್ತ ಹೋದರು. ಕ್ರಮೇಣ ಕೆಲವು ಶಸ್ತ್ರಕ್ರಿಯಾ ತಜ್ಞರು ಇವರನ್ನು ಆಮಂತ್ರಿಸಿ ತಮ್ಮ ಆಸ್ಪತ್ರೆಗಳಲ್ಲಿ ಈ ತಂತ್ರವನ್ನು ನಿದರ್ಶಿಸಲು ಪ್ರಾರ್ಥಿಸತೊಡಗಿದರು. ಒಂದು ಸಲ ತಂದೆ ಮಕ್ಕಳು ಈ ವಿಧಾನವನ್ನು ಪ್ಯಾರಿಸ್ ನಗರದ ಆಸ್ಪತ್ರೆಯಲ್ಲಿ ನಿದರ್ಶಿಸುತ್ತಿದ್ದಾಗ ಓಯರೆ ಎಂಬ ಇನ್ನೊಬ್ಬ ಪ್ಲಾಸ್ಟಿಕ್ ಸರ್ಜನ್ ಆಸಕ್ತಿ ವಹಿಸಿ ಈ ತಂತ್ರವನ್ನು ಕಲಿತುಕೊಂಡರು. ಫಿಶರ್ ತಂದೆ ಮಕ್ಕಳಂತೆ ಓಯರೆ ಅವರೂ ಈ ಶಸ್ತ್ರಕ್ರಿಯೆ ಪ್ರಾರಂಭಿಸಿ ಬಲುಬೇಗ ಹೆಸರು ಮಾಡಿದರು. ಈ ತಂತ್ರವನ್ನು ಸುಮಾರು ಎರಡು–ಮೂರು ವರ್ಷ ಬಳಸಿದರು. ಆಗ ತಂತ್ರದಲ್ಲಿಯ ಹಲವು ಕುಂದು ಕೊರತೆಗಳು ಕಂಡು ಬಂದುವು. ಇವನ್ನು ನಿವಾರಿಸಲು ಯೋಚಿಸಿದರು, ಪ್ರಯತ್ನಿಸಿದರು. ಈ ತಂತ್ರದ ಜನಕರಾದ ಫಿಶರ್ ಹಾಗೂ ಅವರ ಶಿಷ್ಯ ಓಯರೆ ಹೊಳವು ಹಾಕಿ ಒಂದು ಹೊಸ ತಂತ್ರವನ್ನು ಬಳಸಲು ಯೋಜಿಸಿದರು. ಇದರಲ್ಲಿ ಓಯರೆ ಅವರು ಒಂದು ಉದ್ದನೆಯ ಸೂಜಿಯನ್ನು ಬಳಸತೊಡಗಿದರು ನೆಣ ಅತಿಯಾದ ಭಾಗದಲ್ಲಿ ಸೂಜಿಯನ್ನು ಸೇರಿಸಿ ಸಿರಿಂಜದ ಸಹಾಯದಿಂದ ನೆಣವನ್ನು ಹೀರಲು ಪ್ರಾರಂಭಿಸಿದರು. ದೇಹದ ನೈಜ ಉಷ್ಣತೆಯಲ್ಲಿ ಒಳಗಿನ ನೆಣ ದ್ರವವಾಗಿರುತ್ತದೆ. ಈ ಜ್ಞಾನವನ್ನು ಬಳಸಿ ನೆಣವನ್ನು ಹೀರಿ ತೆಗೆಯುವ ವಿಧಾನ ಬಳಕೆಗೆ ತಂದರು. ಈ ತಂತ್ರದ ಸಹಾಯದಿಂದ ಕೆಲವೇ ಮಿಲಿಲೀಟರ್ ನೆಣದಿಂದ ಹಿಡಿದು ನಾಲ್ಕು ಲೀಟರ್ ನೆಣದಷ್ಟು ಹೊರ ತೆಗೆಯತೊಡಗಿದರು. ಇದು ಮೊದಲಿನ ತಂತ್ರಕ್ಕಿಂತಲೂ ಸುರಕ್ಷಿತ ಹಾಗೂ ಸುಲಭವಾಯಿತು. ಈ ತಂತ್ರವನ್ನು ಮೂವರೂ ಕೂಡಿ ಜಾಗತಿಕ ಸಮ್ಮೇಳನಗಳಲ್ಲಿ ನಿದರ್ಶಿಸಿದರು. ಜಾಗತಿಕ ಪತ್ರಿಕೆಗಳಲ್ಲಿ ಪ್ರಕಟಿಸಿದರು. ಇವರ ಫಲಿತಾಂಶಗಳನ್ನು ನೋಡಿ ಜಗತ್ತಿನ ಎಲ್ಲ ಶಸ್ತ್ರಕ್ರಿಯಾತಜ್ಞರು ಒಪ್ಪಿದರು ಹಾಗೂ ಪ್ರಶಂಸಿಸಿದರು. ಪ್ರಾರಂಭದಲ್ಲಿ ಕಂಡ ವಿರೋಧ ವಿರೋಧಿಗಳು ಕರಗಿದ್ದಾರೆ.

ನೆಣದಂತೆ! ತಂತ್ರವು ಬಹಳ ಉಪಯುಕ್ತವಾಗಿದೆ. ಜನಪ್ರಿಯವಾಗಿದೆ. ಈ ತಂತ್ರವನ್ನು ಬಳಸುತ್ತ ಬಳಸುತ್ತ ಹಲವಾರು ಬದಲಾವಣೆಗಳನ್ನು ತಂದಿರುವರು. ಹೊಸ ಹೊಸ ಉಪಚಾರ ಬಳಸುತ್ತಿರುವರು.

ಲೈಪೊಸ್ಕಲ್ಪ್ಚರ್ ಅಥವಾ ಮೇದೋಶಿಲ್ಪ ವಿಧಾನದಲ್ಲಿ ಮುಖ್ಯವಾಗಿ ಎರಡು ವಿಧಗಳಿವೆ. ಒಂದನೆಯ ವಿಧಾನದಲ್ಲಿ ಬೇಡವಾದ ನೆಣವನ್ನು ಹೀರಿ ತೆಗೆದು ದೇಹದ ಮಾಟವನ್ನು ಹೆಚ್ಚಿಸುವುದು ಹಾಗೂ ಅದಕ್ಕೊಂದು ಸುಂದರ ರೂಪವನ್ನು ಕೊಡುವುದು. ಉದಾಹರಣೆಗೆ ಒಬ್ಬ ಸ್ತ್ರೀಯ ಮುಖ ಸುಂದರವಾಗಿದೆ. ಆಕೆಯ ಅಂಗಾಂಗಗಳೂ ಆಕರ್ಷಕವಾಗಿವೆ. ಆದರೆ ಅವಳ ಹೊಟ್ಟೆಯ ಮುಂದೆ ಶೇಖರಗೊಂಡ ನೆಣ ಅವಳ ಆಕಾರವನ್ನೇ ಅಂದಗೆಡಿಸುತ್ತಿದೆ. ಏನು ಮಾಡಿದರೂ ಅದು ಕರಗುತ್ತಿಲ್ಲ. ಇಂಥ ವ್ಯಕ್ತಿಗಳಲ್ಲಿ ಸೂಜಿಗಳನ್ನು ಚುಚ್ಚಿ ನೆಣವನ್ನು ಹೀರು ಕೊಳವೆಗಳ ಮೂಲಕ ಹೀರಿ ತೆಗೆಯುತ್ತಾರೆ. ಹಲವಾರು ಲೀಟರಿನಷ್ಟು ನೆಣವು ಮಾಯವಾದರೆ ಆ ಮಹಿಳೆ ತನ್ನ ಮಾಟವನ್ನು ಉಳಿಸಿಕೊಳ್ಳುತ್ತಾಳೆ. ಸುಂದರವಾಗಿ ಕಾಣುತ್ತಾಳೆ. ಮಕ್ಕಳನ್ನು ಹಡೆದ ಸ್ತ್ರೀಯರಿಗೆ ಇವರ ಕಾಟ ಅತಿಯಾಗಿರುತ್ತದೆ. ಅವರೆಲ್ಲರಿಗೆ ಇದೊಂದು ಮಹಾ ಕೊಡುಗೆ. ಇದೇ ಪ್ರಕಾರ, ಕೆಲವು ಸಲ ನೆಣ ತೊಡೆಗಳಲ್ಲಿ, ನಿತಂಬಗಳಲ್ಲಿ, ರಟ್ಟೆಯಲ್ಲಿ ಮಲೆತು ನಿಂತು ಸುಂದರಿಯರನ್ನು ಅಂದಗೆಡಿಸುತ್ತಿರುತ್ತದೆ. ಇಂಥವರಿಗೆ ಈ ಶಸ್ತ್ರಕ್ರಿಯೆಯೊಂದು ವರದಾನವಾಗಿದೆ. ಪ್ರಾರಂಭದಲ್ಲಿ ಕೇವಲ ಸ್ತ್ರೀಯರ ಸೌಂದರ್ಯಕ್ಕೆಂದೇ ಜನ್ಮ ತಾಳಿದ ಈ ಕಲೆ ಇಂದು ಹಲವಾರು ಪುರುಷರನ್ನೂ ಆಕರ್ಷಿಸಿದೆ. ಕೆಲವು ಪುರುಷರು ಮುಖ ಅಂಗಾಂಗಗಳಿಂದ ಸರಿಯಾಗಿರುತ್ತಾರೆ. ಆದರೆ ಮದುವೆಯಾದ ಹೊಸತರಲ್ಲಿ ಹೆಚ್ಚು ಹೆಚ್ಚು ತಿಂದುಂಡು ಹೊಟ್ಟೆಯ ಬೊಜ್ಜು ಬೆಳೆಸಿಕೊಳ್ಳುತ್ತಾರೆ. ಇದರಿಂದ ಇವರು ಗರ್ಭಿಣಿ ಸ್ತ್ರೀಯರಂತೆ ಚಲಿಸಬೇಕಾಗುವುದು! ಇಂಥವರೂ ಈ ಚಿಕಿತ್ಸೆಗೆ ಒಳಗಾಗಿ ತಮ್ಮ ಪೂರ್ವ ಪುರುಷಾಕೃತಿ ಮರಳಿ ಪಡೆಯಲು ಪ್ರಯತ್ನಿಸುವರು.

ಎರಡನೆಯ ಪ್ರಕಾರದ ಮೇದೋಶಿಲ್ಪದಲ್ಲಿ ಒಂದು ಭಾಗದ ನೆಣವನ್ನು ಹೀರಿ ಬೇರೊಂದು ಭಾಗದಲ್ಲಿ ಪೂರಣಗೊಳಿಸುತ್ತಾರೆ. ಉದಾಹರಣೆಗೆ ಕೆಲವು ಸ್ತ್ರೀಯರ ನಿತಂಬದಲ್ಲಿ ವಿಚಿತ್ರ ಎನಿಸುವಷ್ಟು ನೆಣ ಶೇಖರಗೊಳ್ಳುತ್ತದೆ. ಆದರೆ ಅವರ ಕೈಗಳು, ಮುಖ ನೆಣದಿಂದ ಮುಕ್ತವಾಗಿದ್ದು ಎಲುವುಗಳು ಎದ್ದು ಕಾಣುತ್ತವೆ. ಅವರ ಕಪೋಲಗಳು ದುಂಡಾಗಿರದೇ ಒಳ ಸೇರಿಕೊಂಡಿರುತ್ತವೆ. ಇಂಥ ಪ್ರಸಂಗದಲ್ಲಿ ನೆಣ ಹೆಚ್ಚಾಗಿದ್ದ ಭಾಗದಲ್ಲಿ ಸೂಜಿ ಹಾಕಿ ನೆಣವನ್ನು ಹೀರಿ ತೆಗೆಯುತ್ತಾರೆ. ಅನಂತರ ಅದನ್ನು ಗಲ್ಲ ಕೈಗಳಿಗೆ ಪೂರಣಗೊಳಿಸಿ ಅವು ತುಂಬಿಕೊಳ್ಳುವಂತೆ ಮಾಡುವರು. ಇದರಿಂದ ಸ್ತ್ರೀಯರು ಚಂದ್ರಮುಖಿಗಳಾಗಿ ಸುಂದರವಾಗಿ ಕಾಣುವರು. ಈ ಚಿಕಿತ್ಸೆ ಈಗ ಹೆಚ್ಚಾಗಿ ಮುದುಕರಲ್ಲಿ ಪ್ರಚಲಿತವಾಗತೊಡಗಿದೆ.

ಶಸ್ತ್ರಕ್ರಿಯೆಯಲ್ಲಿ ಮೇದೋಶಿಲ್ಪ ತಂತ್ರ ಒಂದು ಹೊಸ ಮೈಲುಗಲ್ಲು. ಹೊಸ ವಿಧಾನ. ಮಹಾ ಸಾಧನೆ. ಕೆಲವು ವರ್ಷಗಳಲ್ಲಿ ಈ ಕ್ರಿಯೆಯ ತಜ್ಞರು ಹಲವಾರು ಶಹರಗಳಲ್ಲಿ ತಲೆಯೆತ್ತಿ ಜನಸೇವೆ ಮಾಡಲು ಬರುವುದರಲ್ಲಿದ್ದಾರೆ. ಜಾಗ್ರತೆ—ಬೊಜ್ಜು ಬೆಳೆಯಲು ಬಿಡಬೇಡಿ!

# ಎರೆಹುಳು ಏಕೆ? ಹೇಗೆ?

ಎ. ಪಿ. ಚಂದ್ರಶೇಖರ

ನಿಸರ್ಗವೊಂದು ಅಲಿಬಾಬನ ಮುಚ್ಚಿರುವ ಗವಿ. "ಸಿಸೇಮೆ ತೆರೆ" ಎಂಬ ಮಂತ್ರ ಉಸುರಿದ ಹೊರತು ಇದು ಕದ ತೆರೆಯುವುದಿಲ್ಲ. ನಮ್ಮ ಪ್ರಾಚೀನರಿಗೆ ಈ ಮಂತ್ರ, ಬಳಿಕ ದೊರೆತ ಸಂಪತ್ತನ್ನು ಬಳಸುವ ತಂತ್ರ ಹಾಗೂ ಬದುಕನ್ನು ಹದವಾಗಿ ಬಾಳಲು ಬೇಕಾದ ಸಂಯಂತ್ರ ತಿಳಿದಿದ್ದುವು; ಸಂವೃದ್ಧಿ ಮತ್ತು ವಿವೇಕ ಸಮತೋಲನದಲ್ಲಿದ್ದುವು. ಮಂತ್ರ ಮರೆತುಹೋಯಿತು, ತಂತ್ರ ಹಾರಿ ಹೋಯಿತು, ಸಂಯಂತ್ರ ಹದಗೆಟ್ಟಿತು. ಆದರೆ ಸಮೃದ್ಧಿಯ ವಿವೇಕರಹಿತ ಅನ್ವೇಷಣೆ ಉತ್ಪಾದನೆ ಹಾಗೂ ಅನುಭೋಗ ಬದುಕಿನ ಹೊಸ ಗೀಳಾದುವು. ಇಂದಿನ ಮಾನವ ಏನೋ ಕಳೆದುಕೊಂಡವನಂತೆ ಅಲೆದಾಡುತ್ತಿರುವುದು ಮತ್ತು ಚಡಪಡಿಸುತ್ತಿರುವುದು ಈ ನವಜಾತ ಬಕಾಸುರತ್ವದಿಂದ. ಇದಕ್ಕಿರುವ ಏಕೈಕ ಪರಿಹಾರ: ಮರಳಿ ಮಣ್ಣಿಗೆ, ಎರೆಹುಳುವಿನ ತಟ್ಟೆಗೆ ಅಥವಾ ತೊಟ್ಟಿಗೆ, ಬದುಕಿನ ಸರಳ ಮೂಲಸೂತ್ರಕ್ಕೆ!

ಮಣ್ಣನ್ನು, ಕಸವನ್ನು ತಿಂದು ಬದುಕುವ ಎರೆಹುಳಗಳ ಬಗ್ಗೆ ಇಂದು ಅತಿ ಪ್ರೀತಿ. ಅವನ್ನು ಸಾಕುವ ಪ್ರವೃತ್ತಿ. ಅವು ತಿಂದು ಉರುಚುವ ಕೊಳಕನ್ನು ಅಮೂಲ್ಯ ರತ್ನ ವೆಂದು ಸ್ವೀಕರಿಸುವ ಮನೋವೃತ್ತಿ. ಎರೆಹುಳಗಳ ಮತ್ತು ಎರೆಗೊಬ್ಬರಗಳ ಸಮೃದ್ಧ ವ್ಯಾಪಾರ, ಏಕೆ ಈ "ಹೊಸ ಲಾಗ?"

ಅಸಂಖ್ಯ ಶತಮಾನ, ಶತಮಾನಗಳ ಅನೂಹ್ಯ ಸನ್ನಹಗಳ ಅನಂತರ ಈ ಭೂಮಿಯಲ್ಲಿ ಜೀವ ಸೃಷ್ಟಿಯಾಯಿತು. ಸಾವಿರ ಸಾವಿರ ಸಸ್ಯಗಳು ಸಮೃದ್ಧವಾಗಿ ಬೆಳೆದವು. ಆ ಮೇಲೆ ಜೀವ ಸೃಷ್ಟಿಯಾಯಿತು. ಎರೆ ಹುಳು, ಮೀನು, ಕಪ್ಪೆ, ಹಾವು, ಹಕ್ಕಿ, ಆನೆ, ಕುದುರೆ, ಕತ್ತೆ, ನಾಯಿ, ದನ, ಮಂಗ....ಹೀಗೆ. ಇವು ನಿಸರ್ಗದ ವಿಕಾಸದ ಮೆಟ್ಟಲುಗಳು ಅಥವಾ ಇನ್ನೆಲ್ಲಾ, ಮುಂದೆ ಸೃಷ್ಟಿಗೊಳ್ಳಲಿರುವ ಮೇರು ವ್ಯಕ್ತಿತ್ವವಾದ ಮಾನವನ ನಿರೀಕ್ಷೆಯಲ್ಲಿ ಪ್ರಕೃತಿ ನಿರ್ಮಿಸಿದ ತೊಟ್ಟಿಲುಗಳು. ನಾವಿಂದು ನಮ್ಮ ಶಿಶುಗಳ ನಿರೀಕ್ಷೆಯಲ್ಲಿ ಏನೊಂದು ತಯಾರಿ ಮಾಡುವುದಿಲ್ಲ ಹೇಳಿ. ಇಂಥಾ ಅನಿವಾರ್ಯ ತಯಾರಿ ಇದ್ದಾಗಲೇ ಮಗು ಜೀವಂತವಾಗಿ ಹುಟ್ಟಬಲ್ಲದು, ಬೆಳೆಯ ಬಲ್ಲದು, ಬಾಳಬಲ್ಲುದು. ಹಾಗೆಯೇ ಈ ನಿಸರ್ಗದಲ್ಲಿ ಒಟ್ಟಾಗಿ ಮಾನವ ಜನಾಂಗ

ಉದ್ಭವಿಸಬೇಕಾದರೆ ಬಹಳಷ್ಟು ತಯಾರಿ ಬೇಕಾಗಿತ್ತು. (ಸಸ್ಯಗಳು ಹಾಗೂ ಇತರ ಪ್ರಾಣಿಗಳು) ಭೂಮಿಯಲ್ಲಿ ಇಂಥ ಭೂಮಿಕೆ ಸೃಷ್ಟಿಯಾದಾಗ ಅಂದು ಮಾನವ ಸೃಷ್ಟಿಯಾದ. ಅಂಥ ಭೂಮಿಕೆ ಇದ್ದದ್ದರಿಂದಲೇ ಹುಟ್ಟಿದ ಮನುಷ್ಯ ಬೆಳೆದ. ಬೆಳೆದೂ ಬೆಳೆದೂ ಭೂಮವಾದ. ಈಗ ಭೀಕರನೂ ಆಗಿದ್ದಾನೆ. ಮಾನವ ಜನಾಂಗದ ಹುಟ್ಟು, ಬೆಳವಣಿಗೆ, ಬಾಳ್ವಿಗೆ ಏನೆಲ್ಲ ಬೇಕೋ ಅವನ್ನೆಲ್ಲ ಅತಿಯಾಗಿ, ವಿಪರೀತವಾಗಿ ತಿಂದು ತೇಗುವುದರಲ್ಲಿ ಸಂತೋಷವನ್ನೂ, ಸಮೃದ್ಧಿಯನ್ನೂ ಕಾಣತೊಡಗಿದ. ಸ್ವಾರ್ಥದ ಅತಿರೇಕದಲ್ಲಿ ವಿಹರಿಸಿದ್ದರ ದೆಸೆಯಿಂದ ಇಂದು ಮಾನವನ ಈ ಪ್ರಾಕೃತಿಕ ತೊಟ್ಟಿಲು ಮಸುಕಾಗ ತೊಡಗಿದೆ. ಕಟ್ಟಿದ ಹಗ್ಗಗಳು ಮುಕ್ಕಾಗ ತೊಡಗಿವೆ.

ಈ ಅಂಶಗಳು ಇಂದು ಸ್ವಯಂ ಅನುಭವದಿಂದ ಎಲ್ಲೆಡೆಯೂ ಸ್ಪಷ್ಟವಾಗುತ್ತಿವೆ. ಪರಿಸರ ವಿಜ್ಞಾನಿಗಳ ಸತ್ಯಾನ್ವೇಷಣೆಯ ಪ್ರಯತ್ನಗಳು, ಇಂದಿನ, ಮುಂದಿನ ಮಾನವ ಜೀವನದ ಸ್ಥಿತಿಗತಿಗಳ ಬಗ್ಗೆ ಬೆಳಕು ಚೆಲ್ಲುತ್ತಿವೆ. ಹಾಗಾಗಿ ಅಲ್ಲಲ್ಲಿ ಪ್ರಜ್ಞಾವಂತರು ಪರಿಸರ ಆಂದೋಲನ ಪ್ರಾರಂಭಿಸಿದ್ದಾರೆ. ಈ ಬಗ್ಗೆ ಮಾತನಾಡುತ್ತಾರೆ. ಒಂದಷ್ಟು ಪ್ರಾಮಾಣಿಕ ಕೆಲಸಗಳು ಆಗುತ್ತಿವೆ. ರಾಸಾಯನಿಕ ಕೃಷಿಯ ವಿರುದ್ಧ ಗಂಭೀರ ಚಿಂತನೆ, ಗುಲ್ಲು ಶುರುವಾಗಿದೆ. ರಾಸಾಯನಿಕಗಳ ಭಸ್ಮಾಸುರ ಪ್ರವೃತ್ತಿಯನ್ನು ತಡೆಯುವ ಬಗ್ಗೆ ಸುರ-ನರರಲ್ಲಿ ವಿಚಾರ, ವಿಮರ್ಶೆ ನಡೆಯುತ್ತಿದೆ. ಹಾಗಾಗಿ ಸಾವಯವ, ಸಹಜ ಕೃಷಿಯ ಕೂಗು ಕೇಳುತ್ತಿದೆ. ಇಂಥ ಪರಿಸರಾಶಕ್ತಿಯ ಸುಂದರ ಸಂವೇದನೆಯ ಒಂದಂಶವಾಗಿ ಇಂದು ಎರೆ ಹುಳುಗಳು–ಪ್ರಪಂಚದ ಆದಿ ಜೀವಿಗಳು–ಪ್ರಾಮುಖ್ಯ ಪಡೆಯುತ್ತಿವೆ. ಯಾವ ಜೀವಿಯನಂತರ ಎಲ್ಲ ಜೀವಿಗಳೂ ಬಂದವೋ, ಅಂಥ ಎರೆಹುಳಗಳಿಲ್ಲದೆ. ಇನ್ನು ಕೃತಕ ಗೊಬ್ಬರದ ಊಡುವಿಕೆಯಿಂದ ಕೃಷಿ ಮಾಡಲು, ಜೀವನ ಮಾಡಲು ಅಸಾಧ್ಯವೆಂಬ ಅರಿವು ಮೂಡುತ್ತಿದೆ.

ಎರೆ ಹುಳುಗಳು ಅತ್ಯಂತ ನಾಜೂಕಾದ ಗೊಬ್ಬರದ ಕಾರ್ಖಾನೆಗಳು. ನಮ್ಮ ಬೆಳೆಗಳಿಗೆ ಗೊಬ್ಬರ ಬೇಕೆಂದು ನಮಗೆಲ್ಲರಿಗೂ ಗೊತ್ತು. ಆದರೆ ನಿಜವಾದ ಗೊಬ್ಬರ ಯಾವುದು ಎಂಬ ಬಗ್ಗೆ ತಿಳಿಯಬೇಕಾಗಿದೆ. ಈ ಹೊತ್ತು. ಇಲ್ಲವಾದರೆ ಬರುವುದು ಎಲ್ಲರಿಗೂ ಜೊತೆಯಾಗಿ ಆಪತ್ತು. ಎಲ್ಲೆಲ್ಲೂ ಕೇಳುವ, ಕಾಣುವ ಪ್ರಚಾರ ಸಾಹಿತ್ಯಗಳಿಂದ ನಾವಿಂದು ಸಮ್ಮೋಹಿತರಾಗಿ ಬಿಟ್ಟಿದ್ದೇವೆ. ಮೂಕ ಪ್ರಾಣಿಗಳಾದ ಎರೆ ಹುಳುಗಳನ್ನು ಮರೆತು ಬಿಟ್ಟಿದ್ದೇವೆ. ಅವು ಬಿಟ್ಟಿಯಾಗಿ ಕೂಡುವ ಗೊಬ್ಬರ ನಮ್ಮ ಕಾಮಾಲೆ ಕಣ್ಣುಗಳಿಗೆ ಕಾಣುತ್ತಲೇ ಇಲ್ಲ.

ಸಾಮಾನ್ಯವಾಗಿ ಸಸ್ಯ ಪಳಿಯುಳಿಕೆಗಳಿಂದ ದೊರೆಯುವ ಸಾವಯವ ಗೊಬ್ಬರದಲ್ಲಿ, ಅದನ್ನು ಮತ್ತೆ ತಿಂದು ಗೊಬ್ಬರದ ಗುಣಮಟ್ಟವನ್ನು ಹೆಚ್ಚಿಸುವ ಎರೆಗೊಬ್ಬರದಲ್ಲಿ, ಶೇಕಡಾ ೦.೫ರಷ್ಟು ಸತ್ವಾಂಶಗಳಿರುತ್ತವೆ. ಆದರೆ ರಾಸಾಯನಿಕ ಗೊಬ್ಬರಗಳಲ್ಲಿ ಶೇಕಡಾ ೧೦ರಿಂದ ಶೇಕಡಾ ೫೦ರ ವರೆಗೆ ವಿವಿಧ ರೀತಿಯ ಸತ್ವಾಂಶಗಳಿವೆ. ಈ ಹೆಚ್ಚುಗಾರಿಕೆ, ಈ ತಂತ್ರಗಾರಿಕೆ, ನಮ್ಮ ದಾರಿ ತಪ್ಪಿಸಲು ಒಂದು ಕಾರಣವಾಯಿತು. ಯಾವುದೇ ಜೀವಿಗೆ ಆಹಾರ ಹೆಚ್ಚಾಗಿ

ಬೇಕಾದುದಲ್ಲ. ನಿಯಮಿತವಾಗಿ ಮಿತವಾಗಿ ಬೇಕು. ಇದು ಪ್ರಕೃತಿ ನಿಯಮ. ಇಲ್ಲಿನ ಎಲ್ಲಾ ಸಸ್ಯಗಳೂ ಶೇಕಡಾ ೦.೫ ಸತ್ವಾಂಶವುಳ್ಳ ಸಾಧಾರಣ ಗೊಬ್ಬರಕ್ಕೆಂದೇ ರಚಿತವಾಗಿವೆ, ನಿಯಾಮಿತವಾಗಿವೆ. ನೀರಿನಲ್ಲಿ ಆಮ್ಲ ಜನಕ ಕಡಿಮೆ ಇದೆ. ಹೆಚ್ಚು ಆಮ್ಲ ಜನಕ ಕೊಡೋಣ ಎಂದು ಮೀನನ್ನು ನೀರಿನಿಂದ ಗಾಳಿಗೆ ಹಾಕಿದರೆ ಹೇಗೆ? ಹುಲ್ಲಿನಲ್ಲಿ ಪೋಷಕಾಂಶ ಕಡಿಮೆ. ಹಾಗಾಗಿ ದನಗಳಿಗೆ ಮಾಂಸ ಕೊಟ್ಟರೆ ಸಾಧುವೇ? ಇದೇ ತರ್ಕಗಳು ಸಸ್ಯ ಪೋಷಕಾಂಶಗಳ ಬಗೆಗೂ ಹೊಂದುತ್ತವೆ. ಇವು ಕೇವಲ ತರ್ಕಗಳಲ್ಲ. ಪ್ರಮಾಣ ಬದ್ಧ ಪ್ರಾಯೋಗಿಕ ಅನುಭವಗಳಾಗಿವೆ.

ನಾವು ನೀವು ನಿರಕ್ಷರಿಯೆಂದು ತಿಳಿದ ಯಾವುದೇ ರೈತನನ್ನು ಪ್ರಾಮಾಣಿಕ ಪ್ರಶ್ನೆಗಳಿಂದ ಕೆದಕಿ. ಆಗ ಅವನ ಅಳಲು ಅವನ ಅಳ ಅರ್ಥವಾಗುತ್ತದೆ. ಹಸಿರು ಕ್ರಾಂತಿಯ ಹರಿಕಾರ ಎಂದು ಹೇಳಲ್ಪಡುವ ರಾಸಾಯನಿಕಗಳ ಆಗಮನದಿಂದ ಈ ಇಪ್ಪತ್ತೈದು ವರ್ಷಗಳಲ್ಲಿ ರೈತನ ನೆಮ್ಮದಿ ಕದಡಿದ ಕಥೆ, ಶ್ರಮ ಹೆಚ್ಚಿದ ಕಥೆ, ರೋಗ ಹಿಗ್ಗಿದ ಕಥೆ, ಫಸಲು ಬಾರದ ಕಥೆ, ಭೂಮಿ ಸೊರಗಿದ ಕಥೆ, ಮರಗಿಡ ಬಳ್ಳಿಗಳು ಶ್ಮಶಾನಯಾತ್ರೆ ಮಾಡಿದ ಕಥೆ, ಅಂತರ್ಜಲ ಬತ್ತುತ್ತಾ ಕುಡಿಯುವ ನೀರಿಗೆ ಪರದಾಡುವ ಕಥೆ, ಎಲ್ಲದಕ್ಕೂ ಪೇಟೆಯ ಕಛೇರಿಗಳಲ್ಲಿ, ಅಂಗಡಿಗಳಲ್ಲಿ ಬಾಗಿಲು ಕಾಯುವ ಕಥೆ, ಇನ್ನೇನು ಮಾಡಬೇಕೆಂದು ತಜ್ಞರ ಮುಖ ನೋಡುವ ಕಥೆ, ಸಾಲ ಹೆಚ್ಚಿದ ಕಥೆ, ಸೋಲು ಅನುಭವಿಸಿದ ಕಥೆ, ಹಳ್ಳಿ ಬಿಟ್ಟು ಪೇಟೆ ಸೇರುವ ಕಥೆ........ ರಾಸಾಯನಿಕಗಳಿಂದ ಹಸಿರು ಕ್ರಾಂತಿಯೇ ಆಗಿರುವುದು ನಿಜವಾಗಿದ್ದರೆ, ಈ ಸಂಶೋಧನೆಗಳಿಂದ ರೈತನ ಸಂಪಾದನೆ ಹೆಚ್ಚಿದ್ದು ನಿಜವೇ ಹೌದಾಗಿದ್ದರೆ, ಇಷ್ಟೊಂದು ಕಥೆಗಳು ಹುಟ್ಟಬಾರದಾಗಿತ್ತು. ರೈತ ಹಳ್ಳಿ ಬಿಟ್ಟು ಪೇಟೆಗೆ ಗುಳೇ ಹೋಗಬಾರದಾಗಿತ್ತು. ಸಂಪಾದನೆ ಇರುವ ಕೃಷಿ ಬಿಟ್ಟು ಪೇಟೆಯ ಚಾಕ್ರಿಗೆ, ಪೇಟೆಗಳಲ್ಲಿ ಕೊಳೆಗೇರಿ ಸೃಷ್ಟಿಸುವುದಕ್ಕೆ ನಮ್ಮ ರೈತರು ಇಷ್ಟೊಂದು ಅಗಾಧ ಪ್ರಮಾಣದಲ್ಲಿ ವಲಸೆ ಹೋಗುವುದು ಏನನ್ನು ಸೂಚಿಸುತ್ತದೆ? (ಕೃಷಿ ಸೃಷ್ಟಿ ಬಿಟ್ಟು ಕೊಳೆಗೇರಿ ಸೃಷ್ಟಿ!) ಇಂದಿನ ನಮ್ಮ ಕೃಷಿಯ ಗೆಲುವನ್ನೇ? ಸೋಲನ್ನೇ?

ನನ್ನ ತರ್ಕಗಳಿಗೆ ಪೂರಕವಾಗುವಂತೆ ಇಂಗ್ಲೆಂಡಿನಲ್ಲಿ ೧೯೯೦ನೇ ಇಸವಿಯಿಂದ ಹಾಲಿನ ಅಧಿಕ ಇಳುವರಿಗಾಗಿ ಕುರಿಗಳ ಮಾಂಸವನ್ನು ಸಂಸ್ಕರಿಸಿ ಫೀಡ್ಸ್‌ನಲ್ಲಿ ಬೆರೆಸಿ ದನಗಳಿಗೆ ತಿನ್ನಿಸಲಾಯಿತು. ಇದರ ಪರಿಣಾಮವಾಗಿ ಅಲ್ಲಿಯ ಹಸುಗಳಿಗೆ ಗಂಭೀರವಾದ “ಹುಚ್ಚು ರೋಗ” ಪ್ರಾರಂಭವಾಗಿದೆ. ಆದ ಕಾರಣ ಈ ವರ್ಷ (೧೯೯೬) ೧೦ ಲಕ್ಷಕ್ಕೂ ಮಿಕ್ಕ ಹಸುಗಳನ್ನು ಕೊಲ್ಲಲಾಗಿದೆ. ಇದೇ ರೀತಿ ನಮ್ಮ ಸಸ್ಯಗಳಿಗೆ ಅವುಗಳದ್ದಲ್ಲದ ಸಾಂದ್ರೀಕೃತ ರಾಸಾಯನಿಕ ಆಹಾರಗಳನ್ನು ಕೊಟ್ಟಾಗ ಅವು ಅಸ್ವಾಭಾವಿಕ ಬೆಳವಣಿಗೆಯನ್ನು ಹೊಂದುತ್ತವೆ. ಶಾಕತ್ತಿಲ್ಲದ ಬೊಜ್ಜನ್ನು ಮೈಗೂಡಿಸಿಕೊಳ್ಳುತ್ತವೆ. ಹಾಗಾಗಿ ರೋಗ, ಕೀಟ ಬಾಧೆಗಳು ಅಧಿಕಗೊಳ್ಳುತ್ತವೆ. ಆದ್ದರಿಂದ ನಮ್ಮ ಸಸ್ಯಗಳು ರೋಗ ರಹಿತವಾಗಿ, ನಮ್ಮೆಲ್ಲರ ಆರೋಗ್ಯಕ್ಕೆ ಪೂರಕವಾಗಿ, ನಮ್ಮ ಶ್ರಮ, ಸಮಯಗಳು

ಸದುಪಯೋಗಿಯಾಗಿ, ಈ ಭೂಮಿಯನ್ನು ಇನ್ನೊಂದಷ್ಟು ತಲೆಮಾರುಗಳಿಗೆ ಉಳಿಸಿಕೊಂಡು, ಕೃಷಿ ಮಾಡಬೇಕಾದರೆ ಎರೆಹುಳು–ಎರೆ ಗೊಬ್ಬರ ನಮಗೆ ಅತ್ಯಂತ ಅಗತ್ಯ, ಅನಿವಾರ್ಯ, ಇಂಥಾ ಎರೆ ಹುಳುಗಳನ್ನು ಸಾಕುವುದು, ಗೊಬ್ಬರ ತಯಾರಿಸುವುದು ಹೇಗೆ? ಎಂಬುದನ್ನು ಈಗ ನೋಡೋಣ.

ನಾವು ಎಲ್ಲದರಲ್ಲೂ ಜಾದುವನ್ನು ನಿರೀಕ್ಷಿಸುತ್ತೇವೆ. ಅದನ್ನು ನಂಬುತ್ತೇವೆ ಕೂಡ. ರಾಸಾಯನಿಕ ಗೊಬ್ಬರಗಳು ಇದುತನಕ ಮಾಡಿದ್ದು ಇದನ್ನೇ. ಎರೆಹುಳು–ಗೊಬ್ಬರಗಳಿಂದ ನಾವು ಇಂಥ ಜಾದುವನ್ನು ನಿರೀಕ್ಷಿಸಿದರೆ ಮತ್ತೆ ನಮ್ಮದು ಮೂರ್ಖತನವಾಗುತ್ತದೆ. (ಶೂನ್ಯದಿಂದ ಬಾಳೆಹಣ್ಣನ್ನು ಸೃಷ್ಟಿಸುವ ಜಾದುಗಾರ ಕೂಡ ತನ್ನ ಸ್ವಂತಕ್ಕೆ ಹಣ್ಣನ್ನು ಅಂಗಡಿಯಿಂದಲೇ ಖರೀದಿಸಬೇಕಾಗುತ್ತದೆ.) ಚಟ್ಟಿಗಳಲ್ಲಿ, ತೊಟ್ಟಿಗಳಲ್ಲಿ, ಕಸದ ಗುಡ್ಡೆಗಳಲ್ಲಿ ಎರೆಹುಳು ಸಾಕುವ ಬಗ್ಗೆ, ಅದಕ್ಕಿಂತಲೂ ಹೆಚ್ಚಾಗಿ ಯಾರೋ ತಯಾರಿಸಿದ ಹಾಗೆಂದು ಹೇಳಲ್ಪಡುವ ಎರೆಗೊಬ್ಬರವನ್ನು ಖರೀದಿಸುವ ಬಗ್ಗೆ ಈಗ ಆಸಕ್ತಿ, ಪ್ರಚಾರ ಸುರುವಾಗಿದೆ. ಎರೆಗೊಬ್ಬರ ವ್ಯಾಪಾರದ ವಸ್ತುವಾಗುವುದು ಮತ್ತೆ ದುರಂತವೇ. ನಮಗಾಗಿ ಯಾರೋ ಮಾಡಬೇಕೆನ್ನುವ ಮರ್ಜಿಯೇ ಮಾರಕವಾದದ್ದು.

ಎರೆ ಹುಳು ಸಾಕುವುದು, ಎರೆಗೊಬ್ಬರ ತಯಾರಿಸುವುದು ಮುಖ್ಯವೇ. ಆದರೆ ಎರೆಹುಳು ಎಲ್ಲೆಲ್ಲೂ ಸ್ವಯಂ ಹೆಚ್ಚುವ ವಾತಾವರಣ ನಿರ್ಮಿಸುವುದು ಅದಕ್ಕಿಂತ ಮುಖ್ಯ. ಮಾನವ ಸೃಷ್ಟಿಗೆ ಮೊದಲು ನಿಸರ್ಗ ಹೇಗಿತ್ತೋ ಅಂಥಾ ಸಂಪದ್ಭರಿತ ಮಣ್ಣಿನ ಸೃಷ್ಟಿಗೆ ಸಾಧ್ಯತವು ಗರಿಷ್ಠ ಪ್ರಯತ್ನ, ಕಾಳಜಿ ವಹಿಸುವುದು ಅತಿ ಮುಖ್ಯ.

ಆದ್ದರಿಂದ ಮೊದಲನೆಯದಾಗಿ ಎಲ್ಲ ರೀತಿಯಲ್ಲೂ ಪ್ರಳಯಾಂತಕವಾಗಿರುವ ರಾಸಾಯನಿಕಗಳನ್ನು ಸಾರಾಸಗಟಾಗಿ ಬಿಡಬೇಕು. ಎರಡನೆಯದಾಗಿ ಉಳುಮೆ ಅಗತೆಗಳನ್ನು ಕಡಿಮೆ ಮಾಡಬೇಕು. ಮೂರನೆಯದಾಗಿ ಸಸ್ಯ ವೈವಿಧ್ಯಗಳನ್ನು ಹೊಂದಿಸುತ್ತಾ ಸಾಧ್ಯತವು ಗರಿಷ್ಠ ಕಾಡು ಕಳೆಗಳನ್ನು ಬೆಳೆಯಲು ಬಿಡಬೇಕು. ಈ ಮೂರು ಒಂದಕ್ಕೊಂದು ಪೂರಕ ಹಾಗೂ ಪೋಷಕ. ಇದು ಆದಾಗ ಎರೆಹುಳಗಳಿಗೆ ಹಾಗೂ ಉಪಕಾರಿ ಬ್ಯಾಕ್ಟೀರಿಯಾಗಳಿಗೆ ನಮ್ಮ ಭೂಮಿಯಲ್ಲೇ ಧಾರಾಳ ಆಹಾರ ಉತ್ಪತ್ತಿಯಾಗುತ್ತದೆ. ಆಹಾರ ಸಿಕ್ಕಿದಾಗ ಇವುಗಳ ಸಂತಾನ ತ್ವರೆಯಿಂದ ಹೆಚ್ಚುತ್ತದೆ. ಎರೆಹುಳಗಳ ಓಡಾಟ ನೈಸರ್ಗಿಕ ಉಳುಮೆಯಾಗುವುದು. ಆಗ ನಮಗೆ ಟ್ರ್ಯಾಕ್ಟರ್ ಬೇಕಾಗಿಲ್ಲ. ಬ್ಯಾಕ್ಟೀರಿಯಾ ಹಾಗೂ ಎರೆಹುಳುಗಳು ಸಮೃದ್ಧಿಸಿದಾಗ ನಮ್ಮ ಭೂಮಿಗೆ ಗೊಬ್ಬರ ಅಲ್ಲೇ ತಯಾರಾಗುತ್ತದೆ. ಆಮೇಲೆ ಹೊರಗಿನಿಂದ ರಾಸಾಯನಿಕ ಅಥವಾ ಇನ್ನಿತರ ಯಾವುದೇ ಗೊಬ್ಬರ ತರುವ ಅಗತ್ಯವಿಲ್ಲ, ಕೊಳೆಯುತ್ತಿರುವ ಕಳೆ, ಕಸಗಳ ಹೊದಿಕೆ ಇರುವಾಗ, ನಾವು ಕೊಡಬೇಕಾದ ನೀರಿನ ಆವಶ್ಯಕತೆ ಕಡಿಮೆಯಾಗುತ್ತ ಹೋಗುವುದು. ಪ್ರಾಕೃತವೂ, ಸಹಜವೂ ಆದ ಆಹಾರ ನೀರು ಹೀರಿದ ನಮ್ಮ ಗಿಡಗಳು ನಿಜ

ವಾಗಿಯೂ ಸಮರ್ಥವಾಗಿರುತ್ತವೆ. ರೋಗ ಕೀಟಗಳೆಲ್ಲ ಸಮತೋಲದಲ್ಲಿರುತ್ತವೆ. ಇಂಥಾ ಆದರ್ಶದ ಕನಸಿನಲ್ಲಿ ನಮ್ಮ ಪ್ರಯತ್ನ ನಡೆದಾಗ ಮಾತ್ರ ನಾವು ನಿಜವಾಗಿ ಎರೆ ಹುಳು ಸಾಕಿ ಸಾಧನೆ ಮಾಡಲು ಸಾಧ್ಯ. ಕಳೆದು ಹೋದ ಪ್ರಾಕೃತಿಕ ಸಮತೋಲ ವನ್ನು ಪುನಃ ಸ್ಥಾಪಿಸಲು ಸಾಧ್ಯ. ಇಂಥ ಸಾಧ್ಯತೆಗೆ ಪ್ರಾರಂಭಿಕ ಸಾಧನವಾಗಿ ನಾವು ಎರೆ ಹುಳುಗಳನ್ನು ಕೃತಕವಾಗಿ, ವಿಶೇಷ ವಾಗಿ ಸಾಕಬಹುದಾಗಿದೆ. ಎರೆಹುಳು ಸಾಕಣೆಯ ವಿವಿಧ ರೀತಿಗಳನ್ನು ಇನ್ನು ನೋಡೋಣ.

## ೧. ತಟ್ಟೆ (ಟ್ರೇ) ವಿಧಾನ

ಯಾವುದೇ ರೀತಿಯ ಸಣ್ಣ, ದೊಡ್ಡ ಟ್ರೇಗಳಲ್ಲಿ ನಾವು ಎರೆಹುಳಗಳನ್ನು ಸಾಕ ಬಹುದು. ತೂತಾದ ಪಾತ್ರೆ, ಉಪಯೋಗ ಕ್ಕಿಲ್ಲದ ಚಟ್ಟಿ, ಹರಿದ ಬಾಲ್ದಿ ಹೀಗೆ ಯಾವುದೇ ಸಂಗ್ರಹದಲ್ಲಿ ಎರೆಹುಳು ಸಾಕಣೆ ಸಾಧ್ಯ. ಗಮನಿಸಬೇಕಾದ ಬಹಳ ಮುಖ್ಯ ಅಂಶವೆಂದರೆ ಎರೆಹುಳುಗಳಿಗೆ ಪಾತ್ರೆಯ ಚಂದ, ಆಕಾರ ಮುಖ್ಯವಲ್ಲ. ಅವಕ್ಕೆ ಮುಖ್ಯವಾಗಿರುವುದು ನಾವು ಕೊಡುವ ಸಾವಯುವ ಆಹಾರ, ನೀರು ಹಾಗೂ ನೆರಳು. ಯಾವುದೇ ಸಸ್ಯ, ಪ್ರಾಣಿ ಜನ್ಯ ತ್ಯಾಜ್ಯಗಳನ್ನು ಎರೆಹುಳಗಳು ತಿಂದು ಉತ್ಕೃಷ್ಟ ಗೊಬ್ಬರವಾಗಿಸುತ್ತವೆ. ನಮ್ಮ ಎರೆಹುಳಗಳ ಜೊತೆಗೆ ಕೋಟಿ ಕೋಟಿ ಸಂಖ್ಯೆಯಲ್ಲಿ ಬ್ಯಾಕ್ಟೀರಿಯಾಗಳೂ ಕೆಲಸ ಮಾಡುತ್ತಿರುತ್ತವೆ ಎಂಬುದನ್ನೂ ಮರೆಯ ಬಾರದು. ಈ ಬ್ಯಾಕ್ಟೀರಿಯಾಗಳ ಜೊತೆಗೆ ಎರೆಹುಳಗಳೂ ಸೇರಿದಾಗ ನಮ್ಮ ಗೊಬ್ಬರದ ಗುಣಮಟ್ಟ ಬಹುಮುಖಗೊಳ್ಳುತ್ತದೆ. ಹೆಚ್ಚಾಗಿ ಸಸ್ಯ ಹೀರುವ ಸ್ಥಿತಿಯಲ್ಲಿರುತ್ತದೆ. ನಮಗೆ ಗೊತ್ತಿರುವ ಗೊತ್ತಿಲ್ಲದ ದೊಡ್ಡ, ಸಣ್ಣ ಪೋಷಕಾಂಶಗಳು, ಖನಿಜಾಂಶಗಳು, ಚೋದಕಗಳು ಕಿಣ್ವಗಳು ಅತ್ಯಂತ ಸಮರ್ಥ ಸಮತೋಲದಲ್ಲಿರುತ್ತವೆ. ಎರೆಹುಳುವಿನ ಹಿಕ್ಕೆ ಸುಮಾರಾಗಿ ಜೀರಿಗೆಯ ರೂಪಕ್ಕೆ ಇರುತ್ತದೆ. ಬಣ್ಣ ಕಪ್ಪು. (ಆದರೂ ಬಿಳಿ ಬಣ್ಣದ ಯೂರಿಯಾಕ್ಕಿಂತ ಸಾವಿರ ಪಟ್ಟು ಶ್ರೇಷ್ಠ. ಇದರಲ್ಲಿ ಸ್ಕ್ಯಾವ್ ದುರ್ವಾಸನೆ ಖಾತ್ರಿ ನಾಸ್ತಿ!) ಎರೆಹುಳು ಯಾವುದೇ ಸಾವಯುವ ತ್ಯಾಜ್ಯವನ್ನು ತಿನ್ನಬಲ್ಲು ದಾದರೂ ದನಗಳ ಸಗಣಿ ಅವುಗಳಿಗೆ ಪಂಚ ಭಕ್ಷ್ಯ ಪರಮಾನ್ನ. ಸಗಣಿ ಹೆಚ್ಚಿದಷ್ಟು ಎರೆಹುಳುಗಳ ಚಟುವಟಿಕೆ ಹೆಚ್ಚು. ಬರೀ ಸಗಣಿ ಮಾಧ್ಯಮದಲ್ಲೂ ಎರೆಹುಳು ಸಂಭ್ರಮದಿಂದ ಕೆಲಸ ಮಾಡಬಲ್ಲುದು. ಹಳೆ ಸಗಣಿಗಿಂತ ಹೊಸ ಸಗಣಿಯೇ ಹೆಚ್ಚು ಶ್ರೇಷ್ಠ. ಹಾಗೆಂದು ಯಾವುದೂ ಕನಿಷ್ಠ ವಲ್ಲ. ಎಲ್ಲವಕ್ಕೂ ಅವರದೇ ಪಾತ್ರಗಳಿವೆ.

ತಟ್ಟೆ ವಿಧಾನ ಹಳ್ಳಿಗಳಿಗಿಂತ ಹೆಚ್ಚಾಗಿ ಪೇಟೆ ಮನೆಗಳಿಗೆ ಹೆಚ್ಚು ಸೂಕ್ತ. ತರಕಾರಿ ಸಿಪ್ಪೆ, ಮನೆಯ ತಂಗಳ, ಹಳತಾದ ಹತ್ತಿಯ ಬಟ್ಟೆ (ನೈಲಾನ್ ಸಲ್ಲ) ಇತ್ಯಾದಿ ಗಳ ಮೇಲೆ ಎರೆಹುಳುವನ್ನು ಬೆಳೆಸ ಬಹುದು. ಇದರಿಂದ ಪೇಟೆಯಲ್ಲಿ ಕೊಳಕು ನಿರ್ಮಿಸುವ ಬದಲಿಗೆ ಕಲಾತ್ಮಕವಾಗಿ ಗೊಬ್ಬರ ನಿರ್ಮಿಸಬಹುದು. ಹಾಗೂ ನಮ್ಮ ಸೂರಿನ ಅಡಿಯಲ್ಲಿ ಬೆಳೆಯುವ ಈ ನಮ್ಮ ಮಿತ್ರರು ನಮ್ಮ ಕಾಯ್ದಿಟ್ಟ ಸಂಪತ್ತಾಗಿರುವುವು. ಎಂದರೆ ಮುಂದೆ ನಾನು ವಿವರಿಸುವ ಇತರ ವಿಧಾನಗಳಲ್ಲಿ ಅಕಸ್ಮಾತ್

ಹುಳುಗಳು ನಾಶವಾದರೆ, ಮತ್ತೆ ಹೊಸತಾಗಿ ಪ್ರಾರಂಭ ಮಾಡಲು, ಅತ್ಯಂತ ಆದರ್ಶ ಪರಿಸರದಲ್ಲಿ ನಾವು ಸಾಕುತ್ತಿರುವ ಈ ತಟ್ಟಿ ಹುಳುಗಳು ಒದಗಿ ಬರುತ್ತವೆ. ತರಕಾರಿ ಸಿಪ್ಪೆಯ ಜೊತೆ ಒಂದಷ್ಟು ಸಗಣಿ ನೀರು ಬೆರೆಸಿದರೆ ಹೆಚ್ಚು ಹಸನಾಗುವುದು. (ತರಕಾರಿಯನ್ನು ಕಡ್ಲೆಹಿಟ್ಟಿನಲ್ಲಿ ಅದ್ದಿ ಬಜ್ಜಿ ಕರಿದ ಹಾಗೆ!) ನಿಮ್ಮ ಆವರಣದೊಳಗಿನ ಗಿಡವನ್ನು ತಿನ್ನಲು ಬರುವ ಬೀದಿಯ ದನ ಇಕ್ಕಿದ ಸಗಣಿಯನ್ನು ಈ ಕೆಲಸಕ್ಕೆ ಉಪಯೋಗಿಸಬಹುದು. ಒಂದಡಿ ಗಾತ್ರದ ನಾಲ್ಕೈದು ತಟ್ಟಿಗಳಿದ್ದರೆ ಅನುಕೂಲ. ಒಂದು ತುಂಬಿದ ಮೇಲೆ ಮತ್ತೊಂದನ್ನು ಉಪಯೋಗಿಸಲು ಬರುತ್ತದೆ. ಪ್ರತಿ ತಟ್ಟಿಯಲ್ಲೂ ಅಡಿಗೆ ಒಂದಿಂಚು ತರಗೆಲೆ ಕಸ ಹಾಕಬೇಕು. ಅದರ ಮೇಲೆ ಎರಡಿಂಚು ಮರಳಿನ ಹಾಸಿಗೆ. ಅನಂತರ ಸಗಣಿ ಸಿಂಚಿತ ತ್ಯಾಜ್ಯವನ್ನು ಹರಡಿ. ಇದರ ದಪ್ಪ ಮೂರು ನಾಲ್ಕು ಇಂಚಿನ ವರೆಗೆ ಇರಬಹುದು. ಒಂದು ತಟ್ಟಿಗೆ ಸುಮಾರು ನೂರು ಎರೆಹುಳುಗಳನ್ನು ಬಿಡಬಹುದು. ಈ ಸಂಖ್ಯೆ ಏನೂ ಅಷ್ಟು ಮುಖ್ಯವಲ್ಲ. ಹತ್ತು ಬಿಟ್ಟರೂ ಸಾಕು. ಅವು ಕೆಲವೇ ದಿನಗಳಲ್ಲಿ ನೂರುಗಟ್ಟಲೆ ಆಗಿ ಬಿಡುತ್ತವೆ. ನವಜಾತ ಮರಿ ಮೂರು ತಿಂಗಳಲ್ಲಿ ಸಂತಾನಾಭಿವೃದ್ಧಿ ಮಾಡುವುದು.

ಎರೆಹುಳುಗಳಲ್ಲಿ ಮುಖ್ಯವಾಗಿ ಮೂರು ವಿಧ :

### ೧. ಎಪಿಜಿಯಿಕ್

ಇವು ಮಣ್ಣಿನ ಮೇಲ್ಪದರ ಜೀವಿಗಳು. ಕೊಳೆಯುತ್ತಿರುವ ಎಲ್ಲ ಎಲೆ, ಕಸಗಳನ್ನು ತಿಂದು ಗೊಬ್ಬರ ತಯಾರಿಸುತ್ತವೆ.

### ೨. ಅನೆಸಿಕ್

ಇವು ೩೦ ಸೆಂಟಿ ಮೀಟರಿಗೂ ಮಿಕ್ಕಿ ಮಣ್ಣಿನ ಆಳದಲ್ಲಿ ಕೆಲಸ ಮಾಡುವುವು. ಸ್ವಯಂ ಮಣ್ಣನ್ನೇ ತಿಂದು ಜೀರ್ಣಿಸ ಬಲ್ಲುವು. ಮೇಲಿಂದ ಕೆಳಕ್ಕೆ ಜಿಗುಟಾದ ಸುರಂಗ ಕೊರೆಯುವುವು. ಮೇಲ್ಪದರದ ಸಾವಯವ ವಸ್ತುಗಳನ್ನು ಕೆಳಕ್ಕು, ಮತ್ತೆ ಹಿಕ್ಕೆಯನ್ನು ಮೇಲಕ್ಕು ಹಾಕುವ ನೇಗಿಲುಗಳಿವು.

### ೩. ಎಂಡೋಜೆಯಿಕ್

ಮೊದಲ ಎರಡರ ಮಧ್ಯಮ ವರ್ಗದ ಜೀವಿಗಳಿವು. ನೇರವಾಗಿ ಎಲೆ, ಕೊಳೆಗಳನ್ನು ತಿನ್ನಲಾರವು. ಮಣ್ಣನ್ನು ಮೊಗಚಲಾರವು. ಬ್ಯಾಕ್ಟೀರಿಯಾಗಳಿಂದ ಕೊಳೆಯುವ ಕ್ರಿಯೆ ಪೂರ್ಣವಾಗಿ, ಹ್ಯೂಮಸ್ಸಾಗಿ ಪರಿವರ್ತಿತವಾದ, ಹದವಾದ ವಸ್ತುಗಳನ್ನು ತಿಂದು ಜೀವಿಸುವ ಮಣ್ಣಿನ ಒಳಪದರ ಜೀವಿಗಳಿವು. (ಮಾಹಿತಿ: ನಿಸರ್ಗದ ಕೊಡುಗೆ ಎರೆಹುಳು ಎರೆಗೊಬ್ಬರ ಡಾ|| ರಾಧ ಡಿ. ಕಾಳೆ)

ಇಲ್ಲಿ ಹೆಸರಿಸಿರುವ ಕೊನೆಯ ಎರಡು ವರ್ಗದ ಎರೆಹುಳುಗಳು ಗೊಬ್ಬರ ತಯಾರಿಯ ನಮ್ಮ ತುರ್ತಿಗೆ ಸ್ಪಂದಿಸಲಾರವು. ಹೊಸ, ಹಸಿ ಎಲೆಗಳನ್ನು ಗಬಗಬನೆ ತಿನ್ನುವ ಮೊದಲ ಜಾತಿಯೇ ನಮ್ಮ ಗೊಬ್ಬರ ತಯಾರಿಕೆಗೆ ಬೇಕು. ಇವು ಚೆನ್ನಾಗಿ ತಿನ್ನಬಲ್ಲವು. ಹೆಚ್ಚಾಗಿ ಹಿಕ್ಕೆ ಇಕ್ಕಬಲ್ಲವು. ಆದರೆ ಇವು ತಮ್ಮ ಸ್ವಂತ ಹಿತಕ್ಕೆ ಬೇಕಾಗುವ ಭೌತಿಕ ಪರಿಸರವನ್ನು ನಿರ್ಮಾಣ ಮಾಡಲಾರವು. ಕೊನೆಯ ಎರಡು ವರ್ಗದ ಎರೆಹುಳಗಳು ಯಾವುದೇ ಪ್ರತಿಕೂಲ ಪರಿಸ್ಥಿತಿಯಲ್ಲಿ ಭೂಮಿಯೊಳ

ಗಿದ್ದು ಸಂದರ್ಭ ಬಂದಾಗ ತಾವಿದ್ದೇವೆಂದು ಹೇಳಬಲ್ಲವು. ಆದರೆ ನಮಗೆ ಗೊಬ್ಬರಕ್ಕಾಗಿ ಬೇಕಾಗಿರುವ ಮೇಲ್ಪದರದ ಹುಳಗಳು ಮಾದರಿ ವಾತಾವರಣ ಇದ್ದಾಗ ಮಾತ್ರ ಜೀವಿಸಬಲ್ಲವು. ಇಲ್ಲವಾದರೆ ಜೀವತ್ಯಾಗ ಇವಕ್ಕೆ ಅನಿವಾರ್ಯ. ಗೊಬ್ಬರದ ಉದ್ದೇಶದಿಂದ ಪ್ರಾಮುಖ್ಯ ಪಡೆದಿರುವ ಈ ವರ್ಗದ ಜೀವಿಗಳು ಸಮಶೀತೋಷ್ಣ ವಲಯದಲ್ಲಿ ಅವಾಗಿ ಬಾಳಬಲ್ಲವು. ಆದರೆ ನಮ್ಮ ಉಷ್ಣ ವಲಯದಲ್ಲಿ ಅಥವಾ ಕೃಷಿಯ ಹೆಸರಿನಲ್ಲಿ ಕಾಡಿನ ಬದಲಿಗೆ ಬೆಂಗಾಡುಮಾಡಿ ಉಷ್ಣ ಹೆಚ್ಚಿಸಿರುವ ನಮ್ಮಲ್ಲಿ ಈಗ ಈ ಎರೆಹುಳುಗಳು ಬದುಕಬೇಕಾದರೆ, ಗೊಬ್ಬರ ಉತ್ಪಾದಿಸಬೇಕಾದರೆ ನಾವು ಒಂದಷ್ಟು ಶ್ರಮ ಪಡಲೇಬೇಕು. ಬೆಂಗಳೂರು ವಿಶ್ವವಿದ್ಯಾನಿಲಯದ ಪ್ರಯೋಗಗಳ ಪ್ರಕಾರ ನಮ್ಮ ಪ್ರದೇಶಕ್ಕೆ ಗೊಬ್ಬರದ ದೃಷ್ಟಿಯಿಂದ ೧) ಯೂಡ್ರಿಲಸ್ ಯುಜೇನಿಯಾ ೨) ಐಸೀನಿಯಾ ಫೀಟಿಡಾ ಎಂಬ ಎರಡು ಜಾತಿಯ ಎರೆಹುಳುಗಳು ಯೋಗ್ಯವೆಂದು ಗೊತ್ತಾಗಿದೆ. ಇದು ಹೌದೆಂಬುದು ನನ್ನ ಅನುಭವಕ್ಕೂ ವೇದ್ಯವಾಗಿದೆ. ಎರೆಹುಳಗಳಲ್ಲಿ ನೂರಾರು ಜಾತಿಗಳಿವೆ. ಬೇರೆ ಇವಕ್ಕಿಂತಲೂ ಹೆಚ್ಚು ಉತ್ತಮ ಜಾತಿಗಳಿವೆಯೋ ಎಂಬುದನ್ನು ಪ್ರಯೋಗಮಾಡಿ ಪತ್ತೆ ಹಚ್ಚಲು ಎಲ್ಲ ರೈತರಿಗೂ ವಿಪುಲ ಅವಕಾಶವಿದೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ.

ಎರೆಹುಳು ಸಾಕಣೆಗೆ ಶೇಕಡಾ ೪೦ರ ತೇವಾಂಶವನ್ನು ಕಾಯ್ದುಕೊಳ್ಳುವುದು ಹಾಗೂ ನೆರಳಿರುವುದು ಬಹಳ ಮುಖ್ಯ. ಟ್ರೇಯ ಮೇಲೆ ಹರಕು ಗೋಣಿಚೀಲ, ಅಡಿಕೆಹಾಳೆ, ಬಾಳೆಎಲೆ ಹೀಗೆ ಯಾವುದನ್ನಾದರೂ ಮುಚ್ಚಬಹುದು. ನೆರಳಿನ ಜೊತೆಗೆ ಕತ್ತಲೆ ಇದ್ದಾಗ, ಮೊದಲೇ ಹೇಳಿದಂತೆ ನೀರು, ಆಹಾರ, ಕೊಟ್ಟರೆ, ಎರೆಹುಳಗಳು ಬಹಳ ಚುರುಕಾಗಿ ತಿಂದು ಹಿಕ್ಕೆ ಇಕ್ಕುತ್ತವೆ. ನಾವು ಕೊಟ್ಟದ್ದರಲ್ಲಿ ಸುಮಾರು ೧೦ ಭಾಗ ಅವುಗಳ ದೇಹ ಪೋಷಣೆಗೆ ಉಪಯೋಗವಾಗಿ ಉಳಿದ ೯೦ ಭಾಗವೂ ಗೊಬ್ಬರವಾಗಿ ನಮಗೆ ದೊರಕುತ್ತದೆ, ಎಂದು ತಜ್ಞರು ಅಭಿಪ್ರಾಯ ಪಡುತ್ತಾರೆ.

ನಾನು ಮತ್ತೆ ಮತ್ತೆ ವಾದಿಸುತ್ತಿರುವ ವಿಷಯವೆಂದರೆ, ಕೃತಕವಾಗಿ ಎರೆಹುಳಗಳನ್ನು ಸಾಕುವುದಾಗಲೀ, ಗೊಬ್ಬರವನ್ನು ತಯಾರಿಸುವುದಾಗಲೀ ಎಂದೂ ಮುಖ್ಯವಲ್ಲ. ಸ್ವಾಭಾವಿಕವಾಗಿ ಅವು ಎಲ್ಲೆಲ್ಲೂ ಸಮೃದ್ಧಿಸುವ ವಾತಾವರಣ ಸೃಷ್ಟಿಸುವುದು ಅತಿ ಮುಖ್ಯ. ಇದಕ್ಕಾಗಿ ಸಾವಯವ ವಸ್ತುಗಳನ್ನು ಉತ್ಪಾದಿಸುವ ಕಾಡು, ಕಳೆ ಬೆಳೆಸುವುದು, ಆ ಮೂಲಕ ನೆರಳು, ತೇವಾಂಶ ಕಾಪಾಡುವುದು ಮುಖ್ಯ. ನಮಗೆ ಕೃಷಿ ಮಾಡಲೇ ಸಮಯ ಇಲ್ಲ. ಇನ್ನು ಕಾಡು ಬೆಳೆಸುವುದು ಎಲ್ಲಿಂದ ಎಂದು ವಾದಿಸುವವರಿದ್ದಾರೆ. ಇದು ಹೇಗಿದೆಯೆಂದರೆ ಒಂದನೇ ತರಗತಿ ಪಾಸು ಮಾಡಲಾಗದವನು ಹತ್ತನೇ ತರಗತಿಯ ಪರೀಕ್ಷೆಗೆ ಬರೆದಂತೆ! ಆದರೂ ಪಾಸಾಗುತ್ತಿದ್ದೇವಲ್ಲಾ — ಈಗಿನ ಕೃಷಿಯಲ್ಲೂ ಹಣ ಮಾಡುತ್ತಿದ್ದೇವಲ್ಲ ಎಂದು ಮರುವಾದ ಮಾಡಬಹುದು. ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಅಭ್ಯಾಸಮಾಡಿ ೩೫ ಮಾರ್ಕಿಗೆ ಬೇಕಾಗುವಷ್ಟು ಉರು ಹೊಡೆದು (ಹಿಂದೆಯೂ ಗೊತ್ತಿಲ್ಲ, ಮುಂದೆಯೂ

ಗೊತ್ತಿಲ್ಲ.) ಪಾಸಾಗುವುದರಿಂದ ಏನು ಉಪಯೋಗ? ಲಕ್ಷಗಟ್ಟಲೆಯಲ್ಲಿ ನಿರುದ್ಯೋಗ ಸಮಸ್ಯೆಯನ್ನು ಸೃಷ್ಟಿಸುವ ಇಂದಿನ ಮರ್ಜಿಯೇ ಕೃಷಿಗೂ ಬಂದಿದೆ. ಕಾಡು ಬೆಳೆಸುವುದು, ಎರೆಹುಳು ಸಮೃದ್ಧಿಸುವುದು ಕೃಷಿಯ ಒಂದನೇ ತರಗತಿ. ಆದರೆ ಇಂದು ಇದು ಮಾಡದೆ ಲಾಭಗಳಿಸುವ, ಕೃಷಿ ಮಾಡುವ, ಹತ್ತನೇ ತರಗತಿಗೆ ನಾವು ನೆಗೆದಿದ್ದೇವೆ. ನಮ್ಮ ವಿದ್ಯಾಭ್ಯಾಸ ಪದ್ಧತಿ, ಕೃಷಿ ಪದ್ಧತಿಗಳು ನಿರುದ್ಯೋಗವನ್ನು ಗಂಭೀರ ಪ್ರಶ್ನಾಬದ್ಧತೆಯನ್ನು ಉಂಟು ಮಾಡಿದೆ. ಉರುಹೊಡೆದು ಪಾಸಾದವನು ಯಾರಾದರೂ ಕೊಡುವ ಕಾರಕೂನ ಕೆಲಸವನ್ನಲ್ಲದೆ ಸ್ವಂತವಾಗಿ ಬೇರೇನನ್ನು ಮಾಡಲಾರ. ಹಾಗೆಯೇ ಕಾಡು—ಎರೆಹುಳಗಳಿಲ್ಲದ ಜಮೀನುಗಳಲ್ಲಿ ಬೇರೆಲ್ಲಿಂದಲಾದರೂ ಗೊಬ್ಬರ ತಂದು ಕೊಡದೆ ಏನೂ ಬೆಳೆಯಲಾರದು. ಕೊನೆಗೊಮ್ಮೆ ಏನು ಕೊಟ್ಟರೂ ಏನೂ ಬೆಳೆಯಲಾರದ ಸ್ಥಿತಿ ಬರುವುದು. ಅಷ್ಟಕ್ಕೂ ಇದೇ ರೀತಿ ಮುಂದುವರಿದರೆ ಕೊಡುವಂಥಾ ಗೊಬ್ಬರ ಬೇರೆಲ್ಲಿ ಇರುವುದು?

ಈಗ ಮತ್ತೆ ಎರೆಹುಳು ಸಾಕಣೆಯ ವಿಷಯಕ್ಕೆ ಬರೋಣ. ಒಂದಡಿಯ ತಟ್ಟೆಯಲ್ಲಿ ನಾವು ಬಿಟ್ಟ ನೂರು ಹುಳಗಳು ಕೆಲವೇ ತಿಂಗಳುಗಳಲ್ಲಿ (ಹುಳಗಳ ವಯಸ್ಸಿನ ಮೇಲೆ) ಸಾವಿರವಾಗಿ ವೃದ್ಧಿಸಬಹುದು. ಇಂಥಾ ಸಾಂದ್ರತೆಯಲ್ಲಿ ನಾವು ಕೊಟ್ಟ ೪ ಇಂಚು ದಪ್ಪದ ಆಹಾರ (ತ್ಯಾಜ್ಯ) ಎಂದರೆ ಸುಮಾರು ೧೦ ಕಿಲೋಗ್ರಾಂ, ಸುಮಾರು ೫೦ ದಿನಗಳಲ್ಲಿ ಪೂರ್ತಿ ಹಿಕ್ಕೆಯಾಗಿ ಮಾರ್ಪಡುತ್ತದೆ. ಈ ಹಿಕ್ಕೆಯನ್ನು ಮೃದುವಾಗಿ ರಾಶಿಮಾಡಿ ಹೊರಕ್ಕೆತ್ತಿಕೊಂಡು ನಮ್ಮ ಗಿಡಗಳಿಗೆ ಉಪಯೋಗಿಸಬಹುದು. ಕುಂಡದ ಗಿಡಗಳಿಗಾದರೆ ಒಂದು ಬೊಗಸೆ ಕೊಡಬಹುದು. ನೆಲದ ಗಿಡಗಳಿಗೆ ಮೂರುಬೊಗಸೆ ಸಾಕು. ತೆಂಗಿನ ಮರಕ್ಕೆ ೩ ಬಾಣಲೆ ಎಂದರೆ ಸುಮಾರು ೪೦ ಕಿಲೋಗ್ರಾಂ ತನಕ ಕೊಡಬಹುದು. ಗೊಬ್ಬರ ಎತ್ತುವಾಗ ಸಾಧಾರಣವಾಗಿ ಹುಳಗಳು ಬರುವುದಿಲ್ಲ. ನಾವು ಕೈ ಆಡಿಸುತ್ತಿದ್ದಂತೆ ಹುಳುಗಳೆಲ್ಲ ಅಡಿಯಲ್ಲಿ ನಾವು ಹಾಕಿರುವ ಕಸ ಮರಳಿನ ಮನೆಯೊಳಗೆ ರಕ್ಷಣೆ ಪಡೆಯುತ್ತವೆ. ಗೊಬ್ಬರವನ್ನು ಜರಡಿ ಹಿಡಿದು ಹುಳುಗಳನ್ನು ಪ್ರತ್ಯೇಕಿಸುವ ಬಗ್ಗೆ ತಜ್ಞರ ಲೇಖನಗಳಲ್ಲಿ ಉಲ್ಲೇಖಗಳಿವೆ. ಆದರೆ ಇದು ಅನಾವಶ್ಯಕ ಕೆಲಸ. ಯಾಕೆಂದರೆ ಸದಾ ಎರೆಹುಳು ಸಾಕುವ ಕೃತಕತೆಯೇ ನಮ್ಮ ಗುರಿಯಲ್ಲ. ಉಳುಮೆ ಮಾಡದ, ಗೊಬ್ಬರಹಾಕದ, ನೀರುಕೊಡದ, ಎಲ್ಲೆಲ್ಲೂ ಎರೆಹುಳ ಹೆಚ್ಚಿದ ಸ್ವಯಂಚಾಲಿತ ಕೃಷಿ ನಮ್ಮ ಗುರಿ. ಈ ಕುರಿತಾಗಿ ಪ್ರಾರಂಭವನ್ನು ಮಾಡಿದ ನಮ್ಮ ತೋಟಕ್ಕೆ ನಮ್ಮ ಎರೆಗೊಬ್ಬರದಲ್ಲಿ ಬರುವ ಒಂದಷ್ಟು ಎರೆಹುಳುಗಳು ಹೆಚ್ಚುವರಿ ಕೃಷಿ ಕಾರ್ಮಿಕರಾಗುವುವು.

ರಾಶಿಮಾಡಿ ಗೊಬ್ಬರವನ್ನು ತೆಗೆದ ಮೇಲೆ ಮತ್ತೆ ಹೊಸತಾಗಿ ತ್ಯಾಜ್ಯ ಮಿಶ್ರಣವನ್ನು ಕೊಡಬೇಕು. ಈ ರೀತಿ ಪ್ರತಿ ೫೦ ದಿನಗಳಿಗೊಂದಾವರ್ತಿಯಂತೆ ಎರಡು-ಮೂರು ವರ್ಷಗಳ ಕಾಲ ಕೊಡುಕೊಳ್ಳುವ ಕ್ರಿಯೆ ನಡೆಸಬಹುದು. ಈ ಹಂತದಲ್ಲಿ ಅಡಿಯಲ್ಲಿ ಹಾಕಿದ ಕಸ, ಮರಳಿನ ಮೂಲ ಮನೆಯೂ ಗೊಬ್ಬರವೇ ಆಗಿ

ಮಾರ್ಪಡುತ್ತದೆ. ನಾವು ಮೇಲು ಗೊಬ್ಬರವನ್ನು ತೆಗೆದು ಹೊಸ ತ್ಯಾಜ್ಯ ಮಿಶ್ರಣವನ್ನು ಕೊಡುವ ಸಂಧಿಕಾಲದಲ್ಲಿ ಈ ಮೂಲ ಮನೆಯು ಈಗ ಎರೆಹುಳಗಳಿಗೆ ವಾಸಯೋಗ್ಯವಾಗಿ ಇರುವುದಿಲ್ಲ. ಆದ್ದರಿಂದ ಎಲ್ಲವನ್ನು ಈ ಸಾರಿ ಸುರಿದು ಗೊಬ್ಬರವಾಗಿಯೇ ಉಪಯೋಗಿಸಿಕೊಳ್ಳಬೇಕು. ಹಳೆತಟ್ಟೆಯಲ್ಲಿ ಹೊಸಮನೆ ಕಟ್ಟಬೇಕು. ಗೊಬ್ಬರದಿಂದ ಸಾಕಷ್ಟು ಸಣ್ಣ ಹಾಗೂ ಯುವ್ವನ ಭರಿತ ಹುಳಗಳನ್ನು (ಮುದಿ ಬೇಡ) ಆಯ್ದು ಹಾಕಬೇಕು. ಉಳಿದ ಹುಳುಗಳು ಗೊಬ್ಬರದ ಜೊತೆಗೆ ತೋಟ ಸೇರಲಿ, ಹೀಗೆ ಪ್ರಕೃತಿಯ ಕ್ರಿಯೆಗೆ ಪೂರಕವಾಗಿ ನಮ್ಮ ಯಾವತ್ತು ಯೋಜನೆಗಳಿರಬೇಕು.

## ೨. ತೊಟ್ಟಿ ವಿಧಾನ

ಇದು ಮೊದಲು ಹೇಳಿದ ತಟ್ಟೆ ವಿಧಾನದ ವಿಸ್ತ್ರತರೂಪ. ಹಿಂದಿನದು ಒಂದಡಿಯಿಂದ ಎರಡಡಿವರೆಗಿನ ಪಾತ್ರೆಯಾದರೆ, ಇಲ್ಲಿ ನಾವು ಇಟ್ಟಿಗೆ ಸಿಮೆಂಟ್ ಉಪಯೋಗಿಸಿ ನಮ್ಮ ಜಾಗಕ್ಕೆ ಅನುಗುಣವಾಗಿ ದೊಡ್ಡ ತೊಟ್ಟಿಗಳನ್ನು ಕಟ್ಟಬಹುದು. ನಮ್ಮ ಮನೆಯ ಹಿಂಭಾಗ, ಹಟ್ಟಿ, ಕೊಟ್ಟಿಗೆಗಳ ಕರೆ ಹೀಗೆ. ಒಟ್ಟಿನಲ್ಲಿ ಮಾಡುಬೇಕು (ನೆರಳುಬೇಕು) ಮಳೆನೀರು ಬೀಳದಿರಬೇಕು ತಟ್ಟೆಗಳು ಪಟ್ಟಣಿಗರ ಮೂಲ ವಿಧಾನವಾದರೆ, ತೊಟ್ಟಿಗಳು ಸಾಕಷ್ಟು ಕಸಕಡ್ಡಿ, ದನಕರುಗಳುಳ್ಳ ಹಳ್ಳಿಗರ ಮೂಲವಿಧಾನ. ಇದು ಸದಾ ಕಾವು ಸಂಗ್ರಹ. ಸಾಧಾರಣವಾಗಿ ತೊಟ್ಟಿ ಮೂರು ಅಡಿಗಿಂತ ದೊಡ್ಡದಿರಲಿ–ನಾಲ್ಕಡಿ ಅಗಲ, ಹತ್ತಡಿ ಉದ್ದ, ಒಂದೂವರೆ ಅಡಿ ಎತ್ತರ ಅತ್ಯಂತ ಮಾದರಿಯ ಗಾತ್ರವಾದೀತು. (ಹೇಳಿಕೊಟ್ಟ ವಿದ್ಯೆ, ಕಟ್ಟಿಕೊಟ್ಟ ಬುತ್ತಿ ಎಲ್ಲಿಯವರೆಗೆ? ಈ ಗಾದೆ ಸದಾ ನಮ್ಮ ಜ್ಞಾಪಕದಲ್ಲಿರಬೇಕು.) ಒಂಟಿ ಇಟ್ಟಿಗೆಯ ಗೋಡೆ ಕಟ್ಟಿ, ತಳಕ್ಕೆ ತೆಳ್ಳಗೆ ಕಾಂಕ್ರೀಟ್ ಹಾಕಿ ಗೋಡೆಗೆ ಮಾತ್ರ ಸಾರಣೆ ಮಾಡಿದರೆ ಸಾಕು. ಸುತ್ತ ನೀರು ಕಟ್ಟುವಂತೆ ಇನ್ನೊಂದು ಸುತ್ತು ಗೋಡೆಯನ್ನು ಬೇಕಾದರೆ ರಚಿಸಬಹುದು. ಇದರಿಂದ ಒಳಗೆ ಪ್ರವೇಶಿಸುವ ಇರುವೆ ಉರಿಗಳನ್ನು ನಿವಾರಿಸಬಹುದು. ಕೆಂಪಿರುವೆ (ಕೆಂಜುಗ, ಉರಿ) ಗಳು ಮಣ್ಣಿನ ಒಳಹೊಕ್ಕು ಎರೆಹುಳಗಳನ್ನು ಘಾಸಿಮಾಡುವುದಿಲ್ಲ. ಸಾಲು ಹಿಡಿದು ಬರುವ ಸಣ್ಣ ಮಣ್ಣರುವೆಗಳು ಇವಕ್ಕೆ ತೊಂದರೆಕೊಡಬಲ್ಲುವು. ಇವನ್ನು ಬೂದಿ, ಸೀಮೆಣ್ಣೆ, ಅರಿಸಿನಪುಡಿ ಲಕ್ಷ್ಮಣರೇಖೆ ಇತ್ಯಾದಿ ಉಪಯೋಗಿಸಿಯೂ ಹತೋಟಿಯಲ್ಲಿಡಬಹುದು.

ಉಳ್ಳವರು ಶಿವಾಲಯುವ ಕಟ್ಟುವರು, ನಾನೇನ ಮಾಡಲಿ—ಬಡವನಯ್ಯಾ. ಇಂಥವರು ಅಚ್ಚುಕಟ್ಟಾದ ಸಿಮೆಂಟ್ ತೊಟ್ಟಿಯೇ ಕಟ್ಟಬೇಕೆಂದೇನೂ ಇಲ್ಲ. ಮಣ್ಣಿನಲ್ಲಿ ಒಂದಡಿ ತೋಡಿ ಆ ಮಣ್ಣನ್ನು ಮೇಲೆ ಮಟ್ಟವಾಗಿ ಹರಡಿದಾಗ ಒಂದೂವರೆ ಅಡಿ ಆಳ ಸಿಗುತ್ತದೆ. ಮತ್ತೆ ಗುಂಡಿ ಪೂರ್ತಿ ಮುಚ್ಚುವಂತೆ ಪ್ಲಾಸ್ಟಿಕ್ ಹಾಳೆಯನ್ನು ಹಾಸಿಬಿಟ್ಟು ಎರೆಹುಳ ಕೃಷಿ ಪ್ರಾರಂಭಿಸಬಹುದು.

ಈ ನಮ್ಮ ತೊಟ್ಟಿಗಳು ಸಾಕಷ್ಟು ದೊಡ್ಡವಿವೆ. ಸಾಕಷ್ಟು ಹಿಡಿಸಿವೆ. ಹಾಗಾಗಿ ಇದರೊಳಗೆ ಮೂಲ ಮನೆಯಾಗಿ ಸಾಕಷ್ಟು

ಪದರಗಳನ್ನು ಕೊಡಬಹುದು. ೧) ಕಸ, ೨) ಮರಳು, ೩) ಕೆಮ್ಮಣ್ಣು ಎಲ್ಲವೂ ಮೂರು ಇಂಚು ದಪ್ಪ. ಆ ಮೇಲೆ ನಾಲ್ಕನೇ ಪದರವೇ ನಮ್ಮ ಎರೆಹುಳಗಳಿಗೆ ಆಹಾರ. ಮೊದಲೇ ಹೇಳಿದಂತೆ ಆಹಾರವಾಗಿ ಸಾವಯವವಾದ ಏನೂ ಆಗಬಹುದು. ತೆಂಗಿನಗರಿ, ಅಡಿಕೆಸೋಗೆ, ಬಾಳೆದಿಂಡು, ಹುಲ್ಲು, ಸೊಪ್ಪು, ತರಗೆಲೆ ಹೀಗೆ ಯಾವುದೂ ಆಗಬಹುದು. ಇದು ಪ್ರಯೋಗ ಪರಿಸರವಾದ್ದರಿಂದ ತೆಂಗಿನ ಗರಿಯನ್ನು ಕತ್ತರಿಸಿ ಉಪಯೋಗಿಸುವುದು ಉತ್ತಮ. ಸಗಣಿಯ ಸಾಂದ್ರತೆ ಚೆನ್ನಾಗಿರುವುದೂ ಮುಖ್ಯ. ಸಗಣಿಯನ್ನು ಕಸದ ಮೇಲೆ ಹರಡಿ ನೀರು ಚಿಮುಕಿಸಬಹುದು. ಸಗಣಿಯನ್ನೇ ನೀರು ಮಾಡಿ ಸುರಿದರೆ ಇನ್ನೂ ಉತ್ತಮವೇ ಇರುವುದು. ಗೊಬ್ಬರ ಅನಿಲ ಸ್ಥಾವರದ ಬಗ್ಗಡವನ್ನು ಉಪಯೋಗಿಸಬಹುದು. ನಾಲ್ಕಡಿ, ಹತ್ತಡಿ ಗಾತ್ರದ ಈ ತೊಟ್ಟಿಗೆ ನೂರರಿಂದ ಸಾವಿರ ಹುಳಗಳನ್ನು ಬಿಡಬಹುದು. ಟ್ರೇಯಲ್ಲಿ ಸಾಕಿದ ಹುಳಗಳಿದ್ದರೆ ಒಂದು ಟ್ರೇಯನ್ನು ನೇರವಾಗಿ ಇದಕ್ಕೆ ಬಗ್ಗಿಸಿಬಿಡಬಹುದು. ಸುಮಾರು ಆರು ತಿಂಗಳಲ್ಲಿ ಇಲ್ಲಿ ಎರಡು ಲಕ್ಷಕ್ಕೂ ಮಿಕ್ಕ ಹುಳುಗಳಾಗುತ್ತವೆ ಎಂದು ಸ್ಥೂಲವಾಗಿ ಲೆಕ್ಕಾಚಾರ ಮಾಡಬಹುದು. ಆ ಮೇಲೆ ಪ್ರತಿ ಐವತ್ತು ದಿನಗಳಿಗೊಮ್ಮೆ ಮೇಲಿಂದ ಗೊಬ್ಬರತೆಗೆದು ಹೊಸಕಸ ಸಗಣಿ ಹಾಕಬಹುದು. ನಿರ್ವಹಣಾ ವಿಧಾನಗಳೆಲ್ಲವೂ ಮೊದಲಿನ ಹಾಗೆಯೇ.

ಇರುವೆ, ಕಪ್ಪೆ, ಹಕ್ಕಿ, ಇಲಿ....ಹೀಗೆ ಎರೆಹುಳಕ್ಕೆ ವೈರಿಗಳಿವೆ ಎಂದು ಹೇಳುವವರಿದ್ದಾರೆ. ಆದರೆ ಎಲ್ಲರನ್ನೂ, ಎಲ್ಲವನ್ನೂ ವೈರಿಗಳೆಂದು ಕಾಣುವ, ಕೊಲ್ಲುವ ರಾಸಾಯನಿಕ ವಿಧಾನದ ಸೋಲಿನ ನಂತರ, ಅದರ ನೋವಿನ ನಂತರ ನಾವಿಂದು ಪರ್ಯಾಯವಾಗಿ ಎರೆಹುಳಗಳನ್ನು ಸಾಕಲು ಹೊರಟಿದ್ದೇವೆ, ಎಂಬುದನ್ನು ಮತ್ತೆ ಮತ್ತೆ ನೆನೆಯಬೇಕು. ಹಾಗಾಗಿ ಎಲ್ಲವನ್ನೂ ಹಿತಶತ್ರುಗಳೆಂದು ಕಂಡು ಆದಷ್ಟು ಕನಿಷ್ಠ ಪರಿಸರ ದೋಷಿಯಾಗುವಂತೆ ನಿರೋಧ ಮಾಡಬೇಕು. ಈ ವೈರಿಗಳು ತಿಂದರೂ ಧಾರಾಳವಾಗಿರುವಂತೆ ಎರೆಹುಳುಗಳಿಗೆ ಸಂತಾನೋತ್ಪನ್ನ ಶಕ್ತಿ ಇದೆ. ಅಷ್ಟಾಗಿ ತಲೆ ಬಿಸಿಮಾಡಬೇಕಾಗಿಲ್ಲ. ಎರೆಹುಳುಗಳನ್ನು ತಿಂದು ನಮ್ಮಲ್ಲಿ ಕಪ್ಪೆಗಳು ಹೆಚ್ಚುವುದಾದರೆ ಅದೊಂದು ವರವೆಂದು ನಾವು ಗ್ರಹಿಸಬೇಕು. ಕಪ್ಪೆಯೊಂದು ದಿನವಹಿ ನೂರು ಕೀಟಗಳನ್ನು ತಿನ್ನಬಲ್ಲುದಂತೆ. ಇಂಥ ಕೀಟನಿಯಂತ್ರಕ ಪಡೆ ನಮ್ಮ ತೋಟದಲ್ಲಿ ನಿರ್ಮಾಣವಾಗುವುದಾದರೆ ನಾವು ಹರ್ಷಿಸಬೇಕು. ಹಾಗಲ್ಲದೆ ಎರೆಹುಳು ತಿನ್ನುವ ಕಪ್ಪೆಗಳೂ ಮತ್ತೆ ಹಿಕ್ಕೆ ಇಕ್ಕುವುದು — ಗೊಬ್ಬರವಾಗುವುದು — ನಮ್ಮ ತೋಟಕ್ಕೇ ತಾನೆ.

### ೩. ತಿಪ್ಪೆ ವಿಧಾನ

ಮೊದಲಿನ ಎರಡು ವಿಧಾನಗಳಲ್ಲಿ ಎರೆಹುಳುಗಳು ನಮ್ಮ ಜೊತೆಗೆ ನಮ್ಮ ಮನೆ ಸೂರಿನಡಿ ಬೆಳೆಯುತ್ತವೆ. ಹಾಗಾಗಿ ಎರೆಹುಳಗಳು ನಮ್ಮ ಸಂಗಾತಿಗಳು. ಆದರೆ ಇನ್ನು ಹೇಳುವ ವಿಧಾನಗಳಲ್ಲಿ ಎರೆಹುಳಗಳು ನಮ್ಮಿಂದ ದೂರವಿರುತ್ತವೆ. ಹಾಗೂ ನೀರು, ನೆರಳು, ಆಹಾರಗಳ ಆದರ್ಶ ನಿರ್ವಹಣೆ ಇರುವುದಿಲ್ಲ. ನಾಲ್ಕಡಿ ಉದ್ದ, ಹತ್ತಡಿ

ಅಗಲ, ಎರಡಡಿ ಆಳದ ಗುಂಡಿಗಳನ್ನು ಅನುಕೂಲ ಸ್ಥಳದಲ್ಲಿ ಮಾಡಬೇಕು. ಈ ಗುಂಡಿಗಳು ನೀರು ನಿಲ್ಲದ ಬೋರೆಯಲ್ಲಿರಲಿ. ಆದರೆ ನೆನಳಿರುವ ಮರದ ಅಡಿಯಲ್ಲಾಗ ಬೇಕು. ನೀರು ಹೆಚ್ಚಾದರೂ ಕಮ್ಮಿ ಯಾದರೂ ಎರೆಹುಳುಗಳು ಬದುಕಲಾರವು. ಬಿಸಿಲಲ್ಲೂ ಉಳಿಯಲಾರವು. ಗುಂಡಿ ಯೊಳಗೆ ತೆಂಗಿನ ಗರಿ, ಸಿಪ್ಪೆ ಹೀಗೆ ಯಾವುದೇ ಕಸವನ್ನು ಕತ್ತರಿಸದೆ ತುಂಬ ಬಹುದು. ಮರಳು, ಮಣ್ಣಿನ ಮೂಲ ಮನೆಯು ಅಗತ್ಯವಿಲ್ಲ. ಒಂದು ಪದರ ಕಸ ಅದರ ಮೇಲೆ ಸಗಣಿ ರಸ. ಹೀಗೆ ಹಲವು ಪದರಗಳಲ್ಲಿ ತುಂಬಿದರೆ ಬ್ಯಾಕ್ಟೀರಿಯಾ ಕ್ರಿಯೆಗೂ, ಎರೆಹುಳ ಕ್ರಿಯೆಗೂ ಉತ್ತಮ. ಗುಂಡಿ ಪೂರ್ತಿ ತುಂಬಿದ ಮೇಲೆ ಯಥಾನುಶಕ್ತಿ ಎರೆಹುಳಗಳನ್ನು ಬಿಡ ಬಹುದು. (ಗುಂಡಿಯ ಮೇಲೆ ಎರಡಡಿ ಬಂದರೂ ತೊಂದರೆ ಇಲ್ಲ. ಕೆಲವೇ ದಿನಗಳಲ್ಲಿ ಅದು ಕುಸಿದು ಮಟ್ಟವಾಗುತ್ತದೆ) ನಮ್ಮ ಮೂಲ ವಿಧಾನಗಳಾದ ತಟ್ಟೆ, ತೊಟ್ಟಿ ಗಳಲ್ಲಿ ಕಾಯ್ದಿಟ್ಟ ಹುಳುಗಳನ್ನು ಈಗ ಉಪಯೋಗಿಸಬಹುದು. ಕಸದ ತೇವಾಂಶ ಕಾಯುವುದು ಆ ಮೇಲಿನ ಕೆಲಸ. ಹುಲ್ಲು ಕಸ, ಗೋಣಿತಾಟಿನ ಮೇಲ್ಪದರ ಕೊಡು ವುದರಿಂದ ನೆರಳು, ತೇವಾಂಶಗಳೆರಡನ್ನೂ ಕೊಟ್ಟಂತಾಗುವುದು. ತಿಪ್ಪೆಯ ಮೇಲ್ಪದರ ಗೊಬ್ಬರವಾಗುತ್ತಿರುವಂತೆ ಸ್ವಲ್ಪಸ್ವಲ್ಪ ವಾಗಿ ಒಟ್ಟಾಗಿಯೂ ಎತ್ತಬಹುದು. ತಿಪ್ಪೆ ಪೂರ್ತಿ ತಯಾರಾದ ಮೇಲೆ ಒಟ್ಟಾಗಿಯೂ ಎತ್ತಬಹುದು. ಈ ವಿಧಾನದಲ್ಲಿ ಹಲವು ಪ್ರತಿಕೂಲಗಳಿರುವುದರಿಂದ ನಮ್ಮಲ್ಲಿ ತೊಟ್ಟಿಯ ಎರೆಹುಳು ಸಂಗ್ರಹವಿರಬೇಕು ಎಂದು ಮೊದಲೇ ಹೇಳಿರುವುದು. ಹೊಸ ಹೊಸ ತಿಪ್ಪೆ ತಯಾರಾದಂತೆ ನಮ್ಮ ಹಳೇ ತೊಟ್ಟಿಯಿಂದ ಹುಳುಗಳನ್ನು ಆಯ್ದು ತಂದು ಇಲ್ಲಿ ಬಿಡಬಹುದು. ಪ್ರತಿ ಎಕರೆಗೆ ಒಂದು–ಎರಡು ತಿಪ್ಪೆಗಳನ್ನು ಮಾಡಿ, ಪ್ರತಿ ಎಕರೆಯಲ್ಲೂ ಸಾಕಷ್ಟು ಸಾವಯವ ಪದಾರ್ಥಗಳನ್ನು ಸೃಷ್ಟಿಸಿ ಬ್ಯಾಕ್ಟೀರಿಯಾ ಗಳ ಸಹಾಯಕ್ಕೆ ಎರೆಹುಳುಗಳನ್ನು ಬಿಡುವುದರಿಂದ ಸ್ವಾವಲಂಬನೆಯನ್ನೂ ಸುಸ್ಥಿರತೆಯನ್ನೂ ಸಾಧಿಸಲು ಸುಲಭ ವಾಗುವುದು.

### ೪. ರಾಶಿ ವಿಧಾನ

ಮಳೆ ಹೆಚ್ಚಾಗಿರುವಲ್ಲಿ, ತುಂತುರು ನೀರಾವರಿ ಕೊಡುವ ತೋಟಗಳಗಳಲ್ಲಿ ತಿಪ್ಪೆ ವಿಧಾನ ಅಷ್ಟಾಗಿ ಸೂಕ್ತವಲ್ಲ. ನೀರು ಹೆಚ್ಚಾಗುವ ದೆಸೆಯಿಂದ ಇಲ್ಲಿ ಎರೆಹುಳ ಗಳು ಉಳಿಯುವುದಿಲ್ಲ. ಬ್ಯಾಕ್ಟೀರಿಯಾ ಕ್ರಿಯೆಯೂ ನಡೆಯುವುದಿಲ್ಲ. ಹಾಗಾಗಿ ತಿಪ್ಪೆಗುಂಡಿಯ ಬದಲಿಗೆ ಅದೇ ಕ್ರಮದಲ್ಲಿ ರಾಶಿ ಹಾಕಬೇಕು. ಎಲ್ಲಾ ಕ್ರಮವೂ ಮೊದಲಿನ ಹಾಗೆ. ಆದರೆ ಗುಂಡಿ ಇಲ್ಲ. ಮರದಡಿಯಲ್ಲಿ ಕಸ, ಸಗಣಿಯ ಪದರ ಗಳನ್ನು ನಾಲ್ಕಡಿ ಎತ್ತರಕ್ಕೆ ಹಾಕಬಹುದು. ಇಲ್ಲಿ ತೇವಾಂಶ ಕಾಯ್ದುಕೊಳ್ಳಲು ಹೆಚ್ಚು ನೀರು ಬೇಕು. ಆದರೆ ಗೊಬ್ಬರ ಚೆನ್ನಾಗಿ ಆಗುವುದು. ತೆಂಗಿನ ಗರಿ, ಹುಲ್ಲು ಹಾಸು ಗಳಿಂದ ತಾತ್ಕಾಲಿಕ ಚಪ್ಪರ ಮಾಡಿದರೆ ಹೆಚ್ಚಿನ ಯಶಸ್ಸು ಬರುವುದು.

### ೫. ಮರ ಮರ ವಿಧಾನ

ನಮ್ಮ ತೋಟದಲ್ಲಿ ತೆಂಗು, ಅಡಿಕೆ ಮೊದಲಾದ ಬೆಳೆಗಳ ತ್ಯಾಜ್ಯಗಳು ಇರು

ತ್ತವೆ. ಇನ್ನು ಪೂರ್ವಯೋಜಿತವಾಗಿ ಕತ್ತರಿಸಬಲ್ಲ ಬೇಕಾದಷ್ಟು ಕಾಡು, ಮರ, ಗಿಡ, ಪೊದೆಗಳನ್ನು ಬೆಳೆಸಿದ್ದೇವೆ. ಹಾಗಾಗಿ ಎರೆಹುಳ ಸಾಕಲು, ಸ್ವಂತ ಗೊಬ್ಬರ ತಯಾರಿಸಲು ಬೇಕಾದಷ್ಟು ಅವಕಾಶಗಳಿವೆ. ಆದರೆ ಈ ಎಲ್ಲಾ ಗರಿಗಳನ್ನೂ, ಕಸಗಳನ್ನು ತೋಟದಿಂದ ಎತ್ತಿ ನಮ್ಮ ತಿಪ್ಪೆಗೆ, ಇಲ್ಲಾ ರಾಶಿಗೆ ತರಬೇಕು. ಅಲ್ಲಿ ಅವನ್ನೆಲ್ಲಾ ಜೋಡಿಸಬೇಕು. ಸಗಣಿ ಸುರಿಯಬೇಕು. ಎರೆಹುಳು ಬಿಟ್ಟು, ನೀರುಕೊಟ್ಟು ಗೊಬ್ಬರ ತಯಾರಾದ ಮೇಲೆ ಮತ್ತೆ ಈ ಗೊಬ್ಬರ ವನ್ನು ಮರಮರಗಳ ಬುಡಕ್ಕೆ ಹೊತ್ತು ಕೊಂಡು ಹೋಗಬೇಕು. ಎಂದರೆ ಒಮ್ಮೆ ಮರದ ಬುಡದಿಂದ ತಿಪ್ಪೆಗೆ ಮತ್ತೆ ತಿಪ್ಪೆ ಯಿಂದ ಮರದ ಬುಡಕ್ಕೆ. ಹಾಗಾಗಿ ಎರಡು ಸಾಗಾಣಿಕೆ ನಿರ್ವಹಣೆ. ಇದರ ಬದಲಿಗೆ ಪ್ರತಿಯೊಂದು ಮರಮರದ ಬುಡವೂ ಒಂದೊಂದು ಎರೆಹುಳ ಕಾರ್ಖಾನೆ ಯಾದರೆ ?

ಎಲ್ಲಾ ಕಸವನ್ನೂ ಹಸುರನ್ನೂ ನಮ್ಮ ಉದ್ದೇಶಿತ ಫಸಲು ಮರಗಳ ಬುಡಕ್ಕೆ ಕತ್ತರಿಸಿ ಹಾಕಬೇಕು. ಅಲ್ಲಿಗೇ ಸಗಣಿ ಯನ್ನೂ ಸುರಿಯಬೇಕು. ಸಾಧ್ಯವಾದರೆ ಹೆಚ್ಚುವರಿಯಾಗಿ ಎರೆಹುಳ ಬಿಡಬಹುದು. ಹಾಗಲ್ಲವಾದರೂ ಭೂಮಿಯಲ್ಲಿ ಅಳಿದು ಉಳಿದಿರುವ ಎರೆಹುಳುಗಳು ಅಲ್ಲಿ ಅವಾಗಿ ಹೆಚ್ಚುತ್ತವೆ. ನೀರಾವರಿ ಹೇಗೂ ಮಾಡಲೇ ಬೇಕಲ್ಲ. ನೀರಾವರಿ ಸೌಲಭ್ಯ ಸೀಮಿತವಿದ್ದರೂ ಈ ರೀತಿಯ ಮರಮರದ ಮುಚ್ಚಿಗೆಯಿಂದ ಲಭ್ಯ ನೀರಿನ ಸಮರ್ಥ ಬಳಕೆಯಾಗುತ್ತದೆ. ಮಣ್ಣಿನ ತೇವಾಂಶ ಹಿಡಿದಿಡುವ ಶಕ್ತಿ ಹೆಚ್ಚುತ್ತದೆ. ಅಲ್ಲಿ ಕಳೆಯಿಂದ ಕಳೆ ನಾಶ ವಾಗುವುದು. ಅಲ್ಲಿನ ಉಷ್ಣಾಂಶ ತಗ್ಗು ವುದು. ಅಲ್ಲಿನ ಸಾವಯವಾಂಶ ಹೆಚ್ಚಿ ಎರೆಹುಳ ಕೆಲಸ ಮಾಡಿದಂತೆಲ್ಲಾ ನೇರ ಬೇರಿಗೆ ಅಚ್ಚ ಗೊಬ್ಬರ ಸಿಕ್ಕಿದಂತಾಗುವುದು. ಎರೆಹುಳಗಳ ನೇರ ಚಟುವಟಿಕೆಯಿಂದ ಭೂಮಿ ಹೆಚ್ಚು ನುಸುಲಾಗುವುದು. ಎಲ್ಲಾ ನಮ್ಮ ಶ್ರಮ. ಸಮಯ ಖರ್ಚು ಉಳಿಯುವುದು.

ತೋಟದ ಬದಲಿಗೆ ಒಣಭೂಮಿ ಕೃಷಿ ಯಾದರೆ, ಆಹಾರ ಧಾನ್ಯಗಳ ಬೆಳೆಯಾದರೆ ಮರಮರ ವಿಧಾನದ ಸಾಧ್ಯತೆ ಇರುವುದಿಲ್ಲ. ಗುಂಡಿ ಅಥವಾ ರಾಶಿ ಪದ್ಧತಿಯೇ ಆಗ ಬೇಕು. ಪ್ರತಿ ಎಕರೆಯನ್ನೂ ಗಡಿ ಮಾಡಿ ಕೊಂಡು ಒಂದಷ್ಟು ದೊಡ್ಡ ಸಣ್ಣ ಮರ ಗಳನ್ನು ಬೆಳೆಸಬೇಕು. ಹಣ್ಣು ಕೊಡುವ ಹತ್ತು ಮರಗಳಾದರೆ, ಸೊಪ್ಪು ಕೊಡುವ ನಲ್ವತ್ತು ಮರಗಳನ್ನು ನೆಡಬಹುದು. ಇವನ್ನು ಚಿಗುರುವ ಸಾಮರ್ಥ್ಯದ ಮೇಲೆ ವರ್ಷಕ್ಕೆ ಎರಡು, ಮೂರು ಬಾರಿ ಸವರಿ ತಿಪ್ಪೆ, ರಾಶಿ ವಿಧಾನಗಳಲ್ಲಿ ಎರೆಗೊಬ್ಬರ ಮಾಡುತ್ತಾ ಭೂಮಿಗೆ ಎರಚುತ್ತಾ ಭೂ ಶಕ್ತಿಯನ್ನು ಹೆಚ್ಚಿಸಬೇಕು. ಸವರಿದ ಮರಗಳು ಸಾಗುವಳಿಗೆ ಉಪದ್ರವಾಗು ವುದಿಲ್ಲ.

ನಾವು ಹಲವು ತಪ್ಪುಗಳನ್ನು ಮಾಡಿ ದ್ದೇವೆ. ಅವನ್ನು ತಿದ್ದಲು ಸದ್ಯಕ್ಕೆ ಎರೆ ಹುಳು ಸಾಕಣೆಯ ಎಲ್ಲಾ ಹಂತಗಳೂ ಬೇಕಾಗಬಹುದು. ಆದರೆ ಕೊನೆಯ ಹಂತ ತೋಟದ (ಜಮೀನಿನ) ಇಂಚಿಂಚೂ ಎರೆ ಹುಳ ಇರುವಂಥಾ ಸ್ಥಿತಿ. ಈ ಸ್ಥಿತಿಯ ಕಡೆಗೆ ನಾವು ಸ್ವಲ್ಪ ಸ್ವಲ್ಪವಾದರೂ ಸಾಗಿ

ದಾಗಲೇ, ಹಸುರು ಬಂದಾಗಲೇ ನಮ್ಮ ಹೊಟ್ಟೆಲು ಹಸನಾಗುವುದು. ತೂಗುವ ಹಗ್ಗ ಶಾಶತ್ವಾಗುವುದು. ಇದಕ್ಕಾಗಿ ನಮ್ಮ ನಾಡೆಲ್ಲವೂ ಕಾಡಾಗಬೇಕು. ಸಮರ್ಥವಾಗಿ ನಿರ್ವಹಿಸಿದ ಕಾಡಾಗಬೇಕು. ಕೃಷಿಯಲ್ಲಿ ಕಾಡು ಕೂಡಿ ಬರಬೇಕು. ಗರಿಷ್ಠತಮ ಮಿಶ್ರ ಬೆಳೆಗಳು ಹೊಂದಿ ಬರಬೇಕು. ಎರೆಗೊಬ್ಬರವೂ ಒಳಗೊಂಡಂತೆ ಯಾವುದೇ ಗೊಬ್ಬರ. ಖರೀದಿಯ ಭ್ರಮೆ ತೊಲಗಬೇಕು.



ದೊಡ್ಡವರ ಜೀವನವನ್ನು ನೋಡಿ, ನಮ್ಮ ಜೀವನವನ್ನು ಉತ್ತಮ ಪಡಿಸಿಕೊಳ್ಳಬೇಕು.

—ಲಾಂಗ್‌ಫೆಲೋ

ವಿಚಾರ ಇಲ್ಲದೆ ಮಾಡುವ ಕಾನೂನು, ಅರ್ಥವಿಲ್ಲದೆ ಹೇಳುವ ವೇದಾಂತ, ತಿಳಿವಳಿಕೆ ಇಲ್ಲದೆ ನಡೆಸುವ ಆಡಳಿತ ಇವು ಎಂದಿಗೂ ಯಶಸ್ವಿಯಾಗುವುದಿಲ್ಲ.

—ವಾಲ್ಟ್ ವಿಟ್‌ಮನ್

ಮನಸ್ಸಿನಲ್ಲಿ, ಮಾತಿನಲ್ಲಿ, ಕೆಲಸದಲ್ಲಿ ಯಾರನ್ನೂ ನೋಯಿಸದಿರುವುದು; ಎಲ್ಲರನ್ನೂ ಪ್ರೀತಿಸುವುದು; ಎಲ್ಲರಿಗೂ ಒಳ್ಳೆಯದನ್ನು ಬಯಸುವುದು—ಇದೇ ಅಹಿಂಸಾ ಧರ್ಮ.

—ಮಹಾತ್ಮ ಗಾಂಧೀಜಿ

# ದನದ ಮಾಂಸ ತಂದ ದುರಂತ

ಶ್ರೀಪಾದ ಭಟ್

ನಮ್ಮ ಪರಂಪರೆಯಲ್ಲಿ ಹಸುವಿಗೆ ಪೂಜ್ಯ ಸ್ಥಾನವನ್ನು ನೀಡಿದ್ದೇವೆ. ಹಸುವಿಗೆ ಅಪಚಾರ ಮಾಡುವುದು ೩೩ ಕೋಟಿ ದೇವತೆಗಳಿಗೆ ಮಾಡುವ ಅಪಚಾರ ಎಂದೇ ತಿಳಿಯಲಾಗಿದೆ. ಹಸುವಿನ ಪ್ರಯೋಜನ ವನ್ನು ತಿಳಿದೇ ಅದನ್ನು 'ಕಾಮಧೇನು' ಎಂತಲೂ ಕರೆಯಲಾಗಿದೆ. ಹಸುವಿನ ಉಪಯುಕ್ತತೆಯನ್ನು ಗಮನಿಸಿ ಮನುಷ್ಯ ತನ್ನನ್ನೇ ತಾನು ನೋಡಿಕೊಳ್ಳುವಂತೆ 'ನೀನಾರಿಗಾದೆಯೋ ಎಲೆಮಾನವಾ' ಎಂದು ಕವಿವಾಣಿ ಹಾಡಿದೆ. ಜನಪದ ಸಾಹಿತ್ಯದಲ್ಲೂ ದನಕರುಗಳ ಬಗ್ಗೆ ಅಪ್ರತಿಮ ಪ್ರೀತಿಯನ್ನು ಕಾಣಬಹುದು.

ಯುರೋಪ್ ದೇಶದಲ್ಲಿ ದನಕರುಗಳು ಕೇವಲ ಆಹಾರ ಮತ್ತು ವಾಣಿಜ್ಯ ಮೂಲ ಗಳು. ನಮ್ಮಂತೆ ಭಾವನಾತ್ಮಕ ಸಂಬಂಧ ವನ್ನು ಅವರು ಬೆಳೆಸಿಕೊಂಡಿಲ್ಲ. ಹೈನಿನ ಅಭಾವ ಕಂಡುಬಂದಾಗ ಎಪ್ಪತ್ತರ ದಶಕ ದಲ್ಲಿ ಭಾರತ 'ಆಪರೇಷನ್ ಫ್ಲಡ್' ಕಾರ್ಯ ಕ್ರಮವನ್ನು ಹಮ್ಮಿಕೊಂಡಿತು. ಇಂದು ನಮ್ಮಲ್ಲಿ ಸುಮಾರು ೨೭.೨ ಕೋಟಿ ಪಶು ಗಳಿವೆ. ಇದರಲ್ಲಿ ಶೇಕಡಾ ೫೫ರಷ್ಟು ಹೈನಿನ ಮೂಲ ಎಮ್ಮೆಗಳಿಂದ ಬರುತ್ತದೆ. ಇದರಿಂದ ಪ್ರಪಂಚದಲ್ಲಿ ಹೈನುಗಾರಿಕೆಯಲ್ಲಿ ಭಾರತ ಪ್ರಥಮ ಸ್ಥಾನವನ್ನು ಪಡೆದುಕೊಂಡಿದೆ. ಯುರೋಪ್ ದೇಶಗಳಲ್ಲಿ ಹೈನುಗಾರಿಕೆ ಗಿಂತ ಬೇಡಿಕೆ ಇರುವುದು ಹೈನು ಪಶುಗಳ ಮಾಂಸಕ್ಕಾಗಿ. ಎಂಬತ್ತರ ದಶಕದಲ್ಲಿ ಯುರೋಪ್ ಖಂಡದಲ್ಲಿ ದನದ ಮಾಂಸಕ್ಕೆ ತೀವ್ರ ಬೇಡಿಕೆ ಬಂದಾಗ ಕೆಲವು ಸಂಶೋಧ ಕರು ಹಾಗೂ ಕೈಗಾರಿಕೋದ್ಯಮಿಗಳು ವ್ಯಾಪಾರೀ ದೃಷ್ಟಿಯಿಂದ ಇದಕ್ಕೊಂದು ಪರಿಹಾರವನ್ನು ಕಂಡುಹಿಡಿದರು. ಕುರಿ ಮತ್ತು ದನಗಳ ತ್ಯಾಜ್ಯವಸ್ತು ಹಾಗೂ ಮೂಳೆ ಪುಡಿಯಿಂದ ತಯಾರಿಸಿದ ಒಂದು ಬಗೆಯ 'ಪಶು ಆಹಾರ' ದನಗಳಿಗೆ ಶ್ರೇಷ್ಠ ವೆಂದೂ ಇದರಿಂದ ಹಾಲಿನ ಉತ್ಪಾದನೆಗೆ ಪೂರಕವಾಗಿ ಅವುಗಳ ಮಾಂಸವೂ ಹೇರಳ ವಾಗಿ ದೊರೆಯುತ್ತದೆಂದೂ ಕಂಡು ಕೊಂಡರು. ಸಸ್ಯಾಹಾರಿ ಪ್ರಾಣಿಯಾಗಿದ್ದ ಹಸುವನ್ನು ಹಾಗೂ ಇತರೆ ದನಕರು ಗಳನ್ನು ಮಾಂಸಾಹಾರಿಗಳಾಗಿ ಪರಿವರ್ತಿಸ ಲಾಯಿತು. ಇದರ ಪರಿಣಾಮ ಅತಿರೇಕಕ್ಕೆ ಕಾರಣವಾಗುತ್ತದೆಂದು ವಿಜ್ಞಾನಿಗಳು

---

೧೯೯೬ ಏಪ್ರಿಲ್ ೮ರ 'ನ್ಯೂಸ್‌ವೀಕ್' ವಾರಪತ್ರಿಕೆಯ ಸ್ಕಾಟ್ ಸುಲ್ಲಿವಾನ್ ಮತ್ತು ವಿಲಿಯಂ ಅಂಡರ್‌ಹಿಲ್ ಅವರ "ಎನಿಥಿಂಗ್ ಬಟ್ ಬೀಫ್" ಎಂಬ ಲೇಖನ ಆಧಾರಿತ.

ಆಗಲೇ ಎಚ್ಚರಿಸಿದ್ದರೂ ಕೈಗಾರಿಕೋದ್ಯಮಿಗಳ ಹಾಗೂ ರಾಜಕೀಯ ಮುಖಂಡರುಗಳ 'ಒಳವ್ಯವಹಾರ'ದ ಪರಿಣಾಮದಿಂದ ವಿಜ್ಞಾನಿಗಳ ಎಚ್ಚರಿಕೆಗೆ ಬೆಲೆಯಿಲ್ಲವಾಯಿತು.

ಹಾಲಿನ ಮತ್ತು ಮಾಂಸದ ಉತ್ಪಾದನೆಯಲ್ಲಿ ಗಮನಾರ್ಹ ಏರಿಕೆ ಕಂಡುಬಂದದ್ದು ಸಂಶೋಧಕರ ಹಾಗೂ ಕೈಗಾರಿಕೋದ್ಯಮಿಗಳ ಮಾತನ್ನು ಜನಸಾಮಾನ್ಯರು ಬೆಂಬಲಿಸುವಂತಾಯಿತು. ಈಗ ಅದೇ ಜನಸಾಮಾನ್ಯರು ಸಂಶೋಧಕರನ್ನು ಹಾಗೂ ಕೈಗಾರಿಕೋದ್ಯಮದವರನ್ನು ಶಪಿಸುವಂತಾಗಿದೆ. ಸಾಲದ್ದಕ್ಕೆ ಜನಸಾಮಾನ್ಯರು ಸಿ.ಜೆ.ಡಿ.[1] (ಕ್ರುಜ್‌ಫೆಲ್ಡ್-ಜಾಕೋಬ್ ಡಿಸೀಸ್) ಎಂಬ ಅತ್ಯಂತ ಕ್ರೂರ ರೋಗಕ್ಕೆ ಬಲಿಯಾಗುತ್ತಿದ್ದಾರೆ. ಈಗಾಗಲೆ ಇಂಥ 'ಪಶು ಆಹಾರ'ವನ್ನು ನಿಷೇಧಿಸಲಾಗಿದೆ. ಆದರೆ ಪರಿಣಾಮ ತನ್ನ ಕೆಲಸವನ್ನು ಶುರು ಮಾಡಿಬಿಟ್ಟಿದೆ. ಬುದ್ಧಿಯ ಸ್ಥಿತಿಯನ್ನು ಕೆಡಿಸಿ ಸಾಯಿಸುವ ಅಪರೂಪದ ಸಿ.ಜೆ.ಡಿ ರೋಗದಿಂದ ೧೦ ಜನ ಸಾವಿಗೀಡಾಗಿರುವ, ಆಗುತ್ತಿರುವ ವಿಚಾರದಲ್ಲಿ ವಿಜ್ಞಾನಿಗಳು ಖಚಿತ ಅಭಿಪ್ರಾಯ ತಾಳಿದ್ದಾರೆ. ಈ ದುರ್ಗತಿ ಸೋಂಕಿಗೊಳಗಾದ 'ಉನ್ಮತ್ತ ಹಸು' ಕಾಯಿಲೆಯಿಂದ (ಮ್ಯಾಡ್ ಕೌ ಡಿಸೀಸ್) ಬಂದಿರಬಹುದೆಂದು ಅವರು ಶಂಕಿಸುತ್ತಾರೆ. ಈ ಕಾರಣದಿಂದ ೧೯೮೫ರಿಂದಲೂ ಬಿ. ಎಸ್. ಇ. (ಬೊವೈನ್ ಸ್ಪಾಂಜಿಫಾರ್ಮ್ ಎನ್‌ಸೆಫಾಲೋಪತಿ)[2] ರೋಗದ ಕಾರಣದಿಂದ ದಾಖಲಾದ ೧,೬೦,೦೦೦ ವರದಿಗಳು ಬ್ರಿಟನ್ ದೇಶವನ್ನು ಇನ್ನೂ ಭೀತಿಗೊಳಪಡಿಸಿದೆ. ಯೂರೋಪಿಯನ್ನರಿಗೂ ಇದು ಹರಡಿದೆ. ೧೯೯೫ರ ಒಂದೇ ವರ್ಷದಲ್ಲಿ ಬ್ರಿಟನ್ನಿನಿಂದ ರಫ್ತಾಗುವ ಅರ್ಧ ಭಾಗಕ್ಕಿಂತ ಹೆಚ್ಚು, ಅಂದರೆ ಸುಮಾರು ೨,೫೦,೦೦೦ ಮೆಟ್ರಿಕ್ ಟನ್ನುಗಳಷ್ಟು ದನದ ಮಾಂಸವನ್ನು ಅವರು ಬಳಸಿದ್ದಾರೆ. ವಿಶ್ವ ಆರೋಗ್ಯ ಸಂಸ್ಥೆ ಕಳೆದ ಏಪ್ರಿಲ್‌ನಲ್ಲಿ ಈ ಬಗ್ಗೆ ಸಮಾಲೋಚನೆಯನ್ನು ನಡೆಸಿದೆ. ಯೂರೋಪ್ ಸರಕಾರೀ ಒಕ್ಕೂಟಗಳು ಸಭೆಯನ್ನು ನಡೆಸಿವೆ. ರೋಗದ ಬಗೆಗಿನ ವರದಿಯನ್ನು ಯೂರೋಪ್ ಮುಖಂಡರು "ಸಮೂಹ ಸನ್ನಿ" ಎಂದೂ ಇದಕ್ಕೆ ವೈಜ್ಞಾನಿಕ ಆಧಾರವಿಲ್ಲವೆಂದೂ ವ್ಯಾಖ್ಯಾನಿಸಿ, ಮಾಂಸ ಉತ್ಪಾದನ ಘಟಕಗಳ 'ಉಳಿವಿ'ಗಾಗಿ ಪ್ರಯತ್ನಿಸಿದ್ದಾರೆ. ಉನ್ಮತ್ತ ಹಸು ಕಾಯಿಲೆಯು ಮನುಷ್ಯರಿಗೆ ಸೋಂಕುವ ಬಗ್ಗೆ ವೈಜ್ಞಾನಿಕ ತಳಹದಿ ಇಲ್ಲವೆಂದು ಫ್ರಾನ್ಸ್‌ನ ಅಧ್ಯಕ್ಷ ಜಾಕ್ವೆಸ್ ಚಿರಾಗ್ ಹೇಳಿದ್ದಾರೆ. ಆದರೆ ವಸ್ತುಸ್ಥಿತಿ ಬೇರೆಯೆ ಇದೆ.

ಕೆಲವು ಪ್ರಜ್ಞಾವಂತರಾದವರು ಮುಖಂಡರುಗಳ ಹೇಳಿಕೆಯನ್ನು "ಜನ

[1] ಸುಮಾರು [illegible] ವರ್ಷಗಳ ಹಿಂದೆ ಜರ್ಮನಿಯ ಹಾನ್ಸ್ ಕ್ರುಜ್‌ಫೆಲ್ಡ್ ಮತ್ತು ಅಲ್ಫೋನ್ಸ್ ಜಾಕೋಬ್ ಎಂಬ ವಿಜ್ಞಾನಿಗಳು ಈ ರೋಗವನ್ನು ಕಂಡು ಹಿಡಿದರು. ಅವರ ಹೆಸರನ್ನೇ ರೋಗಕ್ಕೆ ಇಡಲಾಗಿದೆ.

[2] ದನಗಳಿಗೆ ಬರುವ ಒಂದು ಬಗೆಯ ಮಿದುಳು ರೋಗ. ಬೆನ್ನುಹುರಿಯಿಂದ ಮಿದುಳವರೆಗಿನ ಶಕ್ತಿಯನ್ನು ರೋಗಾಣು ಹೀರುತ್ತದೆ. ಇದರಿಂದ ದನಗಳು ತ್ರಾಣವಿಲ್ಲದೆ ಕುಸಿದು ನೊರೆ ಕಾರುತ್ತಾ, ಒದ್ದಾಡಿ ಸಾಯುತ್ತವೆ.

ಸಾಮಾನ್ಯರಿಗಾಗಿ ಅಲ್ಲ, ಶ್ರೀಮಂತ ತೆರಿಗೆದಾರರ ನಷ್ಟವನ್ನು ತಪ್ಪಿಸುವುದಕ್ಕಾಗಿ" ಎಂದು ಅರ್ಥೈಸಿದ್ದಾರೆ. ಬ್ರಿಟನ್ ದೇಶದ ಪಶುಪಾಲಕರ ಹಾಗೂ ಮಾಂಸ ಉತ್ಪಾದಕರ ನಷ್ಟದ ಪರಿಹಾರಕ್ಕಾಗಿ ಮತ್ತು ಅವರ ಸಂಕಷ್ಟಕ್ಕೀಡಾದ ಜೀವನ ಮಟ್ಟವನ್ನು ಸುಧಾರಿಸಲು ೨.೫ ಮಿಲಿಯನ್ ಡಾಲರುಗಳ ಮೊತ್ತವನ್ನು ಯೂರೋಪ್ ಒಕ್ಕೂಟಗಳ ಸಭೆ ಮೀಸಲಾಗಿಟ್ಟಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರಿಟಿಷ್ ದನದ ಮಾಂಸದ ಬೇಡಿಕೆ ಸೊನ್ನೆಗೆ ಇಳಿದಿದೆ. ಫ್ರಾನ್ಸ್, ಸ್ಪೇನ್, ನೆದರ್‌ಲ್ಯಾಂಡ್ ಮತ್ತು ಬೆಲ್ಜಿಯಂಗಳಲ್ಲಿ ದನದ ಮಾಂಸದ ಬೆಲೆ ಮೂರಕ್ಕೆ ಕುಸಿದರೆ, ಜರ್ಮನಿಯಲ್ಲಿ ಅದು ಶೇ. ೪೦ ಕ್ಕೆ ಧುಮುಕಿತು. ರೋಗದ ವರದಿಯಿಂದಾಗಿ ಎಂಬತ್ತರ ದಶಕದಿಂದ ಬ್ರಿಟನ್ ದನದ ಮಾಂಸ ಹಾಗೂ 'ಪಶು ಆಹಾರ'ವನ್ನು ಬಳಸುತ್ತ ಬಂದವರಿಗೆ ಭೀಕರ ಆತಂಕ ಕಾಡುತ್ತಿದೆ.

ಇತ್ತೀಚೆಗೆ ಯಾವುದೇ ಬಗೆಯ ಸಸ್ತನಿಗಳ ತ್ಯಾಜ್ಯವಸ್ತು ಹಾಗೂ ಮೂಳೆಪುಡಿಯಿಂದ ಕೂಡಿದ ಪಶು ಆಹಾರದ ಬಳಕೆ ಕಾನೂನು ಬಾಹಿರವೆಂಬಂಥ ತೀರ್ಮಾನವನ್ನು ಬ್ರಿಟನ್ ದೇಶವೇ ಕೈಗೊಂಡಿದೆ. ದೇಶದಲ್ಲಿನ ಉನ್ಮತ್ತ ಹಸು ಕಾಯಿಲೆಗೆ ಸ್ಕ್ರೇಪೀ ವೈರಸ್‌ಗಳಿಂದ ಮಿದುಳು ಜ್ವರ ಪಡೆದಿದ್ದ ಕುರಿಗಳ ತ್ಯಾಜ್ಯವಸ್ತುವಿನಿಂದ ತಯಾರಿಸಿದ ಪಶು ಆಹಾರವೇ ಕಾರಣವೆಂದು ತಿಳಿಯಲಾಗಿದೆ. ೧೯೮೮ ರಲ್ಲಿ ಇಂಥ ಪ್ರಯೋಗ ನಿಂತಿತು. ನಾಟಕೀಯವಾಗಿ ಬಿ.ಎಸ್.ಇ. ಕಣ್ಮರೆಯಾಯಿತು. ೧೯೯೪ ರಲ್ಲಿ ಒಂದು ತಿಂಗಳಿಗೆ ೨೦೦೦ ದಷ್ಟು ರೋಗವರದಿಗಳು ದಾಖಲಾಗುತ್ತಿದ್ದವು. ಈ ವರ್ಷದಲ್ಲಿ ಇದರ ದರ ತಿಂಗಳಿಗೆ ೩೦೦ರಷ್ಟಾಗಿದೆ. ಈ ಶತಮಾನದ ಭೀಕರ ರೋಗಗಳಾದ ಕಾಲರಾ, ಪ್ಲೇಗ್, ಕ್ಯಾನ್ಸರ್, ಇತ್ತೀಚಿನ ಏಡ್ಸ್‌ಗಿಂತ ಭೀಕರವಾದ ರೋಗ ಸಿ.ಜೆ.ಡಿ. ಎಂದು ಹೇಳಲಾಗಿದೆ. ಈ ಕಾರಣದಿಂದ ಬ್ರಿಟಿಷ್ ದನದ ಮಾಂಸ ಹಾಗೂ ಅದರ ಉಪ ಉತ್ಪನ್ನಗಳಾದ ಜೆಲಟಿನ್‌ನಿಂದ ಹಿಡಿದು ಶೃಂಗಾರ ಸಾಧನಗಳವರೆಗೆ ವಿಶ್ವದಾದ್ಯಂತ ಬಹಿಷ್ಕರಿಸಬೇಕೆಂದು ಯೂರೋಪ್ ಒಕ್ಕೂಟಗಳು ಹೇಳಿವೆ. ಬಹುಶಃ ಇಂಥ ಪರಿಣಾಮವನ್ನು ತಿಳಿದೇ ೧೯೮೯ರಲ್ಲಿ ಅಮೆರಿಕ ಮತ್ತು ೧೯೮೮ರಲ್ಲಿ ಆಸ್ಟ್ರೇಲಿಯಾ ದೇಶಗಳು ಬ್ರಿಟಿಷ್ ದನದ ಮಾಂಸದ ಮೇಲೆ ನಿಷೇಧ ವಿಧಿಸಿವೆ.

'ಉನ್ಮತ್ತ ಹಸು' ಕಾಯಿಲೆಯು ಹರಡಲು ಬ್ರಿಟಿಷರ ಉದಾಸೀನ ಕಾರಣವೆಂದು ಯೂರೋಪಿಯನ್ನರು ತಿಳಿದಿದ್ದಾರೆ. ಈ ರೋಗವನ್ನು ಬ್ರಿಟಿಷ್ ಸರಕಾರೀ ಯಂತ್ರ ನಿಭಾಯಿಸುವಲ್ಲಿ ಕಂಡುಬಂದ ಲೋಪಗಳನ್ನು ಕೃಷಿ ಹಾಗೂ ಸಾರ್ವಜನಿಕ ಆರೋಗ್ಯ ತಜ್ಞರು ಪತ್ತೆಮಾಡಿದ್ದಾರೆ. ರೋಗ ಸಂಬಂಧಿಯಾದ ಎಲ್ಲ ವರದಿಗಳು ಅಧಿಕಾರೀ ವರ್ಗಕ್ಕೆ ಬರಲು ಹಾಗೂ ಇದು "ಗುರುತರವಾದ" ಕಾಯಿಲೆ ಎಂದು ಘೋಷಿಸಲು ಮೊದಲನೆಯ ರೋಗ ವರದಿಬಂದ ೧೮ ತಿಂಗಳವರೆಗೆ ಸಂಬಂಧಪಟ್ಟವರು ಕಾದರು. ಮನುಷ್ಯ ಆಹಾರದಲ್ಲಿ ದನಗಳ ಮಿದುಳು ಹಾಗೂ ಬೆನ್ನುಹುರಿಗಳ ಬಳಕೆಯನ್ನು ನಿಷೇಧಿಸಲು ಅವರಿಗೆ ಸುಮಾರು ಮೂರು ವರ್ಷಗಳು ಬೇಕಾದವು. ಈಗೀಗ ಬಹಳಷ್ಟು ಅಮೆರಿಕನ್ನರಂತೆ ಯೂರೋಪಿ

ಯನ್ನರೂ ಕೂಡ ದನದ ಮಾಂಸದ ಬಳಕೆಯನ್ನು ಕಡಿಮೆಮಾಡುತ್ತಿದ್ದಾರೆ. ರೋಗದ ಭೀತಿ ಅವರ ಈ ಪ್ರವೃತ್ತಿಗೆ ಇನ್ನೂ ಪೋಷಕವಾಗುತ್ತಿದೆ.

ಯೂರೋಪಿಯನ್ನರ ನಿರೀಕ್ಷೆಗಿಂತ ಹೆಚ್ಚಾಗಿ ೫೦೦ರಷ್ಟು ರೋಗದ ವರದಿಗಳು ಈಗಿವೆ. ಬ್ರಿಟನ್ನಿನ ಕೃಷಿಕರು ಗಮನಾರ್ಹ ಪ್ರಮಾಣದ ದನಗಳನ್ನು ಅದರಲ್ಲೂ ವಿಶೇಷವಾಗಿ ಮುದಿ ಪ್ರಾಣಿಗಳನ್ನು ಸಾಯಿಸುತ್ತಾರೆ. ಇದು ಮಾಂಸದ ಕೊಳೆತಕ್ಕೆ ಕಾರಣವೆಂದು ಅವರು ತಿಳಿದಿದ್ದರು. ಬ್ರಿಟಿಷ್ ಸರಕಾರ ೪.೫ ದಶಲಕ್ಷ ದನಗಳ ನಾಶಕ್ಕಾಗಿ ಕ್ರಮವನ್ನು ಕೈಗೊಳ್ಳುವುದಾಗಿ ಹೇಳಿದೆ. ದೇಶದ ಸುಮಾರು ೧೨ ದಶಲಕ್ಷ (೧೨೦ ಲಕ್ಷ) ಹಸುಗಳನ್ನು ಹಾಗೂ ಇತರೆ ಹಾಲಿನ ಪ್ರಾಣಿಗಳನ್ನು ನಾಶಗೊಳಿಸುವ ಭೀಕರ ಯೋಜನೆಗೆ ಹೆಚ್ಚೂ ಕಡಿಮೆ ೧೦ ಬಿಲಿಯನ್ ಪೌಂಡುಗಳ ವೆಚ್ಚವಾಗಬಹುದೆಂದು ಕೆಲವು ಅಧಿಕಾರಿಗಳು ಹೇಳುತ್ತಿದ್ದಾರೆ. ಆದರೂ ಆ ಪ್ರಮಾಣದ ಕಳೇಬರಗಳನ್ನು ನಾಶಪಡಿಸುವುದು ಅಸಾಧಾರಣ ಕಾರ್ಯವೇ ಆಗುತ್ತದೆ. ನೆಲದಲ್ಲಿ ಹೂಳುವುದು ಕುಡಿಯುವ ನೀರಿನ ಸರಬರಾಜಿನಲ್ಲಿ ಮಾರಕ ರೋಗದ ಸಮಸ್ಯೆಗೆ ಕಾರಣವಾಗುತ್ತದೆ. ತೆರೆದಗಾಳಿಯ ಚಿತೆಯಲ್ಲಿ ಸುಟ್ಟರೆ ಎಲ್ಲ ರೋಗೋತ್ಪಾದಕ ಸೂಕ್ಷ್ಮಾಣುಗಳನ್ನು ನಾಶಗೊಳಿಸಲು ಅಗತ್ಯವಾದ ಉಷ್ಣತೆ ದೊರೆಯುವುದಿಲ್ಲ. ಉತ್ತಮ ವಿಧಾನವೆಂದರೆ ಚಿತಾಗಾರದಲ್ಲಿ ಸುಡುವುದಾಗಿದೆ. ಆದರೆ ಇಡೀ ಬ್ರಿಟನ್ನಿನಲ್ಲಿ ಕೇವಲ ೧೦ ಚಿತಾಗಾರಗಳು ಮಾತ್ರ ದನಗಳನ್ನು ಸಾಯಿಸಿ ದಹಿಸಲು ಪರವಾನಿಗೆ ಹೊಂದಿವೆ. ಒಂದು ಅಂದಾಜಿನಂತೆ ೧೨೦ ಲಕ್ಷ ದನಗಳನ್ನು ಈ ವಿಧದಲ್ಲಿ ನಾಶಗೊಳಿಸಲು ೭೦ ವರ್ಷಗಳೇ ಬೇಕಾಗುತ್ತದೆ.

ಇತ್ತೀಚಿನ ಒಂದು ವರದಿಯಲ್ಲಿ ಸಿ.ಜೆ.ಡಿಯ ಲಕ್ಷಣ ಕಂಡು ಬಂದಿದೆಯಂತೆ. ಇದರಿಂದ ರೋಗಕ್ಕೆ ಬಲಿಯಾಗಲಿರುವವರ ಶಂಕಿತ ಸಂಖ್ಯೆ ೧೫ಕ್ಕೇರಿದೆ. ಕೆಂಟ್‌ನ ಆಸ್ಪತ್ರೆಯೊಂದರಲ್ಲಿ ಫೆಬ್ರವರಿಯಲ್ಲಿ ೨೯ ವರ್ಷ ವಯಸ್ಸಿನ ಹೆಂಗಸೊಬ್ಬಳು ಸತ್ತಿದ್ದಾಳೆ. ಇದರ ಖಚಿತತೆಗೆ ಹೆಚ್ಚಿನ ತಪಾಸಣೆಯ ಅಗತ್ಯವಿದೆಯಂತೆ. ಸಿ.ಜೆ.ಡಿ ಸೋಂಕಿನ ವ್ಯಕ್ತಿ ತಿಂಗಳುಗಟ್ಟಲೆ ಖಿನ್ನತೆ-ಭ್ರಮಾಧೀನತೆಯಿಂದ ನರಳಿ ಸಾಯುತ್ತಾನೆ.

## ಅತಿಕ್ರೂರ ಹಂತಕ-ವೈಜ್ಞಾನಿಕ ರಹಸ್ಯ

(ಕ್ರುಜ್ ಫೆಲ್ಡ್-ಜಾಕೋಬ್ ರೋಗದ ಕಾರಣ ಯಾರಿಗೂ ತಿಳಿದಿಲ್ಲ).

ಬಹುತೇಕ ಕಾನೂನು ಕೇವಲ ಪುಸ್ತಕಗಳಲ್ಲೆ ಇರುವುದರಿಂದ ಯಾವುದೇ ಕಾರಣಕ್ಕೆ ಬದಲಾಗದ ಅನಿವಾರ್ಯ ರೋಗ ಮತ್ತು ಗುಣಕಾಣದ ಕ್ರುಜ್‌ಫೆಲ್ಡ್-ಜಾಕೋಬ್ ರೋಗದಿಂದ ಐವರು ಹಿರಿಯ ಅಮೆರಿಕನ್ನರು ಸಾಯಲಿದ್ದಾರೆ. ಜೊತೆಗೆ ಕಾಯಿಲೆಯ ಬಗ್ಗೆ ಏನೊಂದೂ ಪತ್ತೆಯಾಗದ ಬ್ರಿಟನ್ನಿನ ಹಿರಿಯನೊಬ್ಬ ಸಿ.ಜೆ ಡಿಯಿಂದ ಸಾಯಲಿದ್ದಾನೆ. ಸಿ.ಜೆ.ಡಿಯು ಪ್ರತೀವರ್ಷ ದಶಲಕ್ಷ ಜನರಲ್ಲಿ ಒಬ್ಬನಿಗೆ ತಗಲುತ್ತದೆ. ಹೀಗೆಯೆ ಬರುತ್ತದೆಂದು ಬಹುಕಾಲ ತಿಳಿದಿರಲು ಯಾವುದೇ ನಿದರ್ಶನಗಳಿಲ್ಲ. ಇವರಲ್ಲಿ ಯಾರೊಬ್ಬರಾದರೂ ಉನ್ಮತ್ತ ಹಸು

ರೋಗದಿಂದ ಜನ ಭೀತಿಗೊಳಗಾಗಿದ್ದಾರೆಂಬ ಬಗ್ಗೆ ಸೂಚನೆಯಾಗಬಹುದು.

ಕಳೆದ ಎರಡು ವರ್ಷಗಳಲ್ಲಿ ೧೧ ಶಂಕಿತ ಸಿ.ಜೆ.ಡಿಯ ಪ್ರಕರಣಗಳಿವೆ. ಆಹಾರ ಮತ್ತು ಔಷಧ ಆಡಳಿತ ಮಂಡಳಿ ಬ್ರಿಟನ್ನಿನಲ್ಲಿ ನಡೆಯುತ್ತಿರುವ 'ಉನ್ಮತ್ತ ಹಸು' ಕಾಯಿಲೆಗೆ ಕಾರಣವಾಗುವ ಕೆಲಸವನ್ನು ಹಾಗೂ ಹಸು ಮತ್ತು ಕುರಿಗಳ ತ್ಯಾಜ್ಯ ವಸ್ತುವಿನ ಆಹಾರವನ್ನು ದನಕರುಗಳಿಗೆ ತಿನ್ನಿಸುವುದನ್ನು ನಿಷೇಧಿಸಬೇಕೆಂದು ಅಮೇರಿಕಾದ ಕಾರ್ಯಕರ್ತರು ಮನವಿಯನ್ನು ಮುಂದಿಡುತ್ತಿದ್ದಾರೆ. "ಈ ಬಗೆಯ ಪ್ರಕ್ರಿಯೆಗಳು ಅಂತಿಮವಾಗಿ ನಮ್ಮನ್ನು ಸಂಕಷ್ಟಕ್ಕೀಡುಮಾಡುತ್ತವೆಂದು" ವಿಸ್ಕಾನ್ಸಿನ್ ವಿಶ್ವವಿದ್ಯಾನಿಲಯದ ರೋಗಾಣುತಜ್ಞ ರಿಚರ್ಡ್ ಮಾರ್ಷಲ್ ಎಚ್ಚರಿಸುತ್ತಾರೆ.

ಈಗಾಗಲೇ ಒಂದು ಪ್ರಕ್ರಿಯೆ ನಡೆದಿದೆ. ೧೯೬೩ ಮತ್ತು ೧೯೮೫ರ ನಡುವೆ ಮನುಷ್ಯ ಕಳೇಬರಗಳ ಪಿಟ್ಯುಟರಿ ಗ್ರಂಥಿಗಳಿಂದ ಪಡೆದ ಹಾರ್ಮೋನುಗಳನ್ನು ಅಭಿವೃದ್ಧಿ ಕುಂಠಿತವಾಗಿ ಸಂಕಟಕ್ಕೀಡಾಗಿದ್ದ ೮,೧೦೦ ಅಮೆರಿಕನ್ ಮಕ್ಕಳ ಬೆಳವಣಿಗೆಗಾಗಿ ಸೂಜಿಮದ್ದಿನ ಮೂಲಕ ನೀಡಲಾಯಿತು. ಅವರಲ್ಲಿ ಮೂವರು ಕ್ರುಟ್ಜ್‌ಫೆಲ್ಡ್–ಜಾಕೊಬ್‌ಗೆ ೧೯೮೫ರಲ್ಲಿ ಬಲಿಯಾದರು. ಒಂದು ಅಥವಾ ಹೆಚ್ಚಿನ ಪಿಟ್ಯುಟರಿಗಳನ್ನು ಸಿ.ಜೆ.ಡಿ. ರೋಗಿಗಳಿಂದ ಪಡೆದದ್ದಾಗಿರಬೇಕೆಂದು ಶಂಕಿಸಲಾಯಿತು. ಅನಂತರ ಎಫ್.ಡಿ.ಎ.ಯು ಬೆಳವಣಿಗೆ ಹಾರ್ಮೋನುಗಳ ಮೂಲವಾಗಿ ಕಳೇಬರಗಳ ಬಳಕೆಯನ್ನು ನಿಷೇಧಿಸಿತು. (ಈಗ ವಾಂಶಿಕವಾಗಿಯೇ ಹಾರ್ಮೋನುಗಳ ಸಂಶ್ಲೇಷಣೆ ನಡೆಯುತ್ತದೆ.) ಅಮೆರಿಕ ಸಂಸ್ಥಾನದ ಅಭಿವೃದ್ಧಿ ಕುಂಠಿತಗೊಂಡ ೧೫ ಜನ ರೋಗಿಗಳು ಹಾಗೂ ಹೊರಗಿನ ಇತರೆ ೮೦ ಜನ ಸಿ.ಜೆ.ಡಿ.ಯ ಸಂಪರ್ಕವನ್ನು ಸೋಂಕು ಕಳೇಬರಗಳಿಂದ ಪಡೆದುಕೊಂಡಿದ್ದಾಗಿದೆ.

ಉನ್ಮತ್ತ ಹಸುವಿನ ರೋಗ ಹಾಗೂ ಕ್ರುಟ್ಜ್‌ಫೆಲ್ಡ್–ಜಾಕೊಬ್ ಕಾಯಿಲೆಗಳಿಗೆ ಕಾರಣವೇನೆಂದು ತಿಳಿದರೆ, ಅವು ಸಂಪರ್ಕ ಪಡೆಯುವ ಬಗೆಗಿನ ಸಮಸ್ಯೆಯನ್ನು ವಿಜ್ಞಾನಿಗಳು ಯೋಗ್ಯವಾಗಿ ನಿರ್ಣಯಿಸಲು ಸಾಧ್ಯವಾಗುತ್ತದೆ. ಆದರೆ, ಯಾವುದೇ ರೋಗಾಣು (ವೈರಸ್)ವಾಗಲಿ ಅಥವಾ ಸೂಕ್ಷ್ಮಾಣು (ಬ್ಯಾಕ್ಟೀರಿಯಾ)ವಾಗಲಿ ರೋಗದೊಂದಿಗೆ ಸಂಬಂಧಪಡೆದಿಲ್ಲ. ಆದ್ದರಿಂದ ಪ್ರಿಯಾನ್ ಅಥವಾ ಸೋಂಕುಪಡೆದ ಪ್ರೋಟೀನುಗಳನ್ನು ಶಂಕಿಸಲಾಗಿದೆ. ೧೯೮೨ರಲ್ಲಿ ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದ ನರರೋಗ ಶಾಸ್ತ್ರಜ್ಞ ಸ್ಟಾನ್ಲಿ ಪ್ರುಸಿನರ್ ಮಂಡಿಸಿದ ಆಧುನಿಕ ಸಿದ್ಧಾಂತದ ಪ್ರಕಾರ ನರಕೋಶದ ಆರೋಗ್ಯಪೂರ್ಣ ಸಸಾರಜನಕ (ಪ್ರೋಟೀನ್)ಗಳ ಸುತ್ತ ತಾವೇ ಸುತ್ತಿಕೊಂಡು ದುರ್ಘಟನೆಗೆ ಕಾರಣವಾಗುವ ಸಣ್ಣ ಕಣ್ವ (ಮಾಲಿಕ್ಯೂಲ್ಸ್)ಗಳೇ ಪ್ರಿಯಾನ್‌ಗಳು. ಈ ಭಯಾನಕ ತಬ್ಬಿಕೊಳ್ಳುವಿಕೆ ಇನ್ನೂ ಹೆಚ್ಚಿನ ಆರೋಗ್ಯಪೂರ್ಣ ಸಸಾರಜನಕಗಳನ್ನು ದುಷ್ಟ ಪ್ರಿಯಾನ್‌ಗಳಾಗಿ ಪರಿವರ್ತಿಸುವಂತೆ ಮಾಡುತ್ತದೆ. ಕೆಲವೇ ಕೆಲವು ಆರೋಗವಂತ ಸಸಾರಜನಕಗಳನ್ನು ಬದಲಾಯಿಸುವವರೆಗೂ ಸಾಯಿಸುವ ಈ ಸರಣಿ ಕ್ರಿಯೆ ಮುಂದುವರೆಯುತ್ತದೆ. ಸಸಾರಜನಕಗಳ ಬದಲಾದ ಆಕಾರವು ಸಾಮಾನ್ಯವಾಗಿ ಅವು

ಗಳನ್ನು ಹಾಳುಗೆಡಹುವ ರಾಸಾಯನಿಕ ಕಿಣ್ವಗಳಿಂದ ಹಾನಿಯಾಗದಂತೆ ಮಾಡುತ್ತದೆ. ಅಂತಿಮವಾಗಿ ಕ್ರುಜ್‌ಫೆಲ್ಡ್–ಜಾಕೊಬ್‌ನ ರೋಗ ಲಕ್ಷಣದಂತೆ ಸಸಾರಜನಕಗಳು ಒಂದೆಡೆ ಒತ್ತೊತ್ತಾಗಿ ಸೇರಿಕೊಂಡು ಮಿದುಳಿನಲ್ಲಿ ತೂತುಗಳನ್ನುಂಟುಮಾಡುತ್ತವೆ. ಕೆಲವೊಮ್ಮೆ ಒಂದು ಮಿದುಳಿನಿಂದ ಇನ್ನೊಂದು ಜೀವಿಯ ಮಿದುಳಿಗೆ ಪ್ರಿಯಾನ್‌ಗಳು ಸೋಂಕನ್ನುಂಟುಮಾಡುತ್ತವೆ.

**ತಳಿಶಾಸ್ತ್ರ**

ವರ್ಷಕ್ಕೆ ೫,೦೦,೦೦೦ ಜನ ಗೋಮಾಂಸ ಭಕ್ಷಕರು ಸಿ.ಜೆ.ಡಿ ಸೋಂಕು ತಗುಲಿದ ಉನ್ಮತ್ತ ಹಸು ರೋಗದಿಂದ ಸಾಯುವ ಸಾಧ್ಯತೆ ಇದೆ ಎಂದು ಬ್ರಿಟಿಷ್ ಪತ್ರಿಕೆಗಳು ಭವಿಷ್ಯ ನುಡಿದಿದ್ದರೂ ಯಾವುದೇ ಬಗೆಯ ಮಿದುಳು–ಕೊಳೆತ ಜಾಡ್ಯವನ್ನು ಪಡೆದುಕೊಳ್ಳುವುದು ವಾಸ್ತವವಾಗಿ ಬಹಳ ಕಷ್ಟ.[8] ಒಂದು ಅಂಶವೆಂದರೆ, ನೀವು ವಾಂಶಿಕವಾಗಿ ಶಂಕಿತರಾಗಿರಬೇಕು. ಸಾವಿರಾರು ಜನ ಸೋಂಕಿನ ಹಾರ್ಮೋನು ಪಡೆದಿದ್ದರೂ ಅವರು ಸಿ. ಜೆ. ಡಿ ಯನ್ನು ಪಡೆದಿಲ್ಲ. ಒಂದು ನಿರ್ದಿಷ್ಟ ಬಗೆಯ ಮಿದುಳು–ಸಸಾರಜನಕಗಳು ಇರುವ ವಂಶವಾಹಿಯನ್ನು ಯಾರು ಹೊಂದಿರುತ್ತಾರೋ ಅಂಥವರಿಗೆ ಸಿ.ಜೆ.ಡಿ. ಸೋಂಕುವುದಿಲ್ಲ. ಯು.ಸಿ.ಎಸ್.ಎಫ್. ಸಂಸ್ಥೆಯ ಫ್ರೆಡ್ ಕೋಹೆನ್ ಕೂಡ ಮಿದುಳು ಸಸಾರಜನಕಗಳು ತಮಗೆ ಹೋಲಿಕೆಯಾಗುವಂತಿದ್ದರೆ ಮಾತ್ರ ಪ್ರಿಯಾನ್‌ಗಳು ಅವುಗಳನ್ನು ಪರಿವರ್ತಿಸಬಲ್ಲವು ಎಂದು ಎತ್ತಿಹೇಳುತ್ತಾರೆ. "ಮಾನವ ಮಿದುಳಿನ ಸಸಾರಜನಕಗಳು ಮತ್ತು ದನಗಳ ಪ್ರಿಯಾನ್‌ಗಳ ನಡುವಿನ ಹೋಲಿಕೆ ಚೆನ್ನಾಗಿ ಹೊಂದುವಂಥದ್ದಲ್ಲ." ಎನ್ನುತ್ತಾರೆ. ಬ್ರಿಟನ್ನಿನಲ್ಲಿ ೧೧ ಜನರನ್ನು ಕೊಲ್ಲುವಷ್ಟು ಅದು ಚೆನ್ನಾಗಿತ್ತೆ ಎಂಬುದು ಮಾತ್ರ ಪ್ರಶ್ನೆಯಾಗಿದೆ.

ನಿಸರ್ಗ ವಿರೋಧೀ ಕೃತ್ಯದಿಂದ 'ಏಡ್ಸ್' ನಂತಹ ಭಯಾನಕ ರೋಗವನ್ನು ಹೇರಿಕೊಂಡಿದ್ದ ಮನುಷ್ಯನಿಗೆ, ಅಪ್ಪಟ ಸಸ್ಯಾಹಾರಿ ಪ್ರಾಣಿಗಳನ್ನು ಹಿಂಬದಿಯ ದಾರಿಯಿಂದ ಮಾಂಸಾಹಾರಿ ಪ್ರಾಣಿಗಳನ್ನಾಗಿ ಬದಲಾಯಿಸಲು ಹೋದ ಇನ್ನೊಂದು ದುರಾಸೆಯ ನಿಸರ್ಗ ವಿರೋಧೀ ಪ್ರಕ್ರಿಯೆಯಿಂದ 'ಸಿ.ಜೆ.ಡಿ ಸೋಂಕಿನ ಉನ್ಮತ್ತ ಹಸು' ಕಾಯಿಲೆ ಮಾರಕವಾಗಿ ಅಪ್ಪಳಿಸಿದೆ. ಶಂಕಿತ ಲಕ್ಷಾತಿಲಕ್ಷ ಜನರ ಹಣೆಬರೆಹವನ್ನು ಕಾಲವೇ ಹೇಳಬೇಕು.

---

[8] ಮನುಷ್ಯ ದೇಹಕ್ಕೆ ಯಾವುದೇ ಬಗೆಯ ನಂಜೇರಿದರೂ ಕೂಡಲೆ ಅದಕ್ಕೆ ನಿರೋಧಕವನ್ನು ಮಿದುಳು ಸಂಶ್ಲೇಷಿಸುತ್ತದೆ. ಇದು ದೇಹಕ್ಕೆ ನಿಸರ್ಗದ ಕೊಡುಗೆ.

# ಜೀವ ಜಗತ್ತಿನ ದೈತ್ಯಪ್ರಾಣಿ—ಆನೆ

ಸಾತನೂರು ದೇವರಾಜ್

ದೈತ್ಯ ಮತ್ತು ಬಲಿಷ್ಠ ಪ್ರಾಣಿಗಳಲ್ಲಿ ಆನೆ ಒಂದು ಪ್ರಮುಖವಾದದ್ದು. ಇದರ ವಿಶಿಷ್ಟ ಗುಣಗಳಲ್ಲಿ ಮುಖ್ಯವಾದುವು ಗಾತ್ರ ಮತ್ತು ತೂಕ. ಆಗ ತಾನೇ ಜನಿಸಿದ ಆನೆಯ ಮರಿಯೊಂದು ೧೨೫ ಕೆ.ಜಿ. ಯಷ್ಟು ಇದ್ದು ಪ್ರೌಢಾವಸ್ಥೆ ತಲುಪುವುದರಲ್ಲಿ ಆರು ಟನ್ ತೂಗುತ್ತದೆ. ವಯಸ್ಸಾದಂತೆಲ್ಲಾ ಆನೆ ಎತ್ತರವಾಗಿ ಬೆಳೆಯುತ್ತದೆ: ೪೦ ವರ್ಷದ ಆನೆಯೊಂದು ಸುಮಾರು ೮ ಅಡಿ ೯ ಇಂಚಿನಷ್ಟು ಎತ್ತರ. ಹೆಣ್ಣು ಮತ್ತು ಗಂಡು ಆನೆಗಳು ಒಂದೇ ವೇಗದಲ್ಲಿ ಬೆಳೆಯುವಲ್ಲವಾಗಿದ್ದರೂ ಕೆಲ ವರ್ಷಗಳ ನಂತರ ಗಂಡು ಹೆಣ್ಣಿಗಿಂತ ದೊಡ್ಡದಾಗಿ ಬೆಳೆಯುತ್ತವೆ. ಸಾಮಾನ್ಯವಾಗಿ ಗಂಡು ಆನೆಗಳು ೫೦ ಮತ್ತು ಹೆಣ್ಣು ಆನೆಗಳು ೬೦ ವರ್ಷ ಬದುಕುತ್ತವೆ.

ಸೊಂಡಿಲು ಆನೆಯ ಮುಖ್ಯ ಆಯುಧ. ಇದು ಸಂಯುಕ್ತ ಸ್ನಾಯುಗಳಿಂದ ರಚಿತವಾಗಿರುವುದರಿಂದ ತನಗೆ ಅನುಕೂಲಕ್ಕೆ ತಕ್ಕಂತೆ ಆನೆ ಸೊಂಡಿಲನ್ನು ತಿರುಗಿಸಿಕೊಳ್ಳಬಲ್ಲದು. ಇದು ಸೂಕ್ಷ್ಮವಾಗಿದ್ದು ಮತ್ತು ಶಕ್ತಿಯುತವಾಗಿರುತ್ತದೆ. ಇದರ ಸಹಾಯದಿಂದ ದೈತ್ಯ ಮರವನ್ನು ಬುಡಮೇಲು ಮಾಡಬಹುದು ಇಲ್ಲವೇ ಮರದಿಂದ ಒಂದೇ ಒಂದು ಎಲೆಯನ್ನು ಮಾತ್ರ ಕೀಳಲೂ ಬಹುದು. ಈ ಉಪಯೋಗಗಳ ಜೊತೆಗೆ ಆನೆ ಸೊಂಡಿಲನ್ನು ಆಹಾರ ತಿನ್ನಲು, ನೀರು ಕುಡಿಯಲು, ಧೂಳು ಮೈಮೇಲೆಲ್ಲ ಎರಚಿಕೊಳ್ಳಲು ಮತ್ತೆ ಸ್ನಾನ ಮಾಡಲು ಬಳಸುತ್ತವೆ.

ಬಾಯಿಯ ಎರಡು ಕಡೆ ಇರುವ ಕೋರೆ ಹಲ್ಲುಗಳು ಇಲ್ಲವೇ ದಂತ ಅಮೂಲ್ಯವಸ್ತು. ಇದಕ್ಕಾಗಿ ಪ್ರತಿವರ್ಷ ಸಾವಿರಾರು ಆನೆಗಳು ಬಲಿಯಾಗುತ್ತಿವೆ. ಬಾಯಿಯ ಎರಡೂ ಕಡೆಯಿಂದಲೂ ಕೋರೆಹಲ್ಲುಗಳು (ದಂತ) ಹೊರಬಂದಿರುತ್ತವೆ. ಇವು ಸಾಮಾನ್ಯವಾಗಿ ಗಂಡು ಆನೆಗಳಲ್ಲಿ ಮಾತ್ರ ದೊಡ್ಡದಾಗಿ ಬೆಳೆಯುತ್ತವೆ. ದಂತಗಳು ವಕ್ರವಾಗಿರಬಹುದು ಇಲ್ಲವೇ ನೇರವಾಗಿರಬಹುದು. ವಿಶ್ವದಲ್ಲಿಯೇ ಅತಿ ದೊಡ್ಡದೆನ್ನಲಾದ ದಂತವೊಂದು ಬ್ರಿಟಿಷ್ ವಸ್ತುಸಂಗ್ರಹಾಲಯದಲ್ಲಿದೆ. ಇದು ೩೧೨ ಸೆಂ.ಮೀ. ಉದ್ದವಿದ್ದು ೧೦೨ ಕೆ.ಜಿ. ತೂಕವಿದೆ.

ದೈತ್ಯ ದೇಹಕ್ಕೆ ಆಧಾರ ಕೊಡುವುದಕ್ಕೇನೋ ಎನ್ನುವಂತೆ ಕಂಬದಾಕಾರದ ೪ ಕಾಲುಗಳಿವೆ. ಇವು ಶಕ್ತಿಯುತ ಮೂಳೆಗಳಿಂದ ರಚಿತವಾಗಿದ್ದು, ದೇಹ ಹೊರಲು ಆಧಾರಸ್ತಂಭವಾಗಿವೆ. ಕಾಲಿನಲ್ಲಿ ಮೆತ್ತಗಿರುವ ಪಾದಗಳಿವೆ. ಮೆತ್ತಗಿರುವ ಪಾದಗಳು

ಸಂಕುಚಿಸುವುದರ ಮುಖಾಂತರ ದೈತ್ಯ ದೇಹವನ್ನು ತಡೆದುಕೊಳ್ಳಬಲ್ಲವು. ಇವು ಗಂಭೀರವಾಗಿ ನಡೆಯಬಲ್ಲವವಾಗಿದ್ದು, ಮೊದಲು ಬಲಗಡೆ ಪಾದವನ್ನಿಟ್ಟು ಅನಂತರ ಎಡಗಡೆ ಪಾದವನ್ನಿಟ್ಟು ಮುಂದೆ ಚಲಿಸುತ್ತವೆ. ಬೆದರಿಕೆ ಉಂಟು ಮಾಡಿದಾಗ ಇಲ್ಲವೇ ಕೋಪ ಬಂದ ಸಂದರ್ಭಗಳಲ್ಲಿ ವೇಗವಾಗಿ ಚಲಿಸಿ, ಕಾಡಿನೊಳಕ್ಕೆ ನುಗ್ಗುತ್ತವೆ.

ಆಫ್ರಿಕಾ ಖಂಡದಲ್ಲಿ ಸುಮಾರು ೧.೩ ಮಿಲಿಯನ್ ಆನೆಗಳಿವೆ ಎಂದು ಅಂದಾಜು ಮಾಡಲಾಗಿದೆ. ೩೫ ರಿಂದ ೪೦ ಸಾವಿರ ಆನೆಗಳು ಏಷ್ಯಾ ಖಂಡದ ದೇಶಗಳಾದ ಇಂಡಿಯಾ, ಶ್ರೀಲಂಕಾ, ಬರ್ಮಾ, ಥೈಲ್ಯಾಂಡ್, ಮಲೇಷಾ ಮತ್ತು ಇಂಡೊನೇಷ್ಯಾಗಳಲ್ಲಿ ಕಂಡುಬರುತ್ತವೆ. ದಕ್ಷಿಣ ರಾಜ್ಯಗಳಾದ ಕರ್ನಾಟಕ, ಕೇರಳ ಮತ್ತು ತಮಿಳ್ನಾಡು ರಾಜ್ಯಗಳಲ್ಲಿ ಸುಮಾರು ೬ ಸಾವಿರ ಆನೆಗಳಿರಬಹುದೆಂದು ಅಂದಾಜು ಮಾಡಲಾಗಿದೆ.

ಆನೆಗಳು ವೈವಿಧ್ಯಮಯ ಪರಿಸರದಲ್ಲಿ ಜೀವಿಸುವುವು: ಶ್ರೀಲಂಕಾ ದೇಶದ ಸಮುದ್ರ ತೀರ ಪ್ರದೇಶದ ಕಾಡುಗಳಲ್ಲಿ, ಹಿಮಾಲಯ ಪರ್ವತದ ಮೂರು ಸಾವಿರ ಮೀಟರ್ ಎತ್ತರದ ಪ್ರದೇಶಗಳಲ್ಲಿ, ಮುಳ್ಳುಗಳಿಂದ ಕೂಡಿರುವ ಅರಣ್ಯಗಳಲ್ಲಿ ಅಲ್ಲದೇ ಎಲೆಗಳು ಉದುರುವ ಡೆಸಿಡೋಸ್ ಅರಣ್ಯಗಳೇ ಅಲ್ಲದೇ ತೇವಾಂಶದಿಂದ ಕೂಡಿರುವ ಕಾಡುಗಳಲ್ಲಿ ಕೂಡ.

ತಮ್ಮ ಜೀವಿತ ಅವಧಿಯ ಹೆಚ್ಚಿನ ವೇಳೆಯನ್ನು ಇವು ಆಹಾರ ತಿನ್ನುವುದರಲ್ಲಿ ಕಳೆಯುತ್ತವೆ. ಪ್ರಬುದ್ಧಮಾನಕ್ಕೆ ಬಂದಿರುವ ಸುಮಾರು ೪ ರಿಂದ ೫ ಟನ್ ತೂಕವುಳ್ಳ ಆನೆಯೊಂದು ಪ್ರತಿದಿನ ೨೫೦ ಕೆ. ಜಿ. ಆಹಾರವನ್ನು ಕಬಳಿಸುತ್ತದೆ. ಮತ್ತೆ ಪ್ರತಿನಿತ್ಯ ಸುಮಾರು ನೂರು ಲೀಟರ್ ನೀರನ್ನು ಕುಡಿಯುತ್ತದೆ. ಇವು ಒರಟು ಪ್ರಾಣಿಗಳಾಗಿದ್ದು ತಾವು ತಿನ್ನುವ ಆಹಾರಕ್ಕಿಂತ ಹೆಚ್ಚಿನ ಪ್ರಮಾಣದ ಆಹಾರವನ್ನು ನಾಶಪಡಿಸುತ್ತವೆ. ಹೆಚ್ಚಿನ ಪ್ರಮಾಣದ ಆಹಾರವನ್ನು ತಿನ್ನುವುದರಿಂದ ಆನೆಯ ದವಡೆಯ ಹಲ್ಲುಗಳು ಪುಡಿ ಪುಡಿಯಾಗಿ ಮುರಿದು ಹೋಗುತ್ತವೆ. ಒಂದು ಆನೆಯ ಜೀವಿತ ಅವಧಿಯಲ್ಲಿ ಸುಮಾರು ೬ ಬಾರಿ ಹಲ್ಲುಗಳು ಹೊಸದಾಗಿ ಬೆಳೆಯುತ್ತವೆ ಎಂದು ಅಧ್ಯಯನದಿಂದ ತಿಳಿದುಬಂದಿದೆ. ಆಹಾರಕ್ಕಾಗಿ ಆನೆ ಸುಮಾರು ೨೦೦ ರಿಂದ ೨೫೦ ಕಿ.ಮೀ. ದೂರ ಕ್ರಮಿಸಬಲ್ಲದು.

ದೇಹವನ್ನು ತಂಪುಗೊಳಿಸಲು ಸಹಾಯಕವಾಗುವುದಕ್ಕೆ ಎರಡು ಅಗಲವಾದ ಕಿವಿಗಳಿವೆ. ಏಷ್ಯಾ ಖಂಡದ ಆನೆಗಳ ಕಿವಿ ಆಫ್ರಿಕಾ ಖಂಡದ ಆನೆಗಳ ಕಿವಿಗಳಿಗಿಂತ ಚಿಕ್ಕವು. ದೇಹದ ಉಷ್ಣತೆ ಹೆಚ್ಚಾದಂತೆಲ್ಲ ಕಿವಿಗಳ ಬಡಿತದ ವೇಗವೂ ಜಾಸ್ತಿಯಾಗುತ್ತದೆ. ಮೈಮೇಲೆಲ್ಲ ನೀರನ್ನು ಎರಚಿಕೊಳ್ಳುವಿಕೆಯ ಮೂಲಕ ಆನೆಗಳು ತಮ್ಮ ದೇಹವನ್ನು ತಂಪುಗೊಳಿಸುತ್ತವೆ.

ಪ್ರಾಣಿ ಪ್ರಪಂಚದಲ್ಲಿಯ ಸೂಕ್ಷ್ಮಮತಿ ಹಾಗೂ ಬುದ್ಧಿವಂತ ಪ್ರಾಣಿಗಳಲ್ಲಿ ಆನೆ ಒಂದು ಪ್ರಮುಖವಾದ ಪ್ರಾಣಿಯಾಗಿದೆ. ಇವು ತಮ್ಮ ಅಭಿಪ್ರಾಯ,ಅಭಿರುಚಿಗಳನ್ನು ತಮ್ಮೊಳಗೆ ವಿನಿಮಯ ಮಾಡಿಕೊಳ್ಳಲು ಪಂಚೇಂದ್ರಿಯಗಳ ಮೊರೆಹೋಗುತ್ತವೆ. ತಮ್ಮ ಸೊಂಡಿಲುಗಳನ್ನು ಮತ್ತೊಂದು ಆನೆಯ ಸೊಂಡಿಲುಗಳಲ್ಲಿ ಸುತ್ತಿಕೊಳ್ಳು

ವುದು, ಬೇರೆಯ ಆನೆಯ ಬಾಯೊಳಕ್ಕೆ ತಮ್ಮ ಸೊಂಡಿಲುಗಳನ್ನು ಇರಿಸುವಿಕೆಯಿಂದ ಮತ್ತೆ ಹಣೆಯ ಮೇಲ್ಭಾಗದಲ್ಲಿ ಒತ್ತುವುದರ ಮೂಲಕ ತಮ್ಮ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳುತ್ತವೆ.

ಇವು ಸಂಘಜೀವಿಗಳಾಗಿದ್ದು ಒಟ್ಟಾಗಿ ಗುಂಪಿನಲ್ಲಿ ಜೀವಿಸುತ್ತವೆ. ಒಂದೊಂದು ಗುಂಪಿನಲ್ಲೂ ಅನೇಕ ಆನೆಗಳಿರುತ್ತವೆ. ಹೆಣ್ಣು ಆನೆಯೇ ಗುಂಪಿನ ನಾಯಕಿ. ಇವುಗಳಲ್ಲಿ ಅತ್ಯಂತ ಸಣ್ಣ ಗುಂಪಿನಲ್ಲಿ ಒಂದೇ ಆನೆಯಿದ್ದು, ಒಂದು ಇಲ್ಲವೇ ಎರಡು ಮರಿ ಆನೆಗಳಿರುತ್ತವೆ. ಗುಂಪಿನಲ್ಲಿರುವ ವಯಸ್ಸಾದ ಹೆಣ್ಣು ಆನೆ ತನ್ನ ಮರಿಗಳಿಗೆ ಮಾರ್ಗದರ್ಶನ ನೀಡುತ್ತದೆ. ಬೇರೆ ಗುಂಪಿಗೆ ಸೇರಿದ ಆನೆಗಳು ಆಹಾರವನ್ನು ತೆಗೆದುಕೊಳ್ಳುವಾಗ ಇಲ್ಲವೇ ಇನ್ನಿತರ ಸಂದರ್ಭಗಳಲ್ಲಿ ಒಂದನ್ನೊಂದನ್ನು ಸಂಧಿಸುತ್ತವೆ. ಈ ಸಂದರ್ಭಗಳಲ್ಲಿ ಯಾವುದೇ ಜಗಳ, ತಂಟೆ ತಕರಾರು ಇಲ್ಲದೇ ಒಟ್ಟಾಗಿ ಅನ್ಯೋನ್ಯದಿಂದ ಇರುತ್ತವೆ. ಬೇರೆ ಪ್ರಾಣಿಗಳ ರೀತಿ ಇವುಗಳು ತಾವು ವಾಸಿಸುವ ಸ್ಥಳದ ಪ್ರಭುತ್ವವನ್ನು ಕಾಯ್ದುಕೊಂಡು ಬರುವುದಿಲ್ಲ. ಕೆಲವು ಋತುಗಳಲ್ಲಿ ಕಾಲ ಕಳೆಯುವುದಕ್ಕಾಗಿ ಸಂಧಿಸುವ ತಾತ್ಕಾಲಿಕ ಸ್ನೇಹಮಯ ತಾಣಗಳನ್ನು ಕಾಣಬಹುದು. ಇಂಥ ಸ್ನೇಹಮಯ ತಾಣಗಳಲ್ಲಿ ನೂರಾರು ಆನೆಗಳಿದ್ದು, ಕೆಲವೇ ಕೆಲವು ಗಂಡಾನೆಗಳಿರುತ್ತವೆ.

ಕೆಲವು ಸಂದರ್ಭಗಳಲ್ಲಿ ಗಂಡು ಆನೆಯಲ್ಲಿ ವಿಚಿತ್ರ ನಡವಳಿಕೆಯನ್ನು ಗಮನಿಸಬಹುದು. ಬೆದೆಗೆ ಬಂದ ಸಂದರ್ಭಗಳಲ್ಲಿ ಗಂಡು ಆನೆಗಳ ನಡವಳಿಕೆ ಬದಲಾವಣೆಯಾಗಿದ್ದು, ನಿಗ್ರಹಿಸುವುದು ಬಹಳ ಕಷ್ಟ. ಬೆದೆಗೆ ಬಂದಿರುವ ಆನೆಗಳು ಕಾಡಿನಲ್ಲಿರುವ ಇನ್ನಿತರ ಗಂಡು ಆನೆಗಳ ಮೇಲೆ ತನ್ನ ಕೋಪವನ್ನು ಪ್ರದರ್ಶಿಸುತ್ತವೆ. ಹೆಣ್ಣು ಆನೆಗಳು ಪ್ರತಿ ವಾರಕ್ಕೆ ಒಮ್ಮೆ ಬೆದೆಗೆ ಬರುತ್ತವೆ. ಗರ್ಭ ಧರಿಸಿದ ಹೆಣ್ಣಾನೆಯು ೨೦ ರಿಂದ ೨೨ ತಿಂಗಳ ನಂತರ ಎಳೆಯ ಮರಿಗಳಿಗೆ ಜನ್ಮ ನೀಡುತ್ತವೆ. ಈ ಎಳೆಯ ಮರಿಗಳ ಯೋಗಕ್ಷೇಮ ಮತ್ತು ರಕ್ಷಣೆಯನ್ನು ಗುಂಪಿನ ಹಿರಿಯ ಹೆಣ್ಣಾನೆಗಳು ನೋಡಿಕೊಳ್ಳುತ್ತವೆ.


ಎಳೆಯ ಆನೆಯ ಮರಿಗಳು ಬೆಳೆಯುತ್ತಾ ಗುಂಪಿನ ಇನ್ನಿತರ ಆನೆಗಳ ಚಲನವಲನಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಾ ವಿವಿಧ ವಿಷಯಗಳಲ್ಲಿ ಪರಿಣತಿಯನ್ನು ಪಡೆಯುತ್ತವೆ. ತನ್ನ ಸೊಂಡಿಲನ್ನು ತಾಯಿಯ ಬಾಯಿಯಲ್ಲಿಟ್ಟು, ತಿನ್ನಬಹುದಾದ ಮತ್ತು ತಿನ್ನಬಾರದ ವಸ್ತುಗಳಾವುವು ಎಂಬುದನ್ನು ಪತ್ತೆ ಹಚ್ಚುತ್ತವೆ.

ಆನೆಯು ಮಾನವನೊಂದಿಗೆ ನಿಕಟ ಸಂಬಂಧವನ್ನೊಂದಿದೆ. ಭಾರತದ ಪರಂಪರೆ ಮತ್ತು ಸಂಸ್ಕೃತಿಯಲ್ಲಿ ಆನೆಗಳಿಗೆ ವಿಶಿಷ್ಟ ಸ್ಥಾನವಿದೆ. ಸಾಮಗ್ರಿಗಳ ಸಾಗಾಣಿಕೆ, ಮರದ ದಿಮ್ಮಿಗಳ ಸಾಗಾಣಿಕೆ, ಯುದ್ಧಗಳಲ್ಲಿ, ಸಾಂಸ್ಕೃತಿಕ ಉತ್ಸವಗಳಲ್ಲಿ ಪಳಗಿಸಿದ ಆನೆಗಳನ್ನು ಉಪಯೋಗಿಸುತ್ತಿದ್ದೇವೆ. ಮಾನವನ ಅತಿಯಾದ ಚಟುವಟಿಕೆಯಿಂದ ಇವುಗಳ ಸಂಖ್ಯೆ ದಿನೇ ದಿನೇ ಕ್ಷೀಣಿಸುತ್ತಿದೆ.

ಆನೆಗಳನ್ನು ಹಿಡಿಯಲು ಉಪಯೋಗಿಸುವ ವಿಧಾನಗಳಲ್ಲಿಯೂ ಅನೇಕ ಆನೆಗಳು ಸಾವನ್ನಪ್ಪುತ್ತವೆ. ಮತ್ತೆ ಬಾರೀ ಬೆಲೆ ಬಾಳುವ ದಂತಕ್ಕೋಸ್ಕರ ಮಾನವ ಆನೆ

ಗಳನ್ನು ಬೇಟೆಯಾಡುತ್ತಿದ್ದಾನೆ. ದಕ್ಷಿಣ ಭಾರತದಲ್ಲಿ ದಂತಕ್ಕೋಸ್ಕರ ಬೇಟೆಗಾರರು ಸುಮಾರು ೧೦೦ ಆನೆಗಳನ್ನು ಪ್ರತಿ ವರ್ಷವೂ ಕೊಲ್ಲುತ್ತಿದ್ದಾರೆ. ಇವುಗಳ ಜೊತೆಗೆ ಮಾನವನ ಸ್ವಾರ್ಥಕ್ಕೋಸ್ಕರ ಇವುಗಳ ವಾಸಸ್ಥಾನವಾದ ಅರಣ್ಯ ನಾಶವಾಗುತ್ತಿದೆ. ಅರಣ್ಯ ನಾಶದಿಂದ ಇವುಗಳು ಮಾನವನ ವಾಸಸ್ಥಾನದ ಕಡೆಗೆ ವಲಸೆ ಬಂದು ಮಾನವನ ಮತ್ತು ಅವನ ಬೆಳೆಗಳನ್ನು ನಾಶ ಮಾಡುತ್ತಿವೆ. ದಕ್ಷಿಣದಲ್ಲಿ ಪ್ರತಿ ವರ್ಷ ಸುಮಾರು ೮೦ ಜನರು ಭಾರತದ ಆನೆಗಳಿಂದ ಮರಣವನ್ನಪ್ಪುತ್ತಿದ್ದಾರೆ.

ಮಾನವನ ಅತಿಯಾದ ಚಟುವಟಿಕೆಗಳಿಂದ ಭಾರತೀಯ ಪರಂಪರೆ ಹಾಗೂ ಜೀವ ಜಗತ್ತಿನ ಹೆಮ್ಮೆಯ ಸದಸ್ಯನಾದ ಆನೆಯೂ ವಿನಾಶದ ಅಂಚಿನಲ್ಲಿದೆ. ಈಗಲಾದರೂ ನಾವುಗಳು ಎಚ್ಚತ್ತು ಈ ಪ್ರಾಣಿಯನ್ನು ಉಳಿಸಬೇಕಾಗಿದೆ. ಇಲ್ಲದಿದ್ದರೆ ನಮ್ಮ ಮುಂದಿನ ಜನಾಂಗ ಆನೆಯನ್ನು ಚಿತ್ರಗಳಲ್ಲಿ ನೋಡಿ ಸಂತೋಷಪಡಬೇಕಾಗುವ ದಿನಗಳು ಬಹಳ ದೂರವಿಲ್ಲ.



ಕೊಠಡಿಯಲ್ಲಿದ್ದ ಅನಂತ ಕಾಲದ ಕತ್ತಲನ್ನು ಒಂದು ಬೆಂಕಿ ಕಡ್ಡಿಯ ಬೆಳಕು ಹೇಗೆ ಹೋಗಲಾಡಿಸುತ್ತದೆಯೋ ಹಾಗೆಯೇ ಭಗವಂತನ ಒಂದು ಕೃಪಾ ಕಟಾಕ್ಷ ಜನ್ಮಗಳ ಪಾಪವನ್ನು ಹೋಗಲಾಡಿಸಬಲ್ಲದು.

—ಶ್ರೀ ರಾಮಕೃಷ್ಣ

ಮಾಡುವುದಕ್ಕೆ ಕೆಲಸ ಇರಬೇಕು. ಕೆಲಸ ಮಾಡಲು ಶಕ್ತಿ ಇರಬೇಕು.

—ಕಿಪ್ಲಿಂಗ್

# ಪುಸ್ತಕ ಪರಿಚಯ

**ಸೇಡಿಯಾಪು ನೆನಪುಗಳು—ಸಂಗ್ರಹ: ವೈದೇಹಿ. ಪ್ರಕಾಶನ: ಕರ್ನಾಟಕ ಸಂಘ, ಪುತ್ತೂರು-೫೭೪ ೨೦೧. ಮೊದಲ ಮುದ್ರಣ : ೧೯೯೬, ಪುಟ : ೮೪, ಬೆಲೆ : ರೂ. ೩೫.**

ಕರ್ನಾಟಕ ಸಂಘದ ಅಧ್ಯಕ್ಷ ಬೋಳಂತಕೋಡಿ ಈಶ್ವರಭಟ್ಟರು ಬೆನ್ನುಡಿಯಲ್ಲಿ ಬರೆದಿದ್ದಾರೆ: "'ಸೇಡಿಯಾಪು ನೆನಪುಗಳು' ಕೃತಿಯನ್ನು ಅವರ ತೊಂಬತ್ತೈದನೆಯ ಹುಟ್ಟುಹಬ್ಬದಂದು (೮-೬-೧೯೯೬) ಅವರಿಗೆ ಅರ್ಪಿಸಬೇಕೆಂಬುದು ನಮ್ಮ ಅಪೇಕ್ಷೆಯಾಗಿತ್ತು. ಯಾಕೋ ಆ ಅಪೇಕ್ಷೆ ಕೈಗೂಡಲಿಲ್ಲ. ಮರುದಿನ ಬೆಳಗ್ಗೆ ಏಳುವಾಗಲೇ ಆ ಆಘಾತಕರ ಸುದ್ದಿ ಕಾದಿತ್ತು: ಸೇಡಿಯಾಪು ಇನ್ನಿಲ್ಲ! ಸೇಡಿಯಾಪು ಇನ್ನಿಲ್ಲ. ಆದರೆ ಅವರ ನೆನಪು ಸಹೃದಯರಾದ ಕನ್ನಡ ಸಾಹಿತ್ಯಾಸಕ್ತರಲ್ಲಿ ಸದಾ ಇರುತ್ತದೆ."

ನಾಲ್ಕು ಬಗೆಯ ಪರಸ್ಪರ ಪೂರಕವಲ್ಲದ ಬಲಗಳನ್ನು ಎದುರಿಸಿಯೂ ಈ ಉತ್ಕೃಷ್ಟ ಕೃತಿ ನಮಗೆ ಒದಗಿದೆ. ಇದಕ್ಕಾಗಿ ಕನ್ನಡ ಓದುಗರು ಲಿಪಿಕಾರಿಣಿ ವೈದೇಹಿಯವರಿಗೂ (ವೀರನಾರಾಯಣನೆ ಕವಿ ಲಿಪಿಕಾರ ಕುಮಾರವ್ಯಾಸ) ಪ್ರಕಾಶಕರಾದ ಪುತ್ತೂರು ಕರ್ನಾಟಕ ಸಂಘದವರಿಗೂ ವಿಶೇಷ ಕೃತಜ್ಞರಾಗಿರಬೇಕು. "ಮನೆಮನೆಯಲಿ ನೀನಾಗಿಹೆ ಗೃಹಶ್ರೀ, ಪೆಸರಿಲ್ಲದ ಪೆಸರಿದೆ ನಿನಗದು ಗೃಹಸ್ತ್ರೀ" ಎಂದು ಬರೆದರು ಕುವೆಂಪು. ಇಂಥ ಆದರ್ಶ ಗೃಹಶ್ರೀಯರ ಸಾಲಿನಲ್ಲಿ ಕಾಣುತ್ತೇವೆ ಸೇಡಿಯಾಪು ಅವರ ಸೊಸೆ ಲಕ್ಷ್ಮಿ ಜಯರಾಮಭಟ್ಟರನ್ನು. ವೈಯಕ್ತಿಕ ಅನುಭವದ ನೆಲೆಯಿಂದ ನಾನು ಈ ಮಾತು ಬರೆದಿದ್ದೇನೆ ಎಂದೇ ವೈದೇಹಿಯವರು ಸಲ್ಲಿಸಿರುವ ನುಡಿನಮನ "ಸೇಡಿಯಾಪು ಅವರ ಸೊಸೆ ಶ್ರೀಮತಿ ಲಕ್ಷ್ಮಿ ನಾನು ಕಂಡ ಕೆಲ ಅಪರೂಪದವರಲ್ಲಿ ಒಬ್ಬರು. ವೃದ್ಧ ಮಾವನನ್ನು ಅವರು ನೋಡಿಕೊಳ್ಳುತ್ತಿದ್ದ ರೀತಿ ಕಣ್ಣು ತುಂಬುವಂತಹುದು. ಕನ್ನಡದ ಬಹುಮುಖ್ಯ ಚೇತನದಲ್ಲಿ ಒಬ್ಬರಾದ ಶ್ರೀ ಸೇಡಿಯಾಪು ಅವರ ವೃದ್ಧಾಪ್ಯವನ್ನು ಹೀಗೆ ಮುಚ್ಚಟೆಯಾಗಿ ನೋಡಿಕೊಂಡ ಅವರಿಗೆ ವಂದನೆಯನ್ನು ಯಾವ ರೀತಿಯಲ್ಲಿ ಸಲ್ಲಿಸಲಿ?"

ಮೇಲೆ ಉಲ್ಲೇಖಿಸಿರುವ ನಾಲ್ಕು ಬಲಗಳಿವು: ೧) ಸ್ವತಃ ಸೇಡಿಯಾಪು ಅವರಿಗೆ ಇಂಥ ಕೆಲಸದ ಬಗ್ಗೆ ನಿರಾಸಕ್ತಿ: "ಕಾರಣವೇನೆಂದರೆ, ಮಹಾಪುರುಷರ ಜೀವನ ಚರಿತ್ರೆಗಳನ್ನು ಓದುವುದರಿಂದ ಆಗುವಂತಹ ಲಾಭವು ಸಾಮಾನ್ಯ ಜನರ ಜೀವನ ಚರಿತ್ರೆ

ಯಿಂದ ಆಗುವಂತಹುದಲ್ಲ." ಹನುಮಂತನ ಹಾಗೆ ಸೇಡಿಯಾಪು: ಸ್ವಸಾಮರ್ಥ್ಯದ ಅರಿವು ಇರದೆ ಸ್ವಂತ ಸಿದ್ಧಿಯ ಬಗ್ಗೆ ವ್ಯಾಮೋಹವಿಲ್ಲದೆ "ಎನಗಿಂತ ಕಿರಿಯರಿನ್ನಿಲ್ಲ" ಎಂಬ ನಿಲವು. ೨) ಅವರ ಸುದೀರ್ಘ ಕ್ರಿಯಾತತ್ಪರ ಜೀವನದ ಕೊನೆಯ ಗಳಿಗೆಯಲ್ಲೋ ಎಂಬಂತೆ ಇಂಥ ಒಂದು "ದಾಕ್ಷಿಣ್ಯಕ್ಕೊಳಗಾಗಿ ನಾಲ್ಕು ಮಾತುಗಳನ್ನು" ಹೇಳಲು (ಅಂದರೆ ನೆನಪಿನ ಓಣಿಗಳನ್ನು ಕೆದಕಿ ಕೆಣಕಿ ಸೆಣಸಿ ಆಯ್ದು ಅರುಹಿದ ನುಡಿಮುತ್ತುಗಳು) ಒಪ್ಪಿದುದು. ೩) ಈ ಸಾಹಿತ್ಯ ಭೀಷ್ಮ ಶರಶಯ್ಯೆಯಲ್ಲಿ ಪವಡಿಸಿದ್ದಾರೆ. "ಶಾಂತಿಪರ್ವ"ದ ಸೂಕ್ತಿಗಳನ್ನು ಹೇಳಬೇಕಾಗಿದೆ: "'ಜಯಕ್ಕೆ ಬುದ್ಧಿಯೇ ಮೂಲ ಸಾಧನ' ಎಂದು ಮನುವು ಹೇಳಿದ್ದಾನೆ. ಬುದ್ಧಿಯ ಕೆಲಸ ಶ್ರೇಷ್ಠ; ಬಾಹು ಕೆಲಸ ಮಧ್ಯಮ; ಕಾಲ್ಕೆಲಸ ಹೆಗಲ ಕೆಲಸಗಳು ಅಥವಾ ಇವೆಲ್ಲಕ್ಕಿಂತಲೂ ಶೀಲ ಮುಖ್ಯ. ಶೀಲದಿಂದಲೇ ಧರ್ಮ ಸತ್ಯ ನಡತೆ ಬಲ ಸಂಪತ್ತು ಎಲ್ಲವೂ ಲಭಿಸುವುದು." (ಎಲ್‌ಆರ್‌ಕೃ 'ವಚನ ಭಾರತ' ಶಾಂತಿ ಪರ್ವ ಭೀಷ್ಮ ಉವಾಚ). ೪) ಆದರ್ಶ-ನಿರ್ವಹಣೆ ನಡುವಿನ ನಿರಂತರ ತುಮುಲ. "ಮಾತ ಹಳಿಯಬೇಡ! ಮನುಜನೊಂದು ಮಹಿಮೆ ಮಾತಿನಲ್ಲಿ। ಮಾತು ದೇವನೊಂದು ಶಕ್ತಿ, ಮಾತೆ ಜೀವನೊಂದು ಜ್ಯೋತಿ। ಮಾತು ನೀತಿಗಳಿಗೆ ತಾಯಿ ರೀತಿಗಳಿಗದೇ ವಿಧಾಯಿ। ಮಾತು ಸತ್ಯವುಡುವ ಧೌತ ಜೀವನದ ರಥಕ್ಕೆ ಸೂತ। ಮಾತ ಕೆಡಿಸಿ ಸುಖಿಪೆನೆಂಬ ಪಾಪಿ ನರಕಕೂಪ ಭೇಕ" ('ಶ್ವಮೇಧ) ಎಂದು ಎಂದೋ ಬರೆದು (೧೯೩೫) ಆ ರೀತಿ ಋಜುಜೀವನ ನಡೆಸಿದ ಮಹಾಚೇತನದ ಸತತ ದ್ವಂದ್ವವಿದು.

ಇಷ್ಟೆಲ್ಲ ಸಮಸ್ಯೆಗಳನ್ನು ಎದುರಿಸಿಯೂ ಈ ಸತ್ಕೃತಿ ನಮಗೆ ಲಭ್ಯವಾಗಿರುವುದು ಅಪೂರ್ವ ಲಾಭ: ಹೆಮ್ಮಿಂಗ್‌ವೇ ಬರೆದಿರುವ 'ಓಲ್ಡ್ ಮ್ಯಾನ್ ಅಂಡ್ ದ ಸೀ' ಪುಸ್ತಕವನ್ನು ಓದಿ ಮುಗಿಸುವಾಗ ಯಾವ ಸುಸಂಸ್ಕೃತ ಸಂತೃಪ್ತಿ ಒದಗುವುದೋ ಅದೇ ಭಾವ "ಸೇಡಿಯಾಪು ನೆನಪುಗಳು" ಕೃತಿಯನ್ನು ಸ್ವಾಂಗೀಕರಿಸಿ (ಹೌದು–ದ ಬುಕ್ ಪೊಸೆಸೆಸ್ ಯು!) ಆನಂದಿಸಿದಾಗ ಮೂಡಿಯುವುದು.

ಈ ಪುಸ್ತಕ ಸೇಡಿಯಾಪು ಜೀವನದ ಅತಿ ಸಂಕ್ಷಿಪ್ತ ದೃಶ್ಯ: ಸಾಗರದ ಬದಲು ಹನಿಮಾತ್ರ. ಆದರೆ ಈ ಹನಿ ಪ್ರವೃತ್ತಿ ಧರ್ಮವನ್ನು ಬೋಧಿಸುವ ಜೀವನ ಸಾರ– "ಸಣ್ಣ ದೋಣಿಯ ಸಮುದ್ರಯಾನ"ಕ್ಕೆ ವಿಶಿಷ್ಟ ಮಾಧ್ಯಮ. ಬಡತನ, ಖಾಯಿಲೆ, ಶಿಕ್ಷಣಾವಕಾಶರಾಹಿತ್ಯ, ಪ್ರತಿಕೂಲ ಪರಿಸರ–ಎಳೆಹರೆಯದ ಹುಡುಗನನ್ನು ಚಿರ ಅಂಧಕಾರಕ್ಕೆ ತಳ್ಳಲು ಈ ಒಂದೊಂದೇ ಸಾಕು. ಆದರೆ ಅಂಥಿಂಥ ಚೇತನ ಇವನಲ್ಲ, ಇವನಂಥ ಚೇತನ ಇನ್ನಿಲ್ಲ! ಅವನ್ನು ಎದುರಿಸಿ, ಅನೇಕ ಸಂದರ್ಭಗಳಲ್ಲಿ ಅನುಕೂಲ ಬಲಗಳಾಗಿ ಮಾರ್ಪಡಿಸಿ ಸೇಡಿಯಾಪು ಎಂಬ ಸಣ್ಣ ದೋಣಿ ಬಾಳು ಎಂಬ ಕಡಲ ಯಾನ ತೊಡಗಿಯೇ ಬಿಟ್ಟಿತು–"ಈಸಬೇಕು ಇದ್ದು ಜೈಸಬೇಕು!" ವಿವರಗಳನ್ನು ಇಲ್ಲಿ ಒಂದು ಜೀವಂತ ಕಾದಂಬರಿಯ ಧಾಟಿಯಲ್ಲಿ ಓದಬಹುದು.

ರಡ್‌ಯಾರ್ಡ್ ಕಿಪ್ಲಿಂಗ್ ಬರೆದಿರುವ "If" ಸೂಕ್ತಿಯನ್ನು "ಇಷ್ಟು ಆದರೆ–" ಎಂಬ ಶೀರ್ಷಿಕೆಯಲ್ಲಿ ಪುತ್ತೂರಿನ ಎ.ಪಿ. ಸುಬ್ಬಯ್ಯನವರು (೧೯೦೧–೭೪)—

ಸೀಡಿಯಾಪು ಸಮಕಾಲೀನರು-ಕನ್ನಡಕ್ಕೆ ಅನುವಾದಿಸಿದ್ದಾರೆ. ಆ ಇಡೀ ಪದ್ಯ ಸೀಡಿಯಾಪು ಜೀವನಕ್ಕೆ ಬರೆದಿರುವ ಭಾಷ್ಯದಂತಿದೆ. ಆಯ್ದ ಕೆಲವು ಸಾಲು ನೋಡಿ:

ಜೀವನದ ಸಾಹಸದಿ ಅರ್ಜಿತದ ಸಿರಿಯೆಲ್ಲ
ಒಮ್ಮೆಗೇ ಹಾಳಾಗಿ ಕಷ್ಟಬಡವನಾದಾಗ
ಮೈಮುರಿದು ಮೊದಲಂತೆ ದುಡಿಮೆಯನು
ಕೈಕೊಂಡು
ಯಾರಲ್ಲು ಎಳ್ಳಷ್ಟು ದುಃಖವನು
ತೋರದೆಯೆ
ಪ್ರಾರಂಭದಿಂದಲೆಯೆ ಜೀವನವ
ತೊಡಗುತ್ತ
ಹರುಷದಿಂ ಮುನ್ನಿನವ ಪುರುಷ
ನೀನಾದರೆ-
ಒದಗಿದ ಸಮಯವನು ಎಳ್ಳಷ್ಟು
ಕಳೆಯದೆಯೆ
ಎಡೆಬಿಡದ ಸಾಹಸದ ಸತ್ಕಾರ್ಯಗೈದರೇ
ಪೃಥ್ವಿಯಾ ಒಡೆಯನೂ-ಅದಕಿಂತ
ಮಿಗಿಲಾಗಿ
ಮಾನವ ಶ್ರೇಷ್ಠನೇ ನೀನಾಗಿ ಬಾಳುವೆ,
ಎಲೆ ನನ್ನ ಮಗುವೇ

ನಾಡಿನ ಹಿರಿ ಪ್ರತಿಭೆಯೊಂದರ ವಿಕಾಸ ಹಂತಗಳನ್ನು ಸ್ಥೂಲವಾಗಿ ಆದರೆ ಮುಖ್ಯ ರಸಬಿಂದುಗಳನ್ನೂ ಪರ್ವಬಿಂದುಗಳನ್ನೂ ಎಲ್ಲಿಯೂ ಬಿಡದೆ ಕಾಣಿಸಿರುವ ಈ ಪುಸ್ತಕ ಅತ್ಯಂತ ವಾಚನೀಯವಾಗಿದೆ, ಅನುಷ್ಠಾನ ಯೋಗ್ಯವಾಗಿದೆ, ಇಂಥ ಇತರ ಕೃತಿಗಳಿಗೆ (ಅಜ್ಞಾತ ಚೇತನಗಳೆಷ್ಟಿರಬಹುದೇ! ಆದರೆ ವೈದೇಹಿ-ಪುತ್ತೂರು ಕರ್ನಾಟಕ ಸಂಘ ಯುಗ್ಮದ ಯೋಗ ಎಲ್ಲರಿಗು ಒದಗು ವುದೇ!) ಅಗ್ರ ಪಂಕ್ತಿಯಾಗಿದೆ.

ಜಿ. ಟಿ. ನಾರಾಯಣರಾವ್

* * * * *

**ಕೆಲವು ಸಾಮಾನ್ಯ ಕಾಯಿಲೆಗಳು**—ಲೇಖಕ: ಅನಿಲ್ ಅಗರವಾಲ್; ಪ್ರಕಾಶಕರು: ನ್ಯಾಶನಲ್ ಬುಕ್ ಟ್ರಸ್ಟ್, ಇಂಡಿಯಾ ದೆಹಲಿ; ಕನ್ನಡ ಅನುವಾದಕರು: ಡಾ|| ಕೆ. ಬಿ. ರಂಗಸ್ವಾಮಿ; ಪುಟ: ೧೧೦, ೮೧-೨೩೭-೧೫೯೦-೦ ೧೯೯೬. ಬೆಲೆ: ೩೮-೦೦ರೂ.


"ಕೆಲವು ಸಾಮಾನ್ಯ ಕಾಯಿಲೆಗಳು" ಮೂಲದಲ್ಲಿ ಇಂಗ್ಲಿಷ್ ಪುಸ್ತಕ ಅದನ್ನು ಕನ್ನಡಿಸಿದವರು ಡಾ|| ರಂಗಸ್ವಾಮಿಯವರು. ಅನುವಾದ ಬಹಳ ಚೆನ್ನಾಗಿದೆ. ಪುಸ್ತಕವು ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ. ಓದುವಾಗ ಪುಸ್ತಕದಲ್ಲಿ ಅನುವಾದ ಕಲ್ಪನೆಯೇ ಬರುವುದಿಲ್ಲ. ಡಾ|| ರಂಗಸ್ವಾಮಿಯವರು ಅಭಿನಂದನಾರ್ಹರು.

ಪುಸ್ತಕದ ಹೆಸರೇ ಹೇಳುವಂತೆ ಲೇಖಕರು ಜನತೆಯನ್ನು ಪೀಡಿಸುವ ಅತಿ ಸಾಮಾನ್ಯ ಎನಿಸುವ ಕಾಯಿಲೆಗಳನ್ನು ಆರಿಸಿದ್ದಾರೆ. ಅವುಗಳೆಂದರೆ, ಅಲರ್ಜಿ, ಬೆನ್ನುನೋವು, ಬ್ರಾಂಕೈಟಿಸ್, ನೆಗಡಿ, ಕೆಂಗಣ್ಣು, ಮಲಬದ್ಧತೆ, ಭೇದಿ, ತಲೆನೋವು ಮಂಪು ಮತ್ತು ಸೈಯ-ನೈಟಿಸ್.

ಪ್ರತಿಯೊಂದು ಕಾಯಿಲೆಯನ್ನು ಪ್ರಾರಂಭಿಸುವ ಮುನ್ನ ಸ್ವಾರಸ್ಯಕರವಾದ ಮೋಜು ಚಿತ್ರಗಳನ್ನು ಕೊಟ್ಟಿದ್ದು ವಿಷಯದ ರುಚಿಯನ್ನು ಹೆಚ್ಚಿಸುತ್ತದೆ. ಪ್ರಾರಂಭದಲ್ಲಿ ರೋಗದ ಹೆಸರು ಹೇಗೆ ಬಂದಿತು ಎಂಬುದನ್ನು ತಿಳಿಸಿ, ಅದರ ಇತಿಹಾಸವನ್ನು ಹೇಳಲಾಗಿದೆ. ರೋಗವು ಬರುವ ಬಗೆ, ಬರಬಹುದಾದ ಹಲವಾರು ಕಾರಣಗಳನ್ನು ಕೊಡಲಾಗಿದೆ. ನಂತರ ರೋಗಿಗಳಲ್ಲಿ ಕಾಣಬಹುದಾದ ರೋಗ-ಲಕ್ಷಣಗಳನ್ನು ಹಾಗೂ ಆ ರೋಗ ಲಕ್ಷಣದ ಬದಲಾವಣೆಗಳನ್ನು ವಿವರಿಸಲಾಗಿದೆ. ಒಂದು ವೇಳೆ ಸರಿಯಾದ ಉಪಚಾರವಿಲ್ಲದೇ ಹೋದರೆ ಅಥವಾ ವ್ಯತಿರಿಕ್ತವಾದ ಉಪಚಾರ ದೊರೆತರೆ ತೋರಬಹುದಾದ ತೊಡರುಗಳ ವರ್ಣನೆ ಕೊಟ್ಟಿರುವರು. ಉಪಚಾರಕ್ಕಿಂತ ಪ್ರತಿಬಂಧಕೋಪಾಯ ಒಳ್ಳೆಯದೆಂದು ತಿಳಿಸಿ, ಆಯಾ ರೋಗ ಇಲ್ಲವೆ ತೊಂದರೆಗಳು ಬರದಂತೆ ಎಚ್ಚರ ವಹಿಸಲು ಮಾರ್ಗದರ್ಶನ ಮಾಡಲಾಗಿದೆ. ಹಲವಾರು ಕಡೆಗೆ ಸಾಮಾನ್ಯ ಓದುಗನಿಗೆ ತಿಳಿಸಲು ಬೇಕೆನಿಸುವ ಅಂಗರಚನಾಶಾಸ್ತ್ರದ ರೇಖಾ ಚಿತ್ರಗಳು ವಿವರಣೆಯನ್ನು ತಿಳಿಯಾಗಿಸುತ್ತದೆ.

ಮುಖ ಪುಟ, ಮುದ್ರಣ, ವಿನ್ಯಾಸಗಳು ಆಕರ್ಷಕವಾಗಿವೆ. ಒಟ್ಟಿನಲ್ಲಿ ಪುಸ್ತಕ ಸಂಗ್ರಹ ಯೋಗ್ಯ.

ಡಾ|| ಸ. ಜ. ನಾಗಲೋಟಿಮಠ



ಕಣ್ಣನಲ್ಲಿ ಹೆಮ್ಮೆ ಬೇಡ. ನಾಲಿಗೆಯಲ್ಲಿ ಸುಳ್ಳು ಬೇಡ. ಕೈ ಕೊಳೆಯಾಗದಿರಲಿ. ಮನಸ್ಸು ಕೆಟ್ಟದನ್ನು ಯೋಚಿಸದಿರಲಿ. ಕಾಲು ಕೆಡುಕಿನತ್ತ ಹೋಗದಿರಲಿ. ಬಾಯಿ ಸುಳ್ಳು ಹೇಳದಿರಲಿ. ದೇಹ ದೇವರಿಗೆ ಸಲ್ಲಲಿ.

—ಬಸುಸ್ವಾಮಿ

# ಓದುಗರ ಅನಿಸಿಕೆಗಳು

ಪುಸ್ತಕ ಪ್ರಪಂಚದ ಸಂಪಾದಕರಿಗೆ—

ಮಾನ್ಯರೆ,

೯೬ನೇ ಜುಲೈ ಪುಸ್ತಕ ಪ್ರಪಂಚದಲ್ಲಿ ಎಂ. ಟಿ. ವಾಸುದೇವನ್ ನಾಯರ್ ಅವರ ಮಲೆಯಾಳಿ ಕತೆಯನ್ನು ಸಿ. ನಾಗಣ್ಣ ಅವರು "ನಿನ್ನ ನೆನಪಲ್ಲಿ" ಶೀರ್ಷಿಕೆಯಲ್ಲಿ ಅನುವಾದಿಸಿರುವುದನ್ನು ಪ್ರಕಟಿಸಿರುವುದು ಸರಿಯಷ್ಟೆ. ಎಂ.ಟಿ.ವಿ. ಅವರ ಇದೇ ಕತೆಯು ಮೈಸೂರಿನಿಂದ ಪ್ರಕಟವಾಗುವ "ಆಂದೋಲನ" ದಿನಪತ್ರಿಕೆಯ ೭-೭-೯೬ರ ಸಂಚಿಕೆಯಲ್ಲಿ ಪೇಜಾವರ ತಾರಾನಾಥ್ ರಾವ್ ಅವರ ಹೆಸರಿನಿಂದ 'ನನ್ನಕ್ಕ ನೀಲಾ' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗಿದೆ. ಪುಸ್ತಕ ಪ್ರಪಂಚ ಓದಿದ ನಂತರ ನನ್ನ ಅನುಮಾನ ಪರಿಹಾರಕ್ಕಾಗಿ ಸ್ಪಷ್ಟೀಕರಣ ಕೇಳಿ ಆಂದೋಲನ ದಿನಪತ್ರಿಕೆಗೆ ಪತ್ರ ಕಳುಹಿಸಿದೆ. ಅದು ಪ್ರಕಟವಾಗಲಿಲ್ಲ. ನನ್ನ ಅನುಮಾನ ಪರಿಹಾರವಾಗಲಿಲ್ಲ. ಆದ್ದರಿಂದ ಆಂದೋಲನ ಪತ್ರಿಕೆಗೆ ಕಳುಹಿಸಿದ ಪತ್ರವನ್ನು ಪುಸ್ತಕ ಪ್ರಪಂಚ ಓದುಗರ ಅನಿಸಿಕೆ ವಿಭಾಗಕ್ಕೆ ಪ್ರಕಟಣೆಗಾಗಿ ಕಳುಹಿಸಿದ್ದೇನೆ.

## ಇಲ್ಲೊಂದು ಕೃತಿಚೌರ್ಯ

"ಮಾನ್ಯರೇ,

ತಮ್ಮ ಆಂದೋಲನ ಪತ್ರಿಕೆಯ ೭–೭–೯೬ರ ಭಾನುವಾರ ಸಂಚಿಕೆಯಲ್ಲಿ ಪ್ರಕಟವಾದ 'ಪೇಜಾವರ ತಾರಾನಾಥ್‌ರಾವ್' ರವರು ಬರೆದರೆನ್ನಲಾದ ಕತೆ 'ನನ್ನಕ್ಕ ನೀಲಾ' ಓದಿದೆ. ಸುಮಾರು ೧೦೦ ಸಾಲುಗಳಲ್ಲಿ ಬಂದ ಈ ಸಣ್ಣ ಕತೆಯಲ್ಲಿ ಮಾತೃಪ್ರಧಾನ ಕುಟುಂಬದ ಹಿನ್ನೆಲೆಯಲ್ಲಿ ಬೆಳೆದ ಪುಟ್ಟ ಹುಡುಗನ ಬಾಲ್ಯದ ದಟ್ಟ ಅನುಭವವನ್ನು ದಾಖಲಿಸಲಾಗಿದೆ. ಕುತೂಹಲದಿಂದ ಓದಿಸಿಕೊಂಡು ಹೋಗುವ ಈ ಕಥೆಯನ್ನು ಬರೆದ ಶ್ರೀ ಪೇಜಾವರರನ್ನು ಅಭಿನಂದಿಸಲು ಅವರ ವಿಳಾಸಕ್ಕಾಗಿ ಹುಡುಕಾಡಿದೆ. ಈ ಕುತೂಹಲ, ಹುಡುಕಾಟ ೩ ದಿನಗಳು ಮಾತ್ರ.

ಆಕಸ್ಮಿಕವಾಗಿ ವಯಸ್ಕರ ಶಿಕ್ಷಣ ಸಮಿತಿಯ ಮಾಸಪತ್ರಿಕೆ 'ಪುಸ್ತಕ ಪ್ರಪಂಚ' ೯೬ ನೇ ಜುಲೈ ಸಂಚಿಕೆಯಲ್ಲಿ ಸಿ. ನಾಗಣ್ಣನವರು ಮಲೆಯಾಳಂ ಕತೆಗಾರ, ಜ್ಞಾನಪೀಠ ಪ್ರಶಸ್ತಿ ವಿಜೇತ ಎಂ. ಟಿ. ವಾಸುದೇವನ್‌ನಾಯರ್‌ರವರ ನೀಳ್ಗತೆಯನ್ನು 'ನಿನ್ನ ನೆನಪಲ್ಲಿ' ಶೀರ್ಷಿಕೆಯಲ್ಲಿ ಅನುವಾದಿಸಿದ್ದರು. ೧೩ ಪುಟಗಳ ಈ ಕತೆಯಲ್ಲಿ ನಾಗಣ್ಣನವರ ಶ್ರದ್ಧೆ, ಶ್ರಮಗಳು ಪ್ರಾಮಾಣಿಕವಾಗಿ ವ್ಯಕ್ತವಾಗಿತ್ತು. ಈ ಕತೆಯನ್ನು ಓದಿದಾಗ ತಾರಾನಾಥ್ ರಾವ್‌ರವರ ಹೂರಣ ಹೊರಬಿತ್ತು.

ಅಳಿಯನ ಕುರುಡು ಬೆಳಗಾದಾಗ ಎನ್ನುವಂತೆ. ಎಂ. ಟಿ. ವಿ. ಯುವರ ಹೆಸರೆತ್ತದೆ ಕತೆಯಲ್ಲಿನ, ಪಾತ್ರ, ಸಂಕೇತ, ಸನ್ನಿವೇಷಗಳನ್ನು ತಾರಾನಾಥ್‌ರು, ಬಳಸಿಕೊಂಡಿರುವುದನ್ನು ಕಾಣಬಹುದಾಗಿದೆ. ವಾಸುದೇವನ್ ನಾಯರ್‌ರವರ ಲೀಲಾ ಪೇಜಾವರರ ನೀಲಾಳಾಗಿ, ಪರಿಮಳಸೂಸುವ ಗೂಡೆಯುಬೊಂಬೆ, ಗಿಡುಗನಗೊಂಬೆಯಾಗಿ ಮಿಕ್ಕೆಲ್ಲ ಸನ್ನಿವೇಷಗಳು ಹತ್ತಿರ ಹತ್ತಿರ ನಿಲ್ಲುವುದನ್ನು ಕಾಣಬಹುದು. ಎಂ.ಟಿ.ವಿ.ಯುವರು ಸಿಲೋನ್‌ನಲ್ಲಿನ ಜಳನೇ ಇಸ್ವಿಯಲ್ಲಿ ನಡೆದ ಯುದ್ಧದ ಘಟನೆಯುನ್ನು ಕತೆಯಲ್ಲಿ ತಂದರೆ, ಪೇಜಾವರ ಮಹಾಶಯುರು ಇತ್ತೀಚಿನ ಶ್ರೀಲಂಕಾದಲ್ಲಿ ಎಲ್.ಟಿ.ಟಿ.ಯುವರ ದಂಗೆಯಾಗಿ ಮಾರ್ಪಾಡಿಸಿಕೊಂಡು ತನ್ಮದು ಸ್ವತಂತ್ರಕಥೆ ಎನ್ನುವಂತೆ ಸೋಗು ಹಾಕುತ್ತಾರೆ. ಎರಡೂ ಕತೆಗಳನ್ನು ಅವಲೋಕಿಸಿದವರಿಗೆ ಜಳ್ಳು-ಕಾಳುಗಳ ಪರಿಚಯುವಾಗುತ್ತದೆ. ಮಣಮಾತಿಗಿಂತ ತೃಣ ಕೆಲಸ ಹೆಚ್ಚು. ಇನ್ನೂ ಮಣ ಕೆಲಸಮಾಡಿದ ವಾಸುದೇವನ್ ನಾಯರ್‌ರನ್ನು ಸಿ. ನಾಗಣ್ಣನವರನ್ನು ಅಭಿನಂದಿಸದೆ ಇರಲಾರೆ."

ಡಿ. ಶ್ರೀಕಂಠಮೂರ್ತಿ
ಅಳಗಂಚಿ

* * *

ಡಾ. ದೇಜಗೌರವರ ವಿಚಾರ-ಪ್ರಚೋದಕ ಲೇಖನ 'ಸ್ವೀಕರಣ', ಹಾಗೂ ಪ್ರೊ. ನಾಗಣ್ಣನವರು ಕನ್ನಡಕ್ಕೆ ತಂದಿರುವ ವಾಸುದೇವನ್ ನಾಯರ್‌ರವರ 'ನಿನ್ನ ನೆನಪಿನಲ್ಲಿ', ಕುತೂಹಲ ಹುಟ್ಟಿಸುವ ಲೇಖನಗಳು. ನಾಗಣ್ಣನವರ ಅನುವಾದ ಮೆಚ್ಚತಕ್ಕದ್ದು.

ಲಕ್ಷ್ಮೀ ಹಾಗೂ ಸರಸ್ವತಿ ಒಲಿದ ಚೆಟ್ಟಿಯಾರರ ಅಸಮಾನ್ಯ ಬದುಕನ್ನು ಚಂದ್ರವದನರಾವ್‌ರವರು ನಮಗೆ ಪರಿಚಯಿಸಿ ಉಪಕಾರ ಮಾಡಿದ್ದಾರೆ. ಹಣವನ್ನು ಕೊಳ್ಳೆ ಹೊಡೆಯುವ ವ್ಯಕ್ತಿಗಳೇ ತುಂಬಿರುವ ಸಮಾಜದಲ್ಲಿ ವಿದ್ಯಾಪ್ರಸಾರಕ್ಕೆ ತನ್ನೆಲ್ಲ ಗಳಿಕೆಯುನ್ನು ದಾನ ಮಾಡಿದ ಅಸದೃಶ ಶ್ರೀಮಂತ-ಪ್ರಾಜ್ಞ. ಅಳಗಪ್ಪ ಚೆಟ್ಟಿಯಾರ್ ಅಂತಹವರು ತೀರ ಅಪರೂಪ. ಚೆಟ್ಟಿಯಾರರಿಗೆ ಸಾವು ಹೀಗೆ ಬರಬಾರದಾಗಿತ್ತು!

ಭಾನುಪ್ರಕಾಶ್
ವಿಶ್ವೇಶ್ವರ ನಗರ, ಮೈಸೂರು–೮

ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

೧. ಡಾ|| ದೇ. ಜವರೇಗೌಡ
ವಿಶ್ರಾಂತ–ಕುಲಪತಿಗಳು
'ಕಲಾ ನಿಲಯ', ಕಾಳಿದಾಸ ರಸ್ತೆ
ಜಯಲಕ್ಷ್ಮೀಪುರಂ, ಮೈಸೂರು–೫೭೦೦೧೨

೨. ಸಿ. ನಾಗಣ್ಣ, ಪ್ರಾಧ್ಯಾಪಕರು
ಇಂಗ್ಲೀಷ್ ವಿಭಾಗ
ಮಹಾರಾಜ ಕಾಲೇಜು
ಮೈಸೂರು

೩. ಹಂಸ ಐತಾಳ
೬೧೧, 'ಚಂದನ'
ಏಳನೆಯ ಕ್ರಾಸ್, ಅನಿಕೇತನ ರಸ್ತೆ, ಕುವೆಂಪುನಗರ
ಮೈಸೂರು–೫೭೦ ೦೨೩

೪. ಎಸ್. ಆರ್. ಪಾಟೀಲ
ಸಾರ್ಟಿಂಗ್ ಕಛೇರಿ
ಆರ್.ಎಂ.ಎಸ್.
ಹೊಸಪೇಟೆ–೬೮೩ ೨೦೧

೫. ಟಿ. ಎಸ್. ಲಲಿತ
ನಂ. ೬೦೨, ಮೊದಲನೆ ಮಹಡಿ
೧೭ ನೇ ಮೇನ್, ಸರಸ್ವತೀಪುರ
ಮೈಸೂರು–೫೭೦ ೦೦೯

೬. ಗ. ನಾ. ಭಟ್ಟ
ಶ್ರೀ ಕಾವೇರಿ ಶಾಲೆ, ಆದಿಚುಂಚನಗಿರಿ ರಸ್ತೆ,
ಕೆ. ಬ್ಲಾಕ್, ಕುವೆಂಪುನಗರ
ಮೈಸೂರು–೫೭೦ ೦೨೩

೭. ಕೆ. ಕೇಶವಮೂರ್ತಿ
ಪ್ರಾಂಶುಪಾಲರು
ಸ. ಪ. ಪೂ. ಕಾಲೇಜು
ಚನ್ನರಾಯಪಟ್ಟಣ
ಹಾಸನ ಜಿಲ್ಲೆ

೮. ಡಾ|| ಸ. ಜ. ನಾಗಲೋಟಿ ಮಠ
ಡೈರೆಕ್ಟರ್
ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್
ಹುಬ್ಬಳ್ಳಿ-೫೮೦೦೨೨

೯. ಎ. ಪಿ. ಚಂದ್ರಶೇಖರ
'ಇಂದ್ರಪ್ರಸ್ಥ' ಸಾವಯುವ ಫಾರ್ಮ್ ಮತ್ತು ನರ್ಸರಿ
ಕಳಲವಾಡಿಗ್ರಾಮ, ಉದ್ಬೂರು ಅಂಚೆ
ಮೈಸೂರು-೫೭೦ ೦೦೭

೧೦. ಶ್ರೀಪಾದ ಭಟ್
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ
ಮೈಸೂರು-೫೭೦ ೦೦೬

೧೧. ಸಾತನೂರು ದೇವರಾಜ್
೯೯೨, ೯ನೇ ಮುಖ್ಯರಸ್ತೆ
ಮೊದಲನೆಯ ಅಡ್ಡ ರಸ್ತೆ, ವಿವೇಕಾನಂದ ನಗರ
ಮೈಸೂರು

೧೨. ಜಿ. ಟಿ. ನಾರಾಯಣರಾವ್
ನಂ. ೮, 'ಅತ್ರಿ' ಕಾಮಾಕ್ಷಿ ಆಸ್ಪತ್ರೆ ರಸ್ತೆ,
ಸರಸ್ವತೀಪುರ
ಮೈಸೂರು-೫೭೦ ೦೦೯

Reg. No. KRNN.29 / WPP 6

LICENCE No. 21
LICENCED TO POST WITH PAYMENT



Edited by Chandrashekhararadhya, Printed by M. Krishnappa
Printed & Published by Karnataka State Adult Education Council,
5/1, Vinoba Road, Manasa Gangothri, Mysore-570 006.

Phone : 512485